ರಂಜನ ಬೋಧನ ಪ್ರಚೋದನೆ

ಗೌರಿ ಲಂಕೇಶ್

ಏಪ್ರಿಲ್ 2, 2008 ರೂ. 12/-



ಗೂಢಚರ್ಯೆಯನ್ನು ಶಿಕ್ಷಿಸಿ ಸರಬ್‌ಜಿತ್‌ನನ್ನು ರಕ್ಷಿಸಿ

ಬಿಜೆಪಿ ದೌರ್ಜನ್ಯ ದಲಿತರ ಬೆತ್ತಲೆ ಮೆರವಣಿಗೆ



ರಿಯಲ್ ಎಸ್ಟೇಟ್ ರಾಣಿಯ ಇನ್ನೊಂದು ಮುಖ

ಯಾಮಾರಿದ್ದು ಟಿವಿ ನೈನಾ? ಬೆಂಗಳೂರು ಪೊಲೀಸರಾ?



ವಿನಾಶಕಾಲಕ್ಕೆ ರಾಯರೆಡ್ಡಿಗೆ ವಿಪರೀತ ಬುದ್ಧಿ!




ಕಾರಜೋಳನ ತಂತ್ರ:

ಮುಧೋಳ ಸೇಲ್ ನಾಗರಾಣ ಖರೀದಿ!

ಗೂಢಚರ್ಯೆಯನ್ನು ಶಿಕ್ಷಿಸಿ ಸರಬ್‌ಜಿತ್‌ನನ್ನು ರಕ್ಷಿಸಿ

ಭಾರತೀಯ ಸರಬ್‌ಜಿತ್ ಸಿಂಗ್‌ಗೆ ಪಾಕಿಸ್ತಾನದ ಸುಪ್ರೀಮ್ ಕೋರ್ಟು ಗೂಢಚರ್ಯೆ ಮತ್ತು ಬಾಂಬ್‌ದಾಳಿ ಆರೋಪದ ಮೇಲೆ ಗಲ್ಲು ಶಿಕ್ಷೆ ವಿಧಿಸಿತ್ತಷ್ಟೆ. 1990ರಲ್ಲಿ ಬಂಧನಕ್ಕೊಳಗಾದ ಸರಬ್‌ಜಿತ್ ಕಳೆದ 18 ವರ್ಷಗಳಿಂದಲೂ ಜೈಲುವಾಸ ಅನುಭವಿಸುತ್ತಿದ್ದಾನೆ. ಮೊನ್ನೆ ಆತನ ಗಲ್ಲು ಶಿಕ್ಷೆಯನ್ನು ರದ್ದುಗೊಳಿಸಬೇಕೆಂದು ಮಾಡಿದ ಮನವಿಯನ್ನು ಪಾಕಿಸ್ತಾನದ ಅಧ್ಯಕ್ಷ ಮುಷರಫ್ ತಿರಸ್ಕರಿಸಿ ಏಪ್ರಿಲ್ ಒಂದಕ್ಕೆ ಗಲ್ಲು ಶಿಕ್ಷೆಯನ್ನು ಜಾರಿಗೊಳಿಸಬೇಕೆಂದು ಬ್ಲಾಕ್ ವಾರಂಟ್ ಜಾರಿಯಾಗಿತ್ತು, ಆದರೆ ಸರಬ್‌ಜಿತ್‌ನನ್ನು ಉಳಿಸಿಕೊಳ್ಳಲು ಅವರ ಕುಟುಂಬ ವರ್ಗ ನಡೆಸಿದ ಸತತ ಪ್ರಯತ್ನವು ಭಾರತ ಸರ್ಕಾರದ ಮೇಲೆ ಒತ್ತಡವನ್ನು ಹೇರಿತ್ತಲ್ಲದೆ, ಈ ಪ್ರಕರಣದಲ್ಲಿರುವ ರಾಷ್ಟ್ರಪ್ರೇಮದ ರಾಜಕಾರಣದ ಅವಕಾಶವನ್ನು ಮನಗಂಡ ರಾಜಕೀಯ ಪಕ್ಷಗಳು ಸದನದಲ್ಲಿ ಮಾಡಿದ ಗದ್ದಲವೂ ಸೇರಿಕೊಂಡು ಅಂತಿಮವಾಗಿ ಸರಬ್‌ಜಿತ್ ಸಿಂಗ್‌ನ ಗಲ್ಲು ಶಿಕ್ಷೆ ರದ್ದಾಗದಿದ್ದರೂ ಅದನ್ನು ಏಪ್ರಿಲ್ 30 ರ ತನಕ ಮುಂದೂಡಲಾಗಿದೆ. ಆದರೆ ಅದರರ್ಥ ಸರಬ್‌ಜಿತ್‌ಗೆ ಗಲ್ಲು ಶಿಕ್ಷೆ ರದ್ದಾಗುತ್ತದೆ ಎಂದೇನಲ್ಲ. ಏಪ್ರಿಲ್ 30 ಬಹಳ ದೂರವೇನಿಲ್ಲ. ಇದು ಚುನಾವಣಾ ವರ್ಷವಾಗಿರುವುದರಿಂದ 'ಸಾಲ ಮನ್ನಾ'ದಂತ ಹುಸಿ ಜನಪ್ರಿಯ ಯೋಜನೆಯನ್ನು ಕಾಂಗ್ರೆಸ್ ಜಾರಿಗೊಳಿಸಿದೆ. ಇದನ್ನು ರಾಜಕೀಯವಾಗಿ ಎದುರಿಸಲು ಬಿಜೆಪಿ ಮತ್ತಿತರ ಪಕ್ಷಗಳು 'ಗಲ್ಲು ಮನ್ನಾ'ಗೆ ಒತ್ತಡ ಹೇರುತ್ತಿವೆ. ಇದರಲ್ಲಿ ಅವುಗಳ ರಾಜಕೀಯ ಅವಕಾಶ ತಂತ್ರ ನಿಚ್ಚಳವಾಗಿದೆ. ಹಾಗಾದರೂ ಸರಬ್‌ಜಿತ್‌ಗೆ ನೀಡಿರುವ ಶಿಕ್ಷೆ ರದ್ದಾದರೆ ತಪ್ಪೇನಿಲ್ಲ.



ಸರಬ್‌ಜಿತ್ ಸಿಂಗ್ ಮೂಲಭೂತವಾಗಿ ಪಂಜಾಬಿನ ಗಡಿಭಾಗದಲ್ಲಿ ವ್ಯವಸಾಯ ಮಾಡಿಕೊಂಡಿದ್ದ ಒಬ್ಬ ಸಾಮಾನ್ಯ ರೈತ. ಅಕಸ್ಮಾತ್ ಆಗಿ ಆತ ಪಾಕಿಸ್ತಾನದ ಗಡಿಯೊಳಗೆ ಪ್ರವೇಶಿಸಿದ್ದರಿಂದ ಆತನನ್ನು ಪಾಕಿಸ್ತಾನ ಸರ್ಕಾರ ಬಂಧಿಸಿತು. ಅದು 1990ರಲ್ಲಿ ಕರಾಚಿಯಲ್ಲಿ ನಡೆದ ಬಾಂಬ್ ಬ್ಲಾಸ್ಟ್‌ಗಳಿಗೆ ಕಾರಣವಾದ ಮನ್‌ಜಿತ್‌ಸಿಂಗ್ ಎಂಬ ಭಾರತೀಯ ಗೂಢಾಚಾರಿಗೆ ಹುಡುಕುತ್ತಿತ್ತು. ಸರಬ್‌ಜಿತ್ ಸಿಂಗನೇ ಮನ್‌ಜಿತ್ ಸಿಂಗ್ ಎಂದು ತಪ್ಪಾಗಿ ಭಾವಿಸಿ ಆತನನ್ನು ಬಂಧಿಸಿ ಗೂಢಚರ್ಯೆ ಮತ್ತು ಬಾಂಬ್ ಬ್ಲಾಸ್ಟ್ ಆರೋಪವನ್ನು ಹೊರಿಸಲಾಗಿದೆ ಹೊರತು ಸರಬ್‌ಜಿತ್ ಒಬ್ಬ ನಿಷ್ಪಾಪಿ ನಿರಪರಾಧಿ ಎಂದು ಆತನ ಕುಟುಂಬ ವರ್ಗ ಮತ್ತು ಭಾರತ ಸರ್ಕಾರ ಪ್ರತಿಪಾದಿಸುತ್ತಿದೆ. ಆದರೆ ಪಾಕಿಸ್ತಾನದ ಕೋರ್ಟುಗಳಲ್ಲಿ ಆತನ ಮುಗ್ಧತನ ಸಾಬೀತಾಗದೆ ಶಿಕ್ಷೆ ಕಾಯಂ ಆಗಿದೆ. ಸರಬ್‌ಜಿತ್ ಸಿಂಗ್ ಭಾರತೀಯ ಗೂಢಾಚಾರಿ ಹೌದೋ ಅಲ್ಲವೋ? ಆತನ ಮೇಲೆ ಹೊರಿಸಲಾಗಿರುವ ಬಾಂಬ್ ಬ್ಲಾಸ್ಟ್ ಆರೋಪ ಸತ್ಯವೋ ಅಲ್ಲವೋ?

ಚಾರ್ವಾಕ

ಶಿವಸುಂದರ್

ಸರಬ್‌ಜಿತ್‌ಗೆ ಗಲ್ಲು ಕಾಯಂ ಆಗುವ ಕೆಲದಿನಗಳ ಮುಂಚೆ ಗೂಢಚರ್ಯೆಯ ಆರೋಪದ ಮೇಲೆ 35 ವರ್ಷಗಳಿಂದ ಪಾಕಿಸ್ತಾನದ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಮತ್ತು ಗಲ್ಲುಶಿಕ್ಷೆಗೆ ಗುರಿಯಾಗಿದ್ದ ಮತ್ತೊಬ್ಬ ಭಾರತೀಯ ಕಾಶ್ಮೀರ್‌ಸಿಂಗ್‌ನನ್ನು ಪಾಕಿಸ್ತಾನದ ಅಧ್ಯಕ್ಷ ಮಾಫ್ ಮಾಡಿ ಬಿಡುಗಡೆಗೊಳಿಸಿದ್ದರು. ಆತನ ಬಿಡುಗಡೆಗೂ ಒತ್ತಡ ಹೇರುತ್ತಿದ್ದ ಭಾರತ ಸರ್ಕಾರ ಆತ ಭಾರತೀಯನಾಗಿದ್ದರೂ ಭಾರತ ಸರ್ಕಾರದ ಗೂಢಾಚಾರಿಯಲ್ಲವೆಂದೂ, ನಿರಪರಾಧಿಯೆಂದೂ ವಾದಿಸಿ ಒತ್ತಡ ಹೇರಿತ್ತು. ಆದರೆ ಕಾಶ್ಮೀರ್‌ಸಿಂಗ್ ಭಾರತಕ್ಕೆ ಬಂದ ಮರುದಿನವೇ ಪತ್ರಿಕಾ ಗೋಷ್ಠಿ ನಡೆಸಿ ತಾನು ಭಾರತದ ಸೇನೆಯ ಪರವಾಗಿ ಗೂಢಚರ್ಯೆ ಮಾಡಲೆಂದೇ ಪಾಕಿಸ್ತಾನಕ್ಕೆ ಹೋಗಿದ್ದಾಗಿ ಘೋಷಿಸಿಬಿಟ್ಟರು. ಇದು ಭಾರತದಲ್ಲಿ ಈ ವಯಸ್ಸಿನಲ್ಲೂ ಕಾಶ್ಮೀರ್ ಸಿಂಗ್‌ಗೆ ಇರುವ ದೇಶಭಕ್ತಿಯನ್ನು ಎತ್ತಿ ತೋರಿಸುವ ಅಂಶವಾಗಿ ಪ್ರಚಾರಗೊಂಡಿತಾದರೂ ಆತನನ್ನು ನಿರಪರಾಧಿ ಎಂದು ಬಿಡುಗಡೆ ಮಾಡಿದ ಪಾಕಿಸ್ತಾನದ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತು. ಅದೇ ರೀತಿ ಭಾರತ ಸರ್ಕಾರದ ವಾದಗಳ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವಂತೆ ಮಾಡಿತು. ಇದೇ ಸಮಯದಲ್ಲಿ ಭಾರತ-ಪಾಕಿಸ್ತಾನದ ನಡುವಿನ ಕ್ರಿಕೆಟ್ ಮ್ಯಾಚು ನೋಡಲು ಬಂದು ವೀಸಾ ಅವಧಿ ಮುಗಿದರೂ ಭಾರತದಲ್ಲೇ ಉಳಿದ ಕಾರಣಕ್ಕೆ ಬಂಧಿತನಾಗಿದ್ದ ಖಲೀದ್ ಮೊಹಮ್ಮದ್ ಎಂಬ ಪಾಕಿಸ್ತಾನದ ಪ್ರಜೆ ಗುರ್‌ಗಾಂವ್ ಜೈಲಿನಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಮರಣಹೊಂದಿದ್ದು ಮತ್ತು ಆತನ ದೇಹವು ಪಾಕಿಸ್ತಾನಕ್ಕೆ ಹೋದಾಗ ಆತನ ಮೈಮೇಲೆ ಚಿತ್ರಹಿಂಸೆಯ ಗುರುತುಗಳಿದ್ದವು ಎಂದು ಮಾಧ್ಯಮಗಳು ಪ್ರಚಾರ ಮಾಡಿದ್ದು ಸಹ ಭಾರತೀಯ ಗೂಢಾಚಾರಿಯೆಂಬ ಆರೋಪವನ್ನು ಹೊತ್ತಿರುವ ಸರಬ್‌ಜಿತ್ ಬಿಡುಗಡೆಯನ್ನು ಕ್ಲಿಷ್ಟಗೊಳಿಸಿದೆ.

ಹಾಗೆ ನೋಡಿದರೆ ಇದು ಕೇವಲ ಒಬ್ಬ ಸರಬ್‌ಜಿತ್ ಸಿಂಗನ ಪ್ರಶ್ನೆಯೂ ಅಲ್ಲ. ಒಬ್ಬ ಖಲೀದ್ ಮೊಹಮ್ಮದ್‌ನ ಪ್ರಶ್ನೆಯೂ ಅಲ್ಲ. ಪಾಕಿಸ್ತಾನದ ಜೈಲುಗಳಲ್ಲಿ ಕನಿಷ್ಟ ನೂರಾರು ಭಾರತೀಯರನ್ನು ಗೂಢಚರ್ಯೆ ಮತ್ತಿತರ ಕಾರಣಗಳ ಮೇಲೆ ವಿಚಾರಣೆ ಇಲ್ಲದೆ ಬಂಧಿಸಿಡಲಾಗಿದೆ ಎಂಬುದೂ ಸುಳ್ಳಲ್ಲ. ಅದೇ ರೀತಿ ಸಹಸ್ರಾರು ಪಾಕಿಸ್ತಾನಿ ಪ್ರಜೆಗಳು ಭಾರತದಲ್ಲಿ ಮಿಸ್ಸಿಂಗ್ ಆಗಿದ್ದಾರೆ ಎಂಬುದೂ ಸುಳ್ಳಲ್ಲ. ಇವರೆಲ್ಲರ ಮೇಲೂ ಗೂಢಚರ್ಯೆಯ ಆರೋಪ ಮತ್ತು ಹತ್ಯಾ ಆರೋಪಗಳಿವೆ. ಭಾರತದಲ್ಲಿ ಬಂಧಿತರಾಗಿರುವ ಅಥವಾ ಲೋಕದಿಂದಲೇ ಮಿಸ್ಸಿಂಗ್ ಆಗಿರುವ ಪಾಕಿಸ್ತಾನಿ ಪ್ರಜೆಗಳ ಮೇಲೆ ಟೆರರಿಸಂ ಆರೋಪವೂ ಇರುತ್ತದೆ. ಆದರೆ ಪಾಕಿಸ್ತಾನದ ಗೂಢಚಾರಿ ಭಾರತದಲ್ಲಿ ಟೆರರಿಸ್ಟನಾದರೆ ಪಾಕಿಸ್ತಾನದಲ್ಲಿ ದೇಶಭಕ್ತ, ದೇಶಕ್ಕಾಗಿ ಅಂದರೆ ಆ ದೇಶದ ಜನತೆಯ ಕಲ್ಪಿತ ಪ್ರತಿಷ್ಠೆಗಾಗಿ ಬಲಿದಾನ ಮಾಡುತ್ತಿರುವ ಯೋಧ. ಅದೇರೀತಿ ಕಾಶ್ಮೀರ್ ಸಿಂಗ್, ಸರಬ್‌ಜಿತ್ ಸಿಂಗ್‌ಗಳು ಭಾರತದಲ್ಲಿ ಹೀರೋಗಳೇ ಆಗಿದ್ದರೂ ಪಾಕಿಸ್ತಾನದ ದೃಷ್ಟಿಯಲ್ಲಿ ದ್ರೋಹಿಗಳು ಮತ್ತು ಅಪರಾಧಿಗಳೇ! ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳೆರಡು ಮತ್ತೊಂದು ದೇಶದ ಅಸ್ತಿತ್ವವನ್ನು ಅಸ್ಥಿರಗೊಳಿಸಲು ಗೂಢಚರ್ಯೆ ಮತ್ತಿತರ ವಿಧಾನವನ್ನು ಬಳಸುತ್ತಿರುವುದು ಸಹ ವಾಸ್ತವವೇ! ಹೀಗಾಗಿ ಖಲೀದ್ ಮೊಹಮ್ಮದ್ (ಈತ ಪಾಕಿಸ್ತಾನದ ಗೂಢಚಾರಿಯಾಗಿದ್ದನೆಂದು ಭಾರತ ಸರ್ಕಾರವು ಈವರೆಗೆ ಅಧಿಕೃತವಾಗಿ ಹೇಳಿಲ್ಲವಾದರೂ ಅನಧಿಕೃತವಾಗಿ ಈ ಬಗೆಯ ನೂರಾರು ಪಾಕಿಸ್ತಾನಿ ಪ್ರಜೆಗಳನ್ನು ಗೂಢಾಚಾರಿಗಳೆಂದೇ ನಡೆಸಿಕೊಳ್ಳುತ್ತಿದೆ) ಅಥವಾ ಸರಬ್‌ಜಿತ್‌ಸಿಂಗರ ನಿರಪರಾಧಿತ್ವ. ಅಥವಾ ಅಪರಾಧವನ್ನು ಮಾನವೀಯ ನೆಲೆಗಟ್ಟಿನಲ್ಲಿ ನೋಡುವ ಮನಸ್ಥಿತಿ ಎರಡು ದೇಶಗಳ ಸಾಮೂಹಿಕ ರಾಷ್ಟ್ರಪ್ರಜ್ಞೆಗೆ ಇರುವುದಿಲ್ಲ.



ರಾಷ್ಟ್ರಭಕ್ತಿ ಇನ್ನಿತ್ಯಾದಿಗಳನ್ನು ಮರೆತು ಸಭರಬ್‌ಜಿತ್ ಸಿಂಗ್ ಆಗಲೀ, ಖಲೀದ್ ಮೊಹಮ್ಮದ್ ಆಗಲೀ ತಮ್ಮದಲ್ಲದ ಕಾರಣಗಳಿಗೆ ಬಲಿಯಾಗುತ್ತಿರುವುದನ್ನು ಅಥವಾ ಅವರುಗಳ ಕುಟುಂಬದ ಪರಿಸ್ಥಿತಿ ಇನ್ನಿತರ ಮಾನವೀಯ ನೆಲೆಗಟ್ಟಿನಲ್ಲಿ ಯೋಚಿಸಿದಾಗ ಅಂದರೆ ಮನುಷ್ಯರಂತೆ ಯೋಚಿಸಿದಾಗ ಪಾಕಿಸ್ತಾನದ ಮತ್ತು ಭಾರತದ ಬಹುಸಂಖ್ಯಾತ ಜನತೆ ಸರಬ್‌ಜಿತ್‌ಸಿಂಗ್‌ನನ್ನು ಬಿಡುಗಡೆ ಮಾಡಬೇಕೆಂದೇ ಯೋಚಿಸುತ್ತಾರೆ. ಆದರೆ ರಾಷ್ಟ್ರಪ್ರಜ್ಞೆಯ ಭೂತ ಆವರಿಸಿದೊಡನೆ ಈ ಮಾನವೀಯತೆಯ ನೆಲೆಗಟ್ಟೆಲ್ಲಾ ನಾಶವಾಗಿ ರಾಷ್ಟ್ರಪ್ರೇಮವೆಂಬ ಅಮೂರ್ತ ಸಾಮೂಹಿಕ ಪ್ರತಿಷ್ಠೆ ಅದೇ ಮನುಷ್ಯರನ್ನು ದಯೆ ದಾಕ್ಷಿಣ್ಯವಿಲ್ಲದ ಕ್ರೂರಿಗಳನ್ನಾಗಿ ಮಾಡುತ್ತದೆ. ಎರಡು ದೇಶಗಳ ಆಳುವ ವರ್ಗಗಳು ಮತ್ತು ಪ್ರಭುತ್ವಗಳು ಸಹ ಜನತೆಯಲ್ಲಿ ಇದೇ ಬಗೆಯ ಸಾಮೂಹಿಕ ಸನ್ನಿಯನ್ನು ಸಹಜ ಮನುಷ್ಯ ಬದುಕನ್ನು ಮತ್ತು ಮನುಷ್ಯತ್ವವನ್ನು ಮರೆಸುವ ಅಮೂರ್ತ ರಾಷ್ಟ್ರಭಕ್ತಿಯನ್ನು ಕೆರಳಿಸಲೆಂದೇ ಪ್ರಯತ್ನಿಸುತ್ತಿರುತ್ತವೆ.

ರಾಷ್ಟ್ರ ಪ್ರಭುತ್ವಗಳ ಹುಟ್ಟಿನ ತಳಹದಿಯಲ್ಲಿ ಮನುಷ್ಯತ್ವವನ್ನು ಮರೆಸುವ ಈ ಬಗೆಯ ದ್ವೇಷಾಧಾರಿತ ನೆಲೆಯೊಂದು ಇದ್ದೇ ಇರುತ್ತದೆ. ಅದರಲ್ಲೂ ಭಾರತ ಮತ್ತು ಪಾಕಿಸ್ತಾನವೆಂಬ ರಾಷ್ಟ್ರಪ್ರಭುತ್ವಗಳ ಹುಟ್ಟಿನಲ್ಲಿ ಕಲ್ಪಿತ ದ್ವೇಷವು ಪ್ರಧಾನ ನೆಲೆಯೂ

(6ನೇ ಪುಟಕ್ಕೆ)

No Comments



"ಭ್ರಷ್ಟಾಚಾರ ನಿರ್ಮೂಲನೆ ಮಾಡುವುದು ಅಸಾಧ್ಯದ ಮಾತು. ಇದಕ್ಕೆ ನಿಯಂತ್ರಣ ಹೇರಬಹುದಷ್ಟೆ."

-ಸಂತೋಷ್ ಹೆಗ್ಡೆ ಲೋಕಾಯುಕ್ತರು

"ವೂಲ್ಮರ್ ಒಬ್ಬ ಉತ್ತಮ ವ್ಯಕ್ತಿಯಾಗಿದ್ದರು. ಆದರೆ ಅವರು ಪಾಕಿಸ್ತಾನ ಕ್ರಿಕೆಟ್ಟಿಗೆ ನೀಡಿದ ಕೊಡುಗೆ ಅತ್ಯಲ್ಪ."

-ಜಾವೆದ್ ಮಿಯಾಂದಾದ್

"ಸಂಪುಟ ಸಭೆಯಲ್ಲಿ ಪಡಿತರ ಚೀಟಿ ಸಂಬಂಧ ನಡೆದ ಚರ್ಚೆಯ ವೇಳೆ ಶೇ.60 ರ ಮೇಲೆ ಪಡಿತರ ಚೀಟಿ ನೀಡಲು ಸಾಧ್ಯವಿಲ್ಲ ಎಂದು ಹೇಳಿದ ಯಡಿಯೂರಪ್ಪನವರೇ ಇಂದು ರಾಜಭವನದ ಮುಂದೆ ನಿಂತು ಪಡಿತರ ಚೀಟಿ ಹಂಚಿ ಎಂದು ದ್ವಂದ್ವ ನಿಲುವು ಪ್ರದರ್ಶಿಸುತ್ತಿದ್ದಾರೆ."

-ಹೆಚ್.ಡಿ.ಕುಮಾರಸ್ವಾಮಿ

"ಮೇ ತಿಂಗಳಲ್ಲಿ ಬಿಸಿಲಿರುತ್ತದೆ. ಆದ್ದರಿಂದ ಏಪ್ರಿಲ್‌ನಲ್ಲೇ ಚುನಾವಣೆಯಾಗಲಿ."

-ವೆಂಕಯ್ಯ ನಾಯ್ಡು



"ಭಾರತ ಸರ್ಕಾರ ಧಾರ್ಮಿಕ ಮೂಲಭೂತವಾದಿಗಳಿಗಿಂತ ಭಿನ್ನವಾಗಿಲ್ಲ."

ತಸ್ಲಿಮಾ ನಸ್ರೀನ್

"ವಿದೇಶದಲ್ಲಿ ಮಾಧ್ವಪೀಠ ಸ್ಥಾಪನೆಗೆ ನಮ್ಮ ವಿರೋಧವಿಲ್ಲ."

-ಪೇಜಾವರ ಸ್ವಾಮಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಬಿಜೆಪಿ ಇನ್ನು ಮುಸ್ಲಿಮರಿಗೆ ಅಸ್ಪೃಶ್ಯ ಅಲ್ಲ. ಅದ್ವಾನಿಯವರ ನಾಯಕತ್ವದಲ್ಲಿ ಅವರಿಗೆ ಸಮಸ್ಯೆ ಉಂಟಾಗಲಾರದು."

-ಶಾನವಾಜ್ ಹುಸೇನ್, ಬಿಜೆಪಿ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ



"ನನ್ನ ರಾಜ್ಯದ ನಾಗರಿಕರ ಗಾಯಗಳು ಆರಿವೆ. ಅವರೀಗ ಅಭಿವೃದ್ಧಿಯ ಫಲವನ್ನು ಅನುಭವಿಸುತ್ತಾ ಸುಖವಾಗಿದ್ದಾರೆ."

-ನರೇಂದ್ರ ಮೋದಿ

"ಬ್ರಾಹ್ಮಣರು ರಾಜಕೀಯವಾಗಿ ಸಂಘಟಿತರಾಗದಿದ್ದರೆ ಅಲ್ಪಸಂಖ್ಯಾತರಾಗುವ ಅಪಾಯವಿದೆ."

-ಜಾಫರ್ ಶರೀಫ್

"ಎಲ್.ಕೆ.ಅದ್ವಾನಿಯವರ 'ಮೈ ಲೈಫ್, ಮೈ ಕಂಟ್ರಿ' ಪುಸ್ತಕದ 50,000 ಪ್ರತಿಗಳು ಬಿಡುಗಡೆಯಾಗುವ ಮುನ್ನವೇ ಖರ್ಚಾಗಿದೆ."

-ವಿಜಯ ಕರ್ನಾಟಕದಲ್ಲಿ ಒಂದು ಸುದ್ದಿ



"ಇದು ಭಯೋತ್ಪಾದನಾ ವಿರೋಧಿ ಯುದ್ಧ. ಈ ಯುದ್ಧದಲ್ಲಿ ಅಮೆರಿಕವು ಗೆಲ್ಲಲೇ ಬೇಕು. ಇರಾಕ್ ಯುದ್ಧವು ಈಗಾಗಲೇ ಯಶಸ್ವಿಯಾಗಿದೆ."-

-ಜಾರ್ಜ್ ಬುಷ್

"ನ್ಯೂಕ್ಲಿಯರ್ ಡೀಲ್ ಮುಂದುವರೆದರೆ ಖಂಡಿತಾ ಈ ಸರ್ಕಾರ ಮುಂದುವರೆಯುವುದಿಲ್ಲ."

-ಪ್ರಕಾಶ್ ಕಾರಟ್

ಈ ಭಾಷಣಕ್ಕೆ ಪೊಲೀಸ್ ರಕ್ಷಣೆ!

"ಗಾಂಧಿ ದೇಶ ವಿಭಜನೆಯ ರೂವಾರಿ. ಗಾಂಧಿಯೊಬ್ಬ ರಾಷ್ಟ್ರದ್ರೋಹಿ"

-ಪ್ರಮೋದ್ ಮುತಾಲಿಕ್


ಕಾಂಗ್ರೆಸ್ ಅರ್ಧಕ್ಕೆ ಕುಸಿದಿತ್ತು ಈಗ!



"ಕಳೆದ ಚುನಾವಣೆಯಲ್ಲಿ ಅರ್ಧಕ್ಕೆ ನಿಲ್ಲಿಸಿದ ಕೆಲಸವನ್ನು ಪೂರ್ತಿ ಮುಗಿಸಲು ಬಂದಿದ್ದೇನೆ."

-ಎಸ್.ಎಂ. ಕೃಷ್ಣ

ಭಾರತದ ದಾಸ್ಯಕ್ಕೆ ಇದಕ್ಕಿಂತ ಪುರಾವೆ ಬೇಕೆ?



"ಅಮೆರಿಕದೊಡನೆ ಭಾರತ ಮಾಡಿಕೊಂಡಿರುವ ಅಣು ಒಪ್ಪಂದದಲ್ಲಿ ಯುಪಿಎ ಸರ್ಕಾರ ಹಿಂದಿನ ನೀತಿಗಳನ್ನು ಮುಂದುವರೆಸಿದೆಯೇ ವಿನಃ ಬದಲಾಯಿಸಿಲ್ಲ, ಹೆಚ್ಚೆಂದರೆ ಕೆಲವು ತಿದ್ದುಪಡಿಗಳನ್ನು ಮಾಡಿಕೊಂಡಿದ್ದೇವೆ ಅಷ್ಟೆ. ಅಂಥ ತಿದ್ದುಪಡಿಗಳು ಅಗತ್ಯವಾಗಿರುತ್ತವೆ. ಉದಾಹರಣೆಗೆ ಅಲಿಪ್ತ ಚಳವಳಿ ಜಾರಿಯಲ್ಲಿದ್ದಾಗ ವಿಶ್ವ ವಾಣಿಜ್ಯ ಒಪ್ಪಂದ ಅಸ್ತಿತ್ವದಲ್ಲಿರಲಿಲ್ಲ. ಈಗ ವಿದೇಶಾಂಗ ನೀತಿಗಳನ್ನು ರೂಪಿಸಿಕೊಳ್ಳಬೇಕಾದರೆ ನಾವು ಇದನ್ನು ಗಮನಿಸದೇ ಇರಲು ಸಾಧ್ಯವೇ?"

-ಪ್ರಣಬ್ ಮುಖರ್ಜಿ

ದಶಕಗಳ ಹಿಂದೆ ಸ್ವಾರ್ಥ, ಈಗ ಜೊತೆಗೆ ದುಷ್ಟತನ!

"ದಶಕಗಳ ಹಿಂದೆ ನನ್ನ ಮನಸ್ಸು ಪಕ್ವಗೊಂಡಿರಲಿಲ್ಲ, ನಾನು ಸಂಕುಚಿತ ಮನಸ್ಸಿನವನಾಗಿದ್ದೆ. ನನ್ನಲ್ಲಿ ಸ್ವಾರ್ಥ ತುಂಬ ತುಳುಕುತ್ತಿತ್ತು."

-ವಿ.ಎಸ್. ನೈಪಾಲ್, ನೊಬೆಲ್ ಪ್ರಶಸ್ತಿ ವಿಜೇತ ಲೇಖಕ

ಇವರು ಮಾನವ ಹಕ್ಕು ಅಯೋಗದ ಅಧ್ಯಕ್ಷರು!

"ಹೆಣ್ಣು ಮಕ್ಕಳು ಪಬ್‌ಗಳಿಗೇಕೆ ಹೋಗಬೇಕು? ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ಆರೋಗ್ಯ ಸರಿ ಇಲ್ಲದ ಸಂದರ್ಭದಲ್ಲಿ ಅಥವಾ ಕೆಲಸಕ್ಕೆ ಹೋಗುವಾಗ ರಾತ್ರಿ ವೇಳೆ ಹೊರಗೆ ಹೋದರೆ ಪರವಾಗಿಲ್ಲ, ಆದರೆ ಪಬ್‌ಗಳಿಗೆ ಹೋಗುವುದು ಸರಿಯಲ್ಲ."

-ಜಸ್ಟೀಸ್ ಎಸ್.ಆರ್. ನಾಯಕ್, ಮಾನವ ಹಕ್ಕು ಆಯೋಗದ ಅಧ್ಯಕ್ಷರು

ಅಪರೂಪದ ಆತ್ಮ ವಿಮರ್ಶೆ




"ರಾಜಕಾರಣದಲ್ಲಿ ಶಕ್ತಿ ಇದೆಯಾದರೂ ಉತ್ತಮ ಅಭ್ಯರ್ಥಿಗಳು ಆಯ್ಕೆಯಾಗದಿದ್ದರೆ ಆ ಶಕ್ತಿ ನಿಷ್ಪ್ರಯೋಜಕವಾಗುತ್ತದೆ."

-ತೇಜಸ್ವಿನಿ ಗೌಡ

ಲಂಕೇಶ್

ಬಿಕುಟಿ ಇದು ಬಹಳಷ್ಟು ಜನರ ಗಮನಕ್ಕೆ ಬಂದಿರಲಾರದೆಂದು ಭಾವಿಸಿ ಒಂದು ಪುಟ್ಟ ಟಿಪ್ಪಣಿಯೊಂದಿಗೆ ಪ್ರಾರಂಭಿಸುತ್ತಿದ್ದೇನೆ.

ಕಳೆದ ಒಂದೆರಡು ತಿಂಗಳುಗಳಿಂದ ನ್ಯಾ. ಎಸ್.ಆರ್. ನಾಯಕ್ ಮತ್ತು ನ್ಯಾ. ಸಿರಿಯಾಕ್ ಜೋಸೆಫ್‌ರವರು ಮಹಿಳೆಯರು ಯಾವ ರೀತಿ 'ಸುಸಂಸ್ಕೃತ' ಜೀವನ ನಡೆಸಬೇಕೆಂದು, ಎಂತಹ ಬಟ್ಟೆ ಧರಿಸಬೇಕೆಂದು, ಯಾವ ಕೆಲಸಕ್ಕೆ ಹೋಗಬಹುದೆಂದು, ಯಾವ ಹೊತ್ತಿನಲ್ಲಿ ಹೊರಗಡೆ ತಿರುಗಾಡಬಾರದೆಂದು ಹಲವಾರು ಸಲಹೆಗಳನ್ನು ಕೊಡುತ್ತಿದ್ದಾರೆ.



ಅವರಿಬ್ಬರ ಇಂತಹ ಎಲ್ಲ ಉದರಿ ಸಲಹೆಗಳ ಒಟ್ಟು ಸಾರಾಂಶ ನಮ್ಮ ಸಮಾಜದ ಮಹಿಳೆಯರಿಗೆ ಒಂದು ಹೊಸ 'ನೀತಿ ಸಂಹಿತೆ'ಯನ್ನೇ ನೀಡುವ (ಅಥವಾ ವಿಧಿಸುವ) ಪ್ರಯತ್ನಗಳೇ ಆಗಿವೆ ಅನ್ನಿಸುತ್ತದೆ.

ಅಂದಹಾಗೆ ಶ್ರೀಯುತ ಎಸ್.ಆರ್. ನಾಯಕರು ಹಾಲಿ ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿದ್ದಾರೆ. ಅದಕ್ಕೂ ಮುನ್ನ ಅವರು ಛತ್ತೀಸಗಢದ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ಅದೇ ರೀತಿ ಶ್ರೀಯುತ ಸಿರಿಯಾಕ್ ಜೋಸೆಫ್‌ರವರೂ ಈಗ ಕರ್ನಾಟಕ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದಾರೆ. ಅಂದರೆ ಇವರಿಬ್ಬರೂ ಮಹನೀಯರು ವಯಸ್ಸಿನಲ್ಲಿ ಹಿರಿಯರೂ ಹಾಗೂ ಅತ್ಯಂತ ಜವಾಬ್ದಾರಿಯುತ ಶಾಸನಬದ್ಧ ಸ್ಥಾನಗಳಲ್ಲಿ ಇರುವವರೂ ಆಗಿದ್ದಾರೆ. ಹಾಗಾಗಿ ಅವರು ಯಾವುದರ ಬಗ್ಗೆ ಮಾತನಾಡಿದರೂ-ಅದರಲ್ಲೂ ಶೋಷಣೆ, ಅತ್ಯಾಚಾರಕ್ಕೆ ಗುರಿಯಾಗಿರುವ ಮಹಿಳೆಯರ ಬಗ್ಗೆ ಮಾತನಾಡಿದರೆ-ಅವರ ಅಭಿಪ್ರಾಯಗಳಿಗೆ ಮಾಧ್ಯಮಗಳು ಸಾಕಷ್ಟು ಪ್ರಚಾರ ನೀಡುತ್ತವಲ್ಲದೆ, ಅವರ ಅಭಿಪ್ರಾಯಗಳಿಗೆ ಸಾಮಾಜಿಕ ಮಾನ್ಯತೆಯೂ ಸಿಕ್ಕಿಬಿಡುತ್ತದೆ.

ಇತ್ತೀಚೆಗೆ 'ಹೆಣ್ಣು ಭ್ರೂಣ ಹತ್ಯೆ' ಕುರಿತಾದ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ನ್ಯಾ. ನಾಯಕರು, "ಮಹಿಳೆಯರೇಕೆ ಪಬ್‌ಗಳಿಗೆ ಹೋಗುತ್ತಾರೆ" ಎಂದು ಆಕ್ಷೇಪಿಸಿದ್ದಾರೆ. ಅಷ್ಟೇ ಅಲ್ಲದೆ "ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ಅಥವಾ ಆರೋಗ್ಯದ ಕಾರಣಕ್ಕೆ ಇಲ್ಲವೇ ಕೆಲಸಕ್ಕೆ ಹೋಗುವ ಸಂದರ್ಭದಲ್ಲಿ ಮಹಿಳೆಯರು ರಾತ್ರಿ ವೇಳೆಯಲ್ಲಿ ಹೊರಕ್ಕೆ ಹೋದರೆ ಯಾರೂ ಆಕ್ಷೇಪ ಮಾಡುವುದಿಲ್ಲ" ಎಂದಿದ್ದಾರೆ (ಪ್ರಜಾವಾಣಿ, ಮಾರ್ಚ್ 22 ರ ಸಂಚಿಕೆ, ಪುಟ 4)

ಆದರೆ ಬೇರೆ ಸಂದರ್ಭಗಳೂ ಇರುತ್ತವಲ್ಲಾ?

ಸಂಜೆ ಕಾಲೇಜಿನಲ್ಲಿ ಓದುವವರು, ಸಿನಿಮಾ ನೋಡುವವರು, ನೆಂಟರಿಷ್ಟರನ್ನೋ ಸ್ನೇಹಿತರನ್ನೋ ಭೇಟಿಯಾಗುವವರು, ಮದುವೆ ರಿಸೆಪ್ಷನ್‌ಗಳಲ್ಲಿ ಭಾಗವಹಿಸುವವರು...... ಅವರೆಲ್ಲಾ ಏನು ಮಾಡಬೇಕು? ನಮ್ಮ ನಗರಗಳಲ್ಲಿನ ಸ್ಲಮ್‌ಗಳಲ್ಲಿ ಮತ್ತು ಗ್ರಾಮಗಳ ಗುಡಿಸಲುಗಳಲ್ಲಿ ವಾಸಿಸುವ ಲಕ್ಷಾಂತರ ಮಹಿಳೆಯರು ರಾತ್ರಿ ವೇಳೆ ನಿಸರ್ಗದ ಕರೆಗೆಂದೋ, ನಲ್ಲಿ ನೀರು ಹಿಡಿಯಲೆಂದೋ ಹೊರಗೆ ಹೋಗಬೇಕಾಗುತ್ತಲ್ಲಾ... ಅವರೇನು ಮಾಡಬೇಕು?

"ಪಬ್‌ಗಳಿಗೆ ಹೋಗಿ ಕುಡಿದಾಗ ಏನೇನಾಗುತ್ತದೆ ಎಂದು ಹೇಳಲು ಬರುವುದಿಲ್ಲ, ಮಹಿಳೆಯರು ಪಬ್‌ಗಳಿಗೆ ಹೋಗುವುದು ಸರಿಯಲ್ಲ" ಎಂದೂ ನ್ಯಾ ನಾಯಕರು ಅದೇ ಸಭೆಯಲ್ಲಿ ಹೇಳಿದ್ದಾರೆ.


ಅದು ನಿಜವೇ ಆದರೆ, ಅವರೇ ಹೇಳಿರುವಂತೆ "ಅತ್ಯುತ್ತಮ ವ್ಯಕ್ತಿಗಳೇ ಕುಡಿದಾಗ ಏನೆಲ್ಲಾ ಮಾಡುತ್ತಾರೆ" ಎಂಬುದೂ ನಿಜವೇ ಆದರೆ ಮಹಿಳೆಯರು ಪಬ್‌ಗಳಿಗೆ ಹೋಗಬಾರದೆಂದು ಹೇಳುವ ಬದಲಾಗಿ ಯಾರೂ ಪಬ್‌ಗಳಿಗೆ ಹೋಗಬಾರದಲ್ಲವೇ? ಎಲ್ಲಾ ಹೆಂಡದ ಅಂಗಡಿಗಳನ್ನು ಮುಚ್ಚಬೇಕಲ್ಲವೇ? ಮದ್ಯಪಾನವನ್ನು ನಿಷೇಧಿಸಬೇಕಲ್ಲವೆ?

ಅಂದಹಾಗೆ, ಸುಭಿಕ್ಷಾ ಎಂಬ BPO ಕೆಲಸಗಾತಿ ಯಾವ ಪಬ್ಬಿಗೂ ಹೋಗಿರಲಿಲ್ಲ, ನ್ಯಾ ನಾಯಕರೇ ಹೇಳಿರುವಂತೆ ಆಕೆ ಕೆಲಸಕ್ಕೆಂದೇ ತನ್ನ

ರಕ್ಷಣೆ ಎಂಬ ನೆಪ ದಮನಕ್ಕೆ ದಾರಿ

ಮನೆಯಿಂದ ಹೊರಬಿದ್ದಿದ್ದಳು. ಆದರೂ ಆಕೆ ಘೋರ ಅತ್ಯಾಚಾರಕ್ಕೆ ಬಲಿಯಾಗಿ ಕೊಲೆಯಾದಳು. ಆಕೆ ಯಾವ ತಪ್ಪು ಮಾಡಿದ್ದಳು? ಒಂದಿಷ್ಟು ಸುಖದ ಬದುಕಿಗೆ ಆಶಿಸಿ, ತನ್ನ ತಾಯಿಗೆ ನೆರವಾಗಬೇಕೆಂದು ಬಯಸಿ ಆಕೆ ರಾತ್ರಿ ಪಾಳಯದ ಕೆಲಸಕ್ಕೆ ಹೋಗಿದ್ದೇ ತಪ್ಪೇ?

ಅದು ಹಾಗಿರಲಿ, ಮಹಿಳೆ ಮನೆಯೊಳಗೇ ಇದ್ದು ಬಟ್ಟರೆ ಆಕೆ ಬಹಳ ಸುರಕ್ಷಿತಳಾಗಿರುತ್ತಾಳೆಯೇ? ಹಾಗಾದರೆ ಕಳೆದ ನಾಲ್ಕು ತಿಂಗಳಲ್ಲಿ ಬೆಂಗಳೂರು ನಗರವೊಂದರಲ್ಲೇ ಆರು ಗೃಹಿಣಿಯರು ತಮ್ಮ ಮನೆಯಲ್ಲೇ ಕೊಲೆಯಾಗಿದ್ದಾರಲ್ಲಾ?



ಅಷ್ಟೇ ಅಲ್ಲ, ತಮ್ಮ ಮನೆಯೊಳಗಿರುವಾಗಲೇ ಅದೆಷ್ಟೋ ಮಹಿಳೆಯರು ಪ್ರತಿದಿನ ದೈಹಿಕ ದೌರ್ಜನ್ಯಕ್ಕೆ ತುತ್ತಾಗುತ್ತಿದ್ದಾರಲ್ಲಾ? ವರದಕ್ಷಿಣೆ ಎಂಬ ಪಿಡುಗಿನಿಂದಾಗಿ ಸಾಯುತ್ತಿದ್ದಾರಲ್ಲಾ? ಗಂಡನಿಂದಲೇ ಆಸಿಡ್ ದಾಳಿಗೆ ಗುರಿಯಾಗುತ್ತಿದ್ದಾರಲ್ಲಾ? ಇದೆಲ್ಲದರ ಅರ್ಥ ಮಹಿಳೆಯರು ತಮ್ಮ ಮನೆಗಳಲ್ಲೂ ಸುರಕ್ಷಿತರಾಗಿಲ್ಲ ಎಂದಲ್ಲವೇ?

ನ್ಯಾ. ನಾಯಕರು ಭಾಷಣ ಮಾಡಿದ ಎರಡು ದಿನಗಳ ಮುನ್ನ ಅದೇ ಪ್ರಜಾವಾಣಿಯ ಮುಖ ಪುಟದಲ್ಲಿ ಇನ್ನೊಂದು ಸುದ್ದಿ ವರದಿಯಾಗಿತ್ತು (ಮಾರ್ಚ್ 20 ರ ಸಂಚಿಕೆ). ಆ ವರದಿಯ ಪ್ರಕಾರ ಬೆಂಗಳೂರು ನಗರವೊಂದರಲ್ಲೇ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳೆಯರ ಸಂಖ್ಯೆ 30 ಸಾವಿರ. ನೆನಪಿಡಿ, ಇದು ಕೇವಲ ಐಟಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಸಂಖ್ಯೆ.

ಇನ್ನುಳಿದಂತೆ ಆಸ್ಪತ್ರೆ, ನರ್ಸಿಂಗ್ ಹೋಮ್, ಪತ್ರಿಕೆ, ಟಿವಿ ಚಾನೆಲ್‌ಗಳು, ಗಾರ್ಮೆಂಟ್ಸ್, ಡೈರಿ, ಹೋಟೆಲ್‌ಗಳು ಇತ್ಯಾದಿ ಸೇರಿದಂತೆ ನೂರಾರು ಉದ್ಯಮಗಳಲ್ಲಿ ಲಕ್ಷಾಂತರ ಮಹಿಳೆಯರು ರಾತ್ರಿ ಪಾಳಿಯಲ್ಲಿ ದುಡಿಯುತ್ತಿದ್ದಾರೆ. ಇನ್ನು ಬೆಂಗಳೂರಿನ ಸಿಟಿ ಮಾರ್ಕೆಟ್‌ನಂತಹ ತರಕಾರಿ ಮಂಡಿಗಳ ಎದುರು ಪ್ರತಿ ರಾತ್ರಿ ಸಾವಿರಾರು ಮಹಿಳೆಯರು ತಮ್ಮ ಕಂಕಳಲ್ಲಿ ಎಳೆ ಕಂದಮ್ಮಗಳನ್ನು ಸಿಕ್ಕಿಸಿಕೊಂಡು ಹಣ್ಣು, ತರಕಾರಿ, ಸೊಪ್ಪು ಇತ್ಯಾದಿಗಳನ್ನು ಖರೀದಿಸಲು ಮುಗಿ ಬೀಳುತ್ತಿರುತ್ತಾರೆ. ಮಾರನೆ ದಿನ ಬೆಳಗ್ಗಿನ ಜಾವದಿಂದಲೇ ಆ ತರಕಾರಿಗಳನ್ನು ರಸ್ತೆಬದಿ ಇಟ್ಟುಕೊಂಡು ಮಾರಿದರೇ ಅವರು ಅಂದು ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಸಾಧ್ಯ.

ಹೆಣ್ಣುಮಕ್ಕಳ ನಿತ್ಯ ಜೀವನದ ಇಂತಹ ಕಠೋರ ವಾಸ್ತವಗಳ ತಿಳುವಳಿಕೆ ಇಲ್ಲದವರು ಮಾತ್ರ ಅನಾವಶ್ಯಕವಾಗಿ ರಾತ್ರಿ ವೇಳೆ ಮನೆಯಿಂದ ಹೊರಗೆ ಹೋಗಬಾರದು" ಎಂದು ಹೇಳುತ್ತಾರೆ, ಅಲ್ಲವೆ?

ಮಹಿಳೆಯರ ರಕ್ಷಣೆ ಕುರಿತಂತೆ ಇಂತಹದ್ದೇ ಹಲವು ವಿಚಾರಗಳನ್ನು ನಮ್ಮ ರಾಜ್ಯದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀಯುತ ಸಿರಿಯಾಕ್



ಕಂಡಹಾಗೆ

■ ಗೌರಿ ಲಂಕೇಶ್

ಜೋಸೆಫ್‌ರವರು ಒಂದೆರಡು ಕಡೆ ಮಾತನಾಡಿದ್ದಾರೆ. ಹೆಣ್ಣುಮಕ್ಕಳು ಪ್ರಚೋದನಾಕಾರಿ ಉಡುಪು ಧರಿಸುವುದರಿಂದಲೇ ಆಪತ್ತನ್ನು ಆಹ್ವಾನಿಸಿಕೊಳ್ಳುತ್ತಾರೆ ಎಂಬುದೇ ಮಾನ್ಯ ಜೋಸೆಫ್‌ರವರ 'ಚಿಂತನಾ ಗಂಗೆ'ಯ ಸಾರಾಂಶ. (ಅವರ ಇಂತಹ ಅಭಿಪ್ರಾಯವನ್ನು ವಿಮರ್ಶಿಸಿ ವಕೀಲೆ ಮತ್ತು ಬರಹಗಾರ್ತಿ ರಾಜಲಕ್ಷ್ಮಿ ಅಂಕಲಗಿ ನಮ್ಮ ಪತ್ರಿಕೆಯಲ್ಲಿ ಒಂದು ಲೇಖನ ಬರೆದಿದ್ದಳು. ಫೆಬ್ರವರಿ 27 ಸಂಚಿಕೆ)

ಮಾನ್ಯ ನಾಯಕರಿಗೂ, ಶ್ರೀಯುತ ಜೋಸೆಫ್‌ರವರಿಗೂ ಮಹಿಳೆಯರ ಸುರಕ್ಷತೆ ಬಗ್ಗೆ ನಿಜಕ್ಕೂ ಕಾಳಜಿ ಇರಬಹುದು. ಆದರೆ ಅವರಿಬ್ಬರ ಹೇಳಿಕೆಗಳಲ್ಲಿರುವ "ಮಹಿಳೆಯರ ನಡವಳಿಕೆಯೇ ಅವರಿಗೆ ಆಪತ್ತನ್ನು ತರುತ್ತಿದೆ" ಎಂಬ ನಿಲುವು ಯಾರಲ್ಲೇ ಆಗಲಿ ಆತಂಕವನ್ನು ಹುಟ್ಟಿಸುವಂತಿವೆ.

ಆರ್‌ಎಸ್‌ಎಸ್‌ನಂತಹ ಮೂಲಭೂತವಾದಿ ಸಂಘಟನೆಯ ಮುಖ್ಯಸ್ಥ ಸುದರ್ಶನ್ ಎಂಬಾತ "ಮಹಿಳೆಯರಿಗೆ ಉನ್ನತ ಶಿಕ್ಷಣದ ಅಗತ್ಯವಿಲ್ಲ, ಅವರು ಗಂಡ, ಮಕ್ಕಳ, ಅತ್ತೆ-ಮಾವಂದಿರ ಪೋಷಣೆ ಬಗ್ಗೆ ಅರಿತಿದ್ದರೆ ಸಾಕು" ಎಂದಾಗ ಅದನ್ನು ಖಂಡಿಸುತ್ತೇವೆ. ಬಾಳ್ ಠಾಕ್ರೆನಂತಹ ತಲೆಕೆಟ್ಟವನು "ಮಹಿಳೆಯರು ಟೈಟ್ ಪ್ಯಾಂಟ್ ಮತ್ತು ಸ್ಕರ್ಟ್‌ಗಳನ್ನು ಧರಿಸುವುದರಿಂದಲೇ ಅವರ ಮೇಲೆ ಅತ್ಯಾಚಾರ ನಡೆಯುತ್ತೆ" ಎಂದಾಗಲೂ ಅದನ್ನು ಖಂಡಿಸಿದ್ದೇವೆ. ಹಾಗೆಯೇ "ಅಯ್ಯಪ್ಪಸ್ವಾಮಿ ದೇವಸ್ಥಾನವನ್ನು ಮಹಿಳೆಯರು ಪ್ರವೇಶಿಸಿದರೆ ಪುರುಷ ಭಕ್ತರಲ್ಲದೆ ದೇವರ ಮನಸ್ಸಿನಲ್ಲೂ ಚಂಚಲತೆ ಉಂಟಾಗುತ್ತದೆ" ಎಂದು ಅಲ್ಲಿನ ಪೂಜಾರಿ ಹೇಳಿದಾಗ ಆತನನ್ನು ಖಂಡಿಸಿದ್ದೇವೆ, ಆತನ ದೇವರನ್ನೂ ಲೇವಡಿ ಮಾಡಿದ್ದೇವೆ.


ಅದಕ್ಕೆ ಕಾರಣವೂ ಇದೆ. ಅದೇನೆಂದರೆ ಮಹಿಳೆಯರನ್ನು ರಕ್ಷಿಸುವ ನೆಪದಲ್ಲಿ ಅವರ ಹಕ್ಕುಗಳ ದಮನವಾಗುತ್ತಿದೆ. ಯಾವ ಸ್ವಾವಲಂಬಿತನವನ್ನು, ಸ್ವಾತಂತ್ರ್ಯವನ್ನು, ಸ್ವಾಭಿಮಾನದ ಬದುಕನ್ನು ಕೆಲವರಾದರೂ ಮಹಿಳೆಯರು ಕಷ್ಟಪಟ್ಟು ಪಡೆದಿದ್ದಾರೋ ಅದನ್ನೆಲ್ಲ ನಾಶಪಡಿಸಿ ಅವರನ್ನು ಮತ್ತೆ ಮನೆಯೊಳಗೆ ದೂಡುವ, ತಂದೆ-ಗಂಡ-ಮಗನ ರಕ್ಷಣೆಯಲ್ಲೇ ಬಾಳುವ 'ಮನುಧರ್ಮ'ಕ್ಕೆ ಅವರನ್ನು ದೂಡುವ ಯತ್ನ ನಡೆಯುತ್ತಿದೆ. ಅಂತಹ ಯತ್ನಗಳ ಭಾಗವಾಗಿಯೇ ಮಹಿಳೆಯರ ಉಡುಪು, ನಡತೆಗಳ ಕುರಿತಂತೆ, ವಿಮರ್ಶೆ ಮತ್ತು ಉದರಿ ಸಲಹೆಗಳೂ ವ್ಯಕ್ತವಾಗುತ್ತವೆ.

ಶ್ರೀಯುತ ನಾಯಕರಿಗೆ ಮತ್ತು ಶ್ರೀಯುತ ಜೋಸೆಫ್‌ರವರಿಗೆ ನಿಜವಾಗಲೂ ಮಹಿಳೆಯರ ಬಗ್ಗೆ ಕಾಳಜಿ ಇದ್ದರೆ, ಅವರು ಅರವತ್ತು ವರ್ಷಗಳ ಹಿಂದೆ ಮಹಾತ್ಮ ಗಾಂಧಿಯವರು ಹೇಳಿದ್ದ ಮಾತುಗಳನ್ನು ನೆನಪಿಸಿಕೊಳ್ಳಲಿ. ಅಂದು ಗಾಂಧಿ "ಈ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ಬರುವುದು ಯಾವಾಗ ಅಂದರೆ ಮಹಿಳೆಯೊಬ್ಬಳು ಯಾವ ಭಯವೂ ಇಲ್ಲದೆ ಮಧ್ಯ ರಾತ್ರಿ ನಡೆದಾಗ" ಎಂದಿದ್ದರು. ಗಾಂಧಿಯವರ ಆ ಮಾತನ್ನು ಅವರಿಬ್ಬರೂ ನಿಜವಾಗಿಸಲಿ.

■ ಗೌರಿ ಲಂಕೇಶ್

ಮಣ್ಣುಮುಕ್ಕಲಿರುವ ಜೆಡಿಎಸ್, ಚೇತರಿಸಿಕೊಳ್ಳಲಿರುವ ಕಾಂಗ್ರೆಸ್

ಹೊಟ್ಟೆಗೆ ಅನ್ನ ಹಾಕೋದು ಬಿಟ್ರು ರಾಜಕೀಯ ಮಾಡೋದನ್ನು ಬಿಡೋದಿಲ್ಲ ಅನ್ನೋ ಜಾಯಮಾನದವರು ಹಾಸನ ಜಿಲ್ಲೆಯ ರಾಜಕಾರಣಿಗಳು. ರಾಜಕೀಯದ ಹಗ್ಗ ಜಗ್ಗಾಟದಲ್ಲಿಯೇ ಎಚ್.ಡಿ.ದೇವೇಗೌಡ, ಜಿ.ಪುಟ್ಟಸ್ವಾಮಿಗೌಡ, ಯಶೋದಮ್ಮ ದಾಸಪ್ಪ ಎಚ್.ಟಿ.ಕಾರ್ಲೆ, ಎಚ್.ಸಿ. ಶ್ರೀಕಂಠಯ್ಯ, ಎಚ್.ಎನ್.ನಂಜೇಗೌಡ, ಕೆ.ಎಚ್.ಹನುಮೇಗೌಡ, ಬಿ.ಬಿ.ಶಿವಪ್ಪರಂತಹ ರಾಜಕೀಯ ದಿಗ್ಗಜರು ತಮ್ಮ ಜೀವನ ಸಾಗಿಸಿದ್ದಾರೆ. ಈಗ ಚುನಾವಣೆಯ ಮೋಡ ರಾಜ್ಯದಾದ್ಯಂತ ಕವಿದಿರುವ ಹಿನ್ನೆಲೆಯಲ್ಲಿ ಹಾಸನದಲ್ಲಿಯೂ ಬಿರುಸಿನ ರಾಜಕೀಯ ಚಟುವಟಿಕೆಗಳು ಶುರುವಾಗಿಬಿಟ್ಟಿವೆ. ಯಾವುದೇ ಪಕ್ಷಕ್ಕೆ ನಿಷ್ಠರಾಗಿರದೇ ಟಿಕೆಟ್ ಸಿಕ್ಕ ಕಡೆ ಹಾರುವ ಹಿರಿ-ಮರಿ ರಾಜಕಾರಣಿಗಳ ದಂಡು ವಿವಿಧ ರಾಜಕೀಯ ಪಕ್ಷಗಳ ರಾಜ್ಯ ನಾಯಕರ ಮನವೊಲಿಸಲು ಕ್ಯೂನಲ್ಲಿ ನಿಂತಿದ್ದಾರೆ.



ಕ್ಷೇತ್ರ ಮರುವಿಂಗಡನೆಯ ಪರಿಣಾಮವಾಗಿ ಜಿಲ್ಲೆಯಲ್ಲಿದ್ದ 8 ವಿಧಾನಸಭಾ ಕ್ಷೇತ್ರಗಳಲ್ಲಿ ಗಂಡಸಿ ಕ್ಷೇತ್ರವು ಮಾಯವಾಗಿ ನಾಲ್ಕು ಕ್ಷೇತ್ರಗಳಲ್ಲಿ ಹಂಚಿಹೋಗಿದೆ. ಇರುವ ಏಳು ಸ್ಥಾನಗಳಲ್ಲಿ ಬಲವಾದ ಪೈಪೋಟಿ ಕಂಡುಬರುತ್ತಿದೆ.

ಜೆಡಿಎಸ್‌ಗೆ ಕಬ್ಬಿಣದ ಕಡಲೆ

ದೇವೇಗೌಡರ ತವರಿನಲ್ಲಿಯೇ ಜೆಡಿಎಸ್ ನಿರ್ನಾಮದ ಹಂತಕ್ಕೆ ಬಂದು ನಿಂತಿದೆ. ಬರುವ ಚುನಾವಣೆ ಅದರ ಪಾಲಿಗೆ ಕಬ್ಬಿಣದ ಕಡಲೆ ಎಂಬುದರಲ್ಲಿ ಎರಡು ಮಾತಿಲ್ಲ. ಸರ್ವಾಧಿಕಾರಿ ರೇವಣ್ಣ ಮೇಲೊಂದು ಕೆಳಗೊಂದು ಕೈಹಾಕಿಕೊಂಡು ಮಾಡಿರುವ ರಂಪಾಟಕ್ಕೆ ಜೆಡಿಎಸ್ ಇದ್ದ ಆರು ಸ್ಥಾನಗಳಲ್ಲಿ ಹೆಚ್ಚೆಂದರೆ ಎರಡನ್ನು ಉಳಿಸಿಕೊಳ್ಳಲೂ ಹರಸಾಹಸ ಮಾಡಬೇಕಾಗಿ ಬಂದಿದೆ. ಕುರುಬರೇ ಹೆಚ್ಚಿದ್ದ ಹೊಳೆನರಸೀಪುರ ಕ್ಷೇತ್ರದ ಭಾಗಗಳನ್ನು ಅರಕಲಗೂಡಿಗೆ ಅನಿಸಿ ಅದರ ಬದಲಿಗೆ ಮದ್ದಾ ಕ್ಷೇತ್ರವನ್ನು ಹೊಳೆನರಸೀಪುರದಿಂದ ಕಿತ್ತು ಅರಕಲಗೂಡಿಗೆ ಹಾಕಿಕೊಂಡಿರೋದು ರೇವಣ್ಣ ಪಾಲಿಗೆ ಪ್ಲಸ್ ಪಾಯಿಂಟ್ ಆಗಲಿದೆ. ಎರಡು ಬಾರಿ ರಾಜಕೀಯ ನಿವೃತ್ತಿ ಘೋಷಿಸಿ ಈಗ ಮತ್ತೆ ಚನ್ನರಾಯಪಟ್ಟಣದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಚುನಾವಣೆಗಿಳಿಯಲು ಹೊರಟಿರುವ ಎಚ್.ಸಿ ಶ್ರೀಕಂಠಯ್ಯನಿಗೆ ವಯಸ್ಸು ಮತ್ತು ಮಗ ವಿಜಯ್‌ಕುಮಾರ್ ಇಬ್ಬರೂ ನೆಗೆಟಿವ್ ಪಾಯಿಂಟುಗಳೇ. ಇವರಿಗಿಂತ ಬೆಟರ್ ಆಗಿರುವ ಮಾಜಿ ಶಾಸಕ ಸಿ.ಎಸ್. ಪುಟ್ಟೇಗೌಡ್ರ ಕಡೆಗೇ ಮತದಾರ ಒಲಿಯುವಂತಿದೆ. ಇಲ್ಲಿ ಕಾಂಗ್ರೆಸ್ ಲಾಭ ಪಡೆಯಬೇಕಾದರೆ ರೇವಣ್ಣನ ಕೆಂಗಣ್ಣಿಗೆ ಬಿದ್ದು ಖಾಸಗಿಯವರ ಪಾಲಾದ ಹೇಮಾವತಿ ಸಕ್ಕರೆ ಕಾರ್ಖಾನೆಯ ಇಶ್ಯೂವನ್ನು ಚೆನ್ನಾಗಿ ಬಳಸಿಕೊಳ್ಳಬೇಕಿದೆ.

ಬಿಜೆಪಿ ಧೂಳೀಪಟ

ಹೊಳೆನರಸೀಪುರದಲ್ಲಿ ರೇವಣ್ಣನಿಗೆ ಸೆಡ್ಡು ಹೊಡೆಯಬಲ್ಲ ಅಭ್ಯರ್ಥಿಯೇ ಕಾಂಗ್ರೆಸ್‌ನಲ್ಲಿಲ್ಲ. ಇನ್ನು ಬಿಜೆಪಿಗಂತೂ ಇಲ್ಲಿ ನೆಲೆಯೇ ಇಲ್ಲ. ಮೇಲಾಗಿ ಕ್ಷೇತ್ರಮರುವಿಂಗಡನೆಯ ಲಾಭ ಕೂಡ ರೇವಣ್ಣನ ಪಾಲಿಗೆ ಒಲಿಯಲಿದೆ. ಹೀಗಾಗಿ, ಹೊಳೆನರಸೀಪುರದಲ್ಲಿ ರೇವಣ್ಣನ ಗೆಲುವು ಹೆಚ್ಚೂಕಡಿಮೆ ಖಾತ್ರಿಯಾದಂತೆಯೇ. ಚನ್ನರಾಯಪಟ್ಟಣದ ಸ್ಥಿತಿಯೂ ಇದಕ್ಕಿಂತ ತೀರಾ ಭಿನ್ನವಾಗಿಯೇನೂ ಇಲ್ಲ. ಬಿಜೆಪಿಯಲ್ಲಿರುವ ಐವತ್ತು ಮಂದಿ ಕಾರ್ಯಕರ್ತರೂ ಕೂಡ ಐವತ್ತು ಬಣ ಮಾಡಿಕೊಂಡು ಒಳಗೊಳಗೇ ಕಿತ್ತಾಡುತ್ತಿದ್ದಾರೆ. ಹಾಗಾಗೀ ಈ ಎರಡೂ ಕ್ಷೇತ್ರಗಳಲ್ಲಿ, ಅಷ್ಟೇಏಕೆ ಒಂದು ಮಟ್ಟಿಗೆ ಇಡೀ ಹಾಸನ ಜಿಲ್ಲೆಯಲ್ಲಿ ಬಿಜೆಪಿ ಮೇಲೇಳುವುದು ಕಷ್ಟ.


ಅರಕಲಗೂಡು ಕ್ಷೇತ್ರ

ಕುರುಬರ ಮತಬ್ಯಾಂಕ್ ಎಂದೇ ಪ್ರಸಿದ್ಧವಾಗಿರುವ ಹೊಳೆನರಸೀಪುರ ಕ್ಷೇತ್ರದ ಹಳ್ಳಿಮೈಸೂರು ಕ್ಷೇತ್ರಕ್ಕೆ ಕ್ಷೇತ್ರ ಪುನರ್ವಿಂಗಡನೆಯ ಬಳುವಳಿಯಾಗಿ ಅರಕಲಗೂಡು ಕ್ಷೇತ್ರಕ್ಕೆ ಬರಲಿದೆ. ಜೊತೆಗೆ, ಕ್ಷೇತ್ರದಲ್ಲಿ ಲಿಂಗಾಯತರು ಮತ್ತು ದಾಸ ಒಕ್ಕಲಿಗರೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಈ ಮೂರೂ ಜನಾಂಗಗಳು ಈ ಬಾರಿ ಜೆಡಿಎಸ್‌ಗೆ ಕೈಕೊಡುವ ಲಕ್ಷಣಗಳೇ ಹೆಚ್ಚು ಕಾಣುತ್ತಿವೆ. ಅಲ್ಲದೇ, ಮಾಜಿ ಶಾಸಕ ಹಾಗೂ ಜಂಟಿ ಸದನ ಸಮಿತಿಯ ಅಧ್ಯಕ್ಷ ಎ.ಟಿ.ರಾಮಸ್ವಾಮಿಯವರು ಸಕ್ರಿಯ ರಾಜಕಾರಣದಿಂದ ದೂರ ಸರಿದಿರುವುದೂ ಜೆಡಿಎಸ್‌ಗೆ ಮತ್ತೊಂದು ಮೈನಸ್ ಪಾಯಿಂಟ್ ಆಗಲಿದೆ. ಈ ಎಲ್ಲಾ ಕಾರಣಗಳಿಂದಾಗಿ ಕಾಂಗ್ರೆಸ್‌ನ ಅಭ್ಯರ್ಥಿ ಹಾಗೂ ಜಿಲ್ಲಾಧ್ಯಕ್ಷ ಎ. ಮಂಜುಗೆ ರೊಟ್ಟಿಯೇ ಜಾರಿ ತುಪ್ಪದಲ್ಲಿ ಬಿದ್ದಂತಾಗಿಬಿಟ್ಟಿದೆ. ಬಿಎಸ್‌ಪಿ ಕಳೆದ ಚುನಾವಣೆಯಲ್ಲಿ ಐದು ಸಾವಿರ ಮತಗಳನ್ನು ಕಿತ್ತು ಕಾಂಗ್ರೆಸ್‌ಗೆ ಹಾನಿ ಮಾಡಿತ್ತಾದರೂ ಈ ಬಾರಿ ಅದರ ಶಕ್ತಿಗುಂದಿದೆ. ಬಿಜೆಪಿಯ ಚಿಂತೆಯಿದೆಯಾದರೂ ಅದು ಗೆಲ್ಲುವ ಸ್ಥಿತಿಯಲ್ಲೇನೂ ಇಲ್ಲ. ಹೀಗಾಗಿ ಕಾಂಗ್ರೆಸ್ಸೇ ಇಲ್ಲಿ ಗೆಲ್ಲುವ ನಿರೀಕ್ಷೆ ಜಾಸ್ತಿಯಿದೆ.

ಈ ಚುನಾವಣೆಯಲ್ಲಿ ಸಜ್ಜನ, ನಿಷ್ಠುರವಾದಿ, ಸರಳ ವ್ಯಕ್ತಿತ್ವದ ಮನುಷ್ಯ ಎಂದೇ ಪ್ರಸಿದ್ಧವಾಗಿರುವ ಎ.ಟಿ ರಾಮಸ್ವಾಮಿ ನಿರ್ವಹಿಸಲಿರುವ ಪಾತ್ರ ಏನು ಎಂಬುದು ಮಾತ್ರ ನಿಗೂಢವಾಗಿದೆ. ಕಾಂಗ್ರೆಸ್ಸಿನಿಂದ ಬೇಸತ್ತು ಜೆಡಿಎಸ್‌ಗೆ ಹಾರಿದ್ದರಾದರೂ ಅಲ್ಲಿಯೂ ಕೂಡ ಅವರಿಗೆ ನೆಮ್ಮದಿಯಿಲ್ಲ. ಜೆಡಿಎಸ್‌ನ ಲಿಂಗಾಯತ, ಕುರುಬ ವಿರೋಧಿ ನೀತಿಗಳು, ದಾಸ ಒಕ್ಕಲಿಗರ ಮೇಲಾದ ದೌರ್ಜನ್ಯಗಳು ಜೆಡಿಎಸ್‌ನಲ್ಲಿ ಮುಂದುವರಿಯಬೇಕೆ ಎಂಬ ಪ್ರಶ್ನೆಯನ್ನು ಅವರ ಮುಂದೊಡ್ಡಿವೆ. ಇದನ್ನೆ ಕಾಯುತ್ತಿದ್ದ ಬಿಜೆಪಿ ಅವರನ್ನು ತನ್ನತ್ತ ಸೆಳೆದುಕೊಳ್ಳಲು ಪ್ರಯತ್ನ ನಡೆಸುತ್ತಿದೆ. ಹಾಗೇನಾದರೂ ಆದರೆ, ಕಾಂಗ್ರೆಸ್‌ನ ಮಂಜು ಒದ್ದಾಡಬೇಕಾಗುತ್ತದಷ್ಟೆ.

ಆಲೂರು-ಸಕಲೇಶಪುರ ಮೀಸಲು ಕ್ಷೇತ್ರ

ಕ್ಷೇತ್ರ ಮರುವಿಂಗಡನೆಯ ಪರಿಣಾಮವಾಗಿ ಹೊಸದಾಗಿ ಮೀಸಲು ಕ್ಷೇತ್ರವಾಗಿರುವ ಆಲೂರು-ಸಕಲೇಶಪುರ ಕ್ಷೇತ್ರಕ್ಕೆ ದಾಸ ಒಕ್ಕಲಿಗರ ಪ್ರಾಬಲ್ಯವಿರುವ ಪ್ರದೇಶಗಳನ್ನು ಬಳುವಳಿಯಾಗಿ ನೀಡಲಾಗಿದೆ. ವಾಸ್ತವದಲ್ಲಿ ಈ ಪ್ರದೇಶಗಳಿಗೂ ಮತ್ತು ಕ್ಷೇತ್ರಕ್ಕೂ ಸಂಬಂಧವೇ ಇರಲಿಲ್ಲ. ಇದು ಮೀಸಲು ಕ್ಷೇತ್ರವಾದರೂ ಇಲ್ಲಿ ನಿರ್ಣಾಯಕವಾಗಿರುವುದು ಒಕ್ಕಲಿಗ ಮತ್ತು ಲಿಂಗಾಯತ ಮತಗಳೇ. ಕಾಂಗ್ರೆಸ್‌ನಿಂದ ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಡಿ.ಸಿ ಸಣ್ಣಸ್ವಾಮಿ ಪ್ರಬಲ ಅಭ್ಯರ್ಥಿಯಾಗಿದ್ದರೆ ಜೆಡಿಎಸ್‌ನಿಂದ ಸಜ್ಜನ ರಾಜಕಾರಣಿ ಎನಿಸಿಕೊಂಡಿರುವ ಮಾಜಿ ಸಚಿವ ಎಚ್.ಕೆ. ಕುಮಾರಸ್ವಾಮಿಯವರು ಅಭ್ಯರ್ಥಿಯಾಗಲು ಮುಂದಾಗಿದ್ದಾರೆ. ಕುಮಾರಸ್ವಾಮಿಗೆ ತಮ್ಮದೇ ಪಕ್ಷದ ಸ್ಥಳೀಯ ಜಿ.ಪಂ. ಸದಸ್ಯ ಪರ್ವತಯ್ಯ ಅಡ್ಡಗಾಲಾಗಿದ್ದು ತಾವೇ ಟಿಕೆಟ್ ಗಿಟ್ಟಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಇವರಿಬ್ಬರ ಒಳಜಗಳ ಜೆಡಿಎಸ್‌ಗೆ ಮುಳುವಾದರೂ ಆಶ್ಚರ್ಯವಿಲ್ಲ.



ಈ ಕ್ಷೇತ್ರದಲ್ಲಿ ಬಿಜೆಪಿಯೂ ಒಂದಿಷ್ಟು ಪ್ರಬಲವಾಗಿದೆ. ಮಾಜಿ ಶಾಸಕ ಬಿ.ಬಿ.ಶಿವಪ್ಪನವರ ವೈಯಕ್ತಿಕ ವರ್ಚಸ್ಸಿದ್ದರಿಂದ ಅವರು ತೀರ್ಮಾನಿಸುವ ಅಭ್ಯರ್ಥಿಗೆ ಅನುಕೂಲವಾಗಲಿದೆ. ಬಿಜೆಪಿಯಿಂದ ಸ್ಪರ್ಧಿಸಲು ಬೇಲೂರು ನಗರ ಘಟಕದ ಅಧ್ಯಕ್ಷ ಮತ್ತು ಮಾಜಿ ಶಿಕ್ಷಕ ರಂಗನಾಥ ಕ್ಷೇತ್ರದುದ್ದಕ್ಕೂ ಪ್ರಚಲಿತದಲ್ಲಿರುವ ವ್ಯಕ್ತಿ. ಇನ್ನೊಂದೆಡೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿರುವ ಎಂ.ವಿ. ತಿಮ್ಮಯ್ಯ ಕೂಡ ಟಿಕೆಟ್ ಗಿಟ್ಟಿಸಲು ಭಾರಿ ಪ್ರಯತ್ನ ನಡೆಸಿದ್ದಾರೆ. ಅದೇನೇ ಇದ್ದರೂ ಈ ಕ್ಷೇತ್ರ ಬಿಜೆಪಿ ಕಡೆ ವಾಲಿರುವುದಂತೂ ಸತ್ಯ.

ಬೇಲೂರು ಕ್ಷೇತ್ರ

ಕಳೆದ ಮೂವತ್ತು ವರ್ಷಗಳಿಂದ ಮೀಸಲು ಕ್ಷೇತ್ರವಾಗಿದ್ದ ಬೇಲೂರು ಕ್ಷೇತ್ರ ಪುನರ್ವಿಂಗಡಣೆಯಿಂದಾಗಿ ಇದೀಗ ಸಾಮಾನ್ಯ ಕ್ಷೇತ್ರವಾಗಿದೆ. ಈ ಕ್ಷೇತ್ರದ ಇತಿಹಾಸದುದ್ದಕ್ಕೂ ಜೆಡಿಎಸ್ ಮತ್ತು ಕಾಂಗ್ರೆಸ್ ಸಮಾನವಾಗಿ ಹಣಾಹಣಿ ನಡೆಸಿ ಅಧಿಕಾರ ನಡೆಸಿವೆ. ಈ ಕ್ಷೇತ್ರಕ್ಕೆ ಗಂಡಸಿ ಕ್ಷೇತ್ರದ ಜಾವಗಲ್ ಹೋಬಳಿ ಸೇರಿರುವುದರಿಂದ ಲಿಂಗಾಯತ ಮತದಾರರ ಪ್ರಾಬಲ್ಯವನ್ನು ಹೆಚ್ಚಿಸಿದಂತಾಗಿದೆ. ಇದರಿಂದಾಗಿ ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳ ನಡುವೆ ಹಣಾಹಣಿ ಏರ್ಪಟ್ಟು ಜೆಡಿಎಸ್ ಮೂರನೆ ಸ್ಥಾನಕ್ಕೆ ದೂಡಲ್ಪಡುವುದು ಖಾತ್ರಿಯಾಗಿದೆ. ಕಾಂಗ್ರೆಸ್‌ನಿಂದ ವೈ.ಎನ್ ರುದ್ರೇಶ್‌ಗೌಡರ ಸ್ಪರ್ಧೆ ನಿಶ್ಚಿತವಾಗಿದ್ದು ಬಿಜೆಪಿಗೆ ಪ್ರಬಲ ಅಭ್ಯರ್ಥಿ ಸಿಕ್ಕಿಲ್ಲ, ಹಾಗಾಗಿ, ಕಾಂಗ್ರೆಸ್ಸೆ ಇಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಇದೀಗ ಕ್ಷೇತ್ರ ಕಳೆದುಕೊಂಡಿರುವ ಬಿ.ಬಿ.ಶಿವಪ್ಪ ಬೇಲೂರಿನಿಂದ ಸ್ಪರ್ಧಿಸುತ್ತಾರೆಂಬ ಸುದ್ದಿಯೂ ಹೊರಬಿದ್ದಿದ್ದು ಮತ್ತಷ್ಟು ಕುತೂಹಲ ಕೆರಳಿಸಿದೆ.


ಅರಸೀಕೆರೆ ಕ್ಷೇತ್ರ ಮತ್ತು ಹಾಸನ ಕ್ಷೇತ್ರ

ಈ ಕ್ಷೇತ್ರದಲ್ಲಿ ಲಿಂಗಾಯತರ ಪ್ರಾಬಲ್ಯವಿದ್ದರೂ ಹಿಂದುಳಿದ ವರ್ಗಗಳ ಮತಗಳನ್ನು ಕಡೆಗಣಿಸುವಂತಿಲ್ಲ, ಇಲ್ಲಿ ಲಿಂಗಾಯತರು ಮತ್ತು ಬ್ರಾಹ್ಮಣರು ಒಂದಿಷ್ಟು ಬಿಜೆಪಿಯ ಕಡೆಗೆ ವಾಲಿದ್ದರೆ ಹಿಂದುಳಿದ ವರ್ಗಗಳ ಮತದಾರರು ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಹಂಚಿಕೆಯಾಗಲಿದ್ದಾರೆ. ಬಿಜೆಪಿಯಿಂದ ಮಾಜಿ ಶಾಸಕ ಎ.ಎಸ್ ಬಸವರಾಜ್ ಅಭ್ಯರ್ಥಿಯಾಗಲು ಸಿದ್ಧತೆ ನಡೆಸಿದ್ದರೆ ಕಾಂಗ್ರೆಸ್‌ನಿಂದ ಜಿ.ವಿ. ಸಿದ್ದಪ್ಪ ಪ್ರಭುಕುಮಾರ್, ಪರಮೇಶ್ವರಪ್ಪನಂತಹ ಹೆಚ್ಚೂಕಡಿಮೆ ಹತ್ತು ಅಭ್ಯರ್ಥಿಗಳು ಟಿಕೆಟ್‌ಗಾಗಿ ಕ್ಯೂನಲ್ಲಿ ನಿಂತಿದ್ದಾರೆ. ಜೆಡಿಎಸ್‌ನಿಂದ ಕುಡಕುಂದಿ ಶಿವಲಿಂಗೇಗೌಡ ಸ್ಪರ್ಧಿಸುವುದು ಖಾತ್ರಿಯಾಗಿದೆ. ಹಾಗೆ ನೋಡಿದರೆ ಈ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಡುವ ನಿರೀಕ್ಷೆಯೇ ಹೆಚ್ಚಿದೆ.

ಹಾಸನದಲ್ಲಿ ದಾಸ ಒಕ್ಕಲಿಗರ ಮತಗಳೇ ನಿರ್ಣಾಯಕ. ಉದ್ದಕ್ಕೂ ದಾಸ ಒಕ್ಕಲಿಗರ ವಿರುದ್ಧ ದೌರ್ಜನ್ಯವೆಸಗುತ್ತಲೇ ಬಂದಿರುವ ಜೆಡಿಎಸ್‌ಗೆ ಇವರು ಮುಳುವಾಗಲಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ದಾಸ ಒಕ್ಕಲಿಗರ ಸಾವಿರಾರು ಎಕರೆ ಭೂಮಿಯನ್ನು ಕಸಿದುಕೊಂಡ ರೇವಣ್ಣನ ವಿರುದ್ಧ ಇವರು ಕುದಿಯುತ್ತಿದ್ದಾರೆ. ಈ ಕ್ಷೇತ್ರದಲ್ಲಿ ಮಾಜಿ ಶಾಸಕ ಎಚ್.ಎಸ್. ಪ್ರಕಾಶ್ ಎಂಬ ಕೆರೆಗಳ್ಳನಿಗೆ ಜೆಡಿಎಸ್ ಟಿಕೆಟ್ಟು ಕೈತಪ್ಪುವ ಸಾಧ್ಯತೆ ಜಾಸ್ತಿಯಿದೆ. ಈ ಸ್ಥಾನಕ್ಕೆ ಮುಳ್ಳು ಒಕ್ಕಲಿಗ ಪಂಗಡದ ಪಟೇಲ್ ಶಿವರಾಮ್ ತರುವ ಮೂಲಕ ಒಕ್ಕಲಿಗ ಸಮುದಾಯವನ್ನು ಓಲೈಸುವ ಪ್ರಯತ್ನ ರೇವಣ್ಣನದು. ಈ ಮಧ್ಯೆ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಮಾಜಿ ಸಚಿವ ಬಿ. ಶಿವರಾಂ, ಕೆ.ಎಂ. ರಾಜೇಗೌಡ, ಬಿ.ಕೆ. ಮಂಜುನಾಥ್ ಹೆಸರುಗಳು ಕೇಳಿಬರುತ್ತಿವೆ. ಹೀಗಾಗಿ ಅಭ್ಯರ್ಥಿಗಳ ಆಯ್ಕೆಯೇ ಕಾಂಗ್ರೆಸ್ಸಿಗೆ ಗೊಂದಲವುಂಟು ಮಾಡಿದೆ. ಬಿಜೆಪಿಯಿಂದ ಕೆ.ಎಚ್.ಹನುಮೇಗೌಡ ಟಿಕೆಟ್ಟಿಗಾಗಿ ಪ್ರಯತ್ನಿಸುತ್ತಿದ್ದಾರೆ. ಅವರಿಗೆ ಟಿಕೆಟ್ ತಪ್ಪಿದರೆ ಅದು ಕಾಂಗ್ರೆಸ್‌ಗೆ ಪ್ಲಸ್ ಪಾಯಿಂಟಾಗಲಿದೆ. ಏನೇ ಆದರೂ, ಇಲ್ಲಿ ಸ್ಪರ್ಧೆಯೇರ್ಪಡುವುದು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ. ಆದರಲ್ಲೂ ಕಾಂಗ್ರೆಸ್‌ನಲ್ಲಿ ಒಂದಿಷ್ಟು ಘಟಾನುಘಟಿಗಳು ಇರುವುದರಿಂದ ತಮ್ಮ ವರ್ಚಸ್ಸಿನ ಮೂಲಕವೇ ಅವರು ಗೆಲ್ಲುವ ನಿರೀಕ್ಷೆಯಿದೆ. ■

ಹಾಸನ

ಹೊಂಬಾಳೆಗೌಡ ಮೇಯ್ದ ಅಕ್ಕಿಯೆಷ್ಟು?



ಹಾಸನಕ್ಕೂ ಅಕ್ಕಿ-ಗೋಧಿ ಹಗರಣಗಳಿಗೂ ಏನೋ ಒಂದು ರೀತಿಯ ಅವಿನಾಭಾವ ಸಂಬಂಧ. ಗೋದಾಮುಗಳಿಗೆ ಹೊಕ್ಕ ಹೆಗ್ಗಣಗಳಂತೆ ಇಲ್ಲಿನ ಎಫ್‌ಸಿಐ ಮತ್ತು ಕೆಎಫ್‌ಸಿಎಸ್‌ಐ ಗೋದಾಮುಗಳಿಗೆ ಭ್ರಷ್ಟ ಅಧಿಕಾರಿಗಳು ನುಗ್ಗಿ ಪುಷ್ಕಳವಾಗಿ ಮೇಯುತ್ತಿದ್ದಾರೆ. ದುರಂತವೆಂದರೆ, ಈ ಹಗರಣಗಳನ್ನು ಮಾಧ್ಯಮಗಳು ಬಯಲಿಗೆ ತಂದರೂ ಈ ಭ್ರಷ್ಟ ಹೆಗ್ಗಣಗಳು ಮಾತ್ರ ಯಾವ ಚಿಂತೆಯೂ ಇಲ್ಲದೆ ನಿರಾತಂಕವಾಗಿ ಮೇಯುವುದನ್ನು ನಿಲ್ಲಿಸಿಲ್ಲ. ಈ ಹೆಗ್ಗಣಗಳ ಲಿಸ್ಟಿಗೆ ಲೇಟೆಸ್ಟ್ ಸೇರ್ಪಡೆಯೆಂದರೆ ಜಿಲ್ಲೆಗೆ ಆಹಾರ ಇಲಾಖೆಯ ಉಪ ನಿರ್ದೇಶಕನಾಗಿ ವಕ್ಕರಿಸಿಕೊಂಡಿರುವ ಹೊಂಬಾಳೆಗೌಡ.

ಸದಾ ರಾಜಕೀಯದ ಗುಂಗಿನಲ್ಲೇ ಬದುಕುವ ಜಿಲ್ಲೆ ಹಾಸನ. ಅದರಲ್ಲೂ ಕಳೆದ ಮೂರು ವರ್ಷಗಳ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಜಿಲ್ಲೆಗೆ ಹಲವು ಯೋಜನೆಗಳ ಹೆಸರಿನಲ್ಲಿ ಹಣ ಹೊಳೆಯಾಗಿ ಹರಿದುಬಂದಿದೆ. ಇದು ಜನಸಾಮಾನ್ಯರಿಗೆ ಎಷ್ಟು ಸಿಕ್ಕಿದೆಯೋ ಗೊತ್ತಿಲ್ಲ, ಅಧಿಕಾರಿಗಳಂತೂ ಮನಬಂದಂತೆ ಗೆಬರಿಕೊಂಡಿದ್ದಾರೆ. ಆದರಲ್ಲಿ ಈ ಹೊಂಬಾಳೆಗೌಡ ಕೂಡ ಒಬ್ಬ ಆಹಾರ ಇಲಾಖೆಯ ನಿರ್ದೇಶಕನಾಗಿರುವ ಈತನಿಗೆ ಜಿಲ್ಲೆಯ ಒಂಭತ್ತು ಕೆಎಫ್‌ಸಿಎಸ್‌ಸಿ ಗೋದಾಮುಗಳಿಂದ ಪ್ರತೀ ತಿಂಗಳು ಅನಾಮತ್ತು ಎರಡೂವರೆ ಲಕ್ಷ ಬಂದು ಬೀಳುತ್ತದೆ. ಬಡಜನರಿಗೆ ಅನುಕೂಲವಾಗಲೆಂದು ಪಡಿತರ ಧಾನ್ಯವನ್ನು ಸರ್ಕಾರ ಕಡಿಮೆ ಬೆಲೆಯಲ್ಲಿ ವಿತರಿಸುವ ವ್ಯವಸ್ಥೆ ಮಾಡಿದ್ದರೆ ಆ ಧಾನ್ಯವನ್ನೆಲ್ಲಾ ಹೊಂಬಾಳೆಗೌಡನೇ ಕುಂತು ಮೇಯ್ದುಬಿಡುತ್ತಾನೆ. ಆತ ಬಂದು ಒಂದು ವರ್ಷದಲ್ಲಿ ಅದೆಷ್ಟು ಕ್ವಿಂಟಾಲ್ ಬಡವರ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಿಕೊಂಡಿದ್ದಾನೆಂದು ಪ್ರಾಯಶಃ ಆತನಿಗೇ ಗೊತ್ತಿರಲಿಕ್ಕಿಲ್ಲ, ಕೆಲವು ಸಂಘಟನೆಗಳು, ಪತ್ರಿಕೆಗಳು ಈ ಹೆಗ್ಗಣದ ಮೇಯುವಿಕೆಯನ್ನು ಬಯಲಿಗೆ ತಂದಿದ್ದರೂ ಆತನನ್ನು ಯಾರೂ ಏನೂ ಮಾಡಿಕೊಳ್ಳಲಾಗುತ್ತಿಲ್ಲ, ಆತ ಮೇಯ್ದ ಪರಿಯನ್ನೇ ನೋಡಿ.

2007ರ ಜುಲೈ 5ರಂದು ಎಫ್‌ಸಿಐಗೆ ಸೇರಿದ 70 ಕೆ.ಜಿ ತೂಕದ 140 ಅಕ್ಕಿ ಚೀಲಗಳನ್ನು ಈತ ಮುಟ್ಟ ಲಾರಿಯೊಂದರಲ್ಲಿ (ಸಂಖ್ಯೆ: ಕೆಎ-13, 1556) ತುಂಬಿಸಿ ಮಂಗಳೂರಿಗೆ ಸಾಗಿಸುತ್ತಿದ್ದ. ಕೆಲ ಮಾಧ್ಯಮದವರಿಗೆ ಗೊತ್ತಾಗಿ ಅದನ್ನು ಸಕಲೇಶಪುರ ಹತ್ತಿರದ ಮಾರನಹಳ್ಳಿ ಗೇಟ್ ಬಳಿ ಹಿಡಿಸಿಹಾಕಿದ್ದರು. ಆದರೆ ಆ ಕೇಸೇ ನಾಪತ್ತೆಯಾಗಿದೆ.

2007ರ ಆಗಸ್ಟ್ 24ರಂದು ಹಾಸನ ತಾಲ್ಲೂಕು ಮಸಲೇ ಹೊಸಹಳ್ಳಿ ಸಮೀಪದ ರೈಸ್‌ಮಿಲ್ ಒಂದರಲ್ಲಿ ಹೊಂಬಾಳೆಗೌಡ ತುಂಬಿಸಿಟ್ಟಿದ್ದ 200 ಅಕ್ಕಿ ಚೀಲಗಳನ್ನು ಕರವೆ ಕಾರ್ಯಕರ್ತರು ಹಿಡಿದು ಹಾಕಿದ್ದರು. ಆಗಲೂ ಏನೂ ಆಗಿರಲಿಲ್ಲ, ಇದೇ ವರ್ಷ ಜನವರಿ 14ರಂದು ಸಕಲೇಶಪುರ ತಾಲ್ಲೂಕಿನ ರಮೇಶ ಎಂಬುವವರ ಗೋದಾಮಿನಲ್ಲಿ ಹೊಂಬಾಳೆಗೌಡನ ಭಂಟರು ಕದ್ದಿಟ್ಟಿದ್ದ 500 ಕುಶಲಕ್ಕಿ ಚೀಲಗಳನ್ನು ಪತ್ತೆ ಮಾಡಲಾಯಿತು. ಅದೇ ತಿಂಗಳು 29ರಂದು ಎಫ್‌ಸಿಐ ಗೋದಾಮಿನಿಂದ 320 ಅಕ್ಕಿ ಚೀಲಗಳನ್ನು ತುಂಬಿಕೊಂಡ ಲಾರಿಯೊಂದು ಬೇಲೂರಿನ ಕೆಎಸ್‌ಸಿಎಫ್‌ಐ ಗೋದಾಮಿಗೆ ತಲುಪಬೇಕಿತ್ತು, ದುರಂತವೆಂದರೆ ಆ ಲಾರಿ ಬೇಲೂರಿಗೆ ಬರಲೇ ಇಲ್ಲ, ಕೊನೆಗೆ ಆ ದಿನ ರಾತ್ರಿ ಬೇಲೂರು ತಾಲ್ಲೂಕು ಅರಾಹಳ್ಳಿಯಲ್ಲಿ ಪೊಲೀಸರ ಕೈಗೆ ಸಿಕ್ಕಿಬಿತ್ತು. ತೀರಾ ಇತ್ತೀಚಿನ ಘಟನೆಯೆಂದರೆ, ಮೊನ್ನೆ ಮಾರ್ಚ್ 4ರಂದು ಹಾಸನದ ಗ್ರಾಮಾಂತರ ಮತ್ತು ನಗರ ಪ್ರದೇಶಗಳ ಕೆ.ಎಫ್.ಸಿ.ಎಸ್.ಸಿ ಗೋದಾಮಿನಿಂದ 120 ಗೋಧಿ ಚೀಲ ತುಂಬಿಕೊಂಡು ಹೊರಟ ಲಾರಿ ನಗರದ ಬಡಾವಣೆಯೊಂದರಲ್ಲಿ ಮನೆಯೊಂದನ್ನು ಸೇರಿಬಿಟ್ಟಿತು. ಈ ವಿಚಾರ ನಗರದಾದ್ಯಂತ ಸುಳಿದಾಡಿದರೂ ಹೊಂಬಾಳೆಗೌಡ ಮಾತ್ರ ಸ್ಥಳಕ್ಕೆ ಬರಲೇ ಇಲ್ಲ. ಕೊನೆಗೆ ಎಎಸ್‌ಪಿ ನಿರ್ದೇಶನದ ಮೇರೆಗೆ ಸ್ಥಳಕ್ಕೆ ಬಂದ ಒಬ್ಬ ಪೇದೆ ಅನಾಮತ್ತು ಹತ್ತು ಸಾವಿರ ಜೇಬಿಗಿಳಿಸಿಕೊಂಡು ಜಾಗ ಖಾಲಿ ಮಾಡಿದ. ಇದು ಹೊಂಬಾಳೆಗೌಡನ ಬೆಳಕಿಗೆ ಬಂದ ಕರ್ಮಕಾಂಡ. ಬೆಳಕಿಗೆ ಬಾರದೇ ಕತ್ತಲಲ್ಲೇ ಕರಗುತ್ತಿರುವುದು ಇನ್ನೆಷ್ಟಿದೆಯೋ?

ತಿಂಗಳಿಗೆ ಎರಡೂವರೆ ಲಕ್ಷ ಮಾಮೂಲಿ

ಹಾಸನ ಜಿಲ್ಲೆಯ ನ್ಯಾಯಬೆಲೆ ಅಂಗಡಿಗಳಿಗೆ ಮತ್ತು ಕೂಲಿಗಾಗಿ ಕಾಳು ಯೋಜನೆಗೆ ಎಫ್‌ಸಿಐನಿಂದ ಒಂಭತ್ತು ಕೆಎಫ್‌ಸಿಎಸ್‌ಸಿ ಗೋಡೌನ್‌ಗಳಿಗೆ ಪಡಿತರ ಧಾನ್ಯ ಸಾಗಾಣಿಕೆ ಮಾಡಲಾಗುತ್ತದೆ. ಹೀಗೆ ಸಾಗಿಸಲಾಗುವ ಪ್ರತಿ ಚೀಲದಲ್ಲಿ 101 ಕೆ.ಜಿ ಅಕ್ಕಿ ಇರಲೇಬೇಕೆಂಬ ನಿಬಂಧನೆಯನ್ನೂ ಸರ್ಕಾರ ಮಾಡಿದೆ. ಆದರೆ ಕೆ.ಎಫ್.ಸಿ.ಎಸ್.ಸಿ ಗೋಡೌನ್‌ಗಳಿಂದ ಜಿಲ್ಲೆಯ 250 ನ್ಯಾಯಬೆಲೆ ಅಂಗಡಿಗೆ ತಲುಪುವ ಚೀಲಗಳಲ್ಲಿ ಇರುವ ಧಾನ್ಯ ಹೆಚ್ಚೆಂದರೆ 95 ಕೆ.ಜಿ. ದಾಟುವುದೇ ಇಲ್ಲ, ಅಲಾಟ್‌ಮೆಂಟ್ ಒಂದಕ್ಕೆ 800ರಿಂದ 900 ಲೋಡ್ ಧಾನ್ಯ ಸರಬರಾಜಾಗುತ್ತಿದ್ದು ಪ್ರತೀ ಚೀಲದಿಂದ ಐದೈದು ಕೆಜಿ ತಿಂದರೂ ಎಷ್ಟೊಂದು ದುಡ್ಡಾಯಿತು? ಹೀಗೆ ಮಧ್ಯವರ್ತಿಗಳು ತಿಂದ ಧಾನ್ಯದಲ್ಲಿ ಹೊಂಬಾಳೆಗೌಡನಿಗೂ ಪಾಲಿರುತ್ತದೆ. ಹೀಗೆ ಆತ ಏನಿಲ್ಲವೆಂದರೂ ತಿಂಗಳಿಗೆ ಎರಡೂವರೆ ಲಕ್ಷ ಕಮಾಯಿಸುತ್ತಾನೆ. ಯಾವುದೇ ನ್ಯಾಯಬೆಲೆ ಅಂಗಡಿಯವರು ಈತನಿಗೆ ಮಾಮೂಲು ಕೊಡುವುದನ್ನು ನಿಲ್ಲಿಸಿದರೆ ಈತ ಹಿಂದೂಮುಂದು ನೋಡದೆ ಅವರ ಲೈಸನ್ಸ್‌ನ್ನು ರದ್ದುಗೊಳಿಸಿಬಿಡುತ್ತಾನೆ.

ಗೋದಾಮುಗಳಿಂದ ನ್ಯಾಯಬೆಲೆ ಅಂಗಡಿಗೆ ಧಾನ್ಯ ಸರಬರಾಜು ಮಾಡುವುದಕ್ಕೆ ನೀಡುವ ಗುತ್ತಿಗೆಯಲ್ಲೂ ಈತ ಎಗ್ಗಿಲ್ಲದೇ ಕಮಾಯಿಸುತ್ತಾನೆ. ಈ ರೀತಿ ಗುತ್ತಿಗೆ ಪಡೆಯುವ ವಾಹನಗಳು ಯಾವುದೇ ಅಪಘಾತದ ಕೇಸುಗಳನ್ನು ಹೊಂದಿದ್ದರೆ ಅವುಗಳನ್ನು ಕಪ್ಪು ಪಟ್ಟಿಗೆ ಸೇರಿಸಿ ಗುತ್ತಿಗೆ ನಿರಾಕರಿಸಬೇಕು ಎಂಬ ನಿಯಮವೇ ಇದ್ದರೂ ಅದನ್ನು ಹೊಂಬಾಳೆಗೌಡ ಪಾಲಿಸುವುದಿಲ್ಲ, ಅವನಿಗೆ ಕಮೀಷನ್ ಕೊಟ್ಟರೆ ಆಯಿತು. ಎಂಥವರಿಗೂ ಗುತ್ತಿಗೆ ನೀಡಿಬಿಡುತ್ತಾನೆ.

ಹೀಗೆ ನಿರಂತರವಾಗಿ ಹಾಸನ ಜಿಲ್ಲೆಯ ಬಡವರ ಧಾನ್ಯವನ್ನು ಕೊಳ್ಳೆಹೊಡೆದು ಮೇಯುತ್ತಿರುವ ಹೊಂಬಾಳೆಗೌಡನೊಂದಿಗೆ ಕೆಲವು ಪತ್ರಕರ್ತರೂ ಶಾಮೀಲಾಗಿರುವುದು ದುರಂತ. ಇಂತಹ ಒಂದು ಹೆಗ್ಗಣವನ್ನು ತೊಲಗಿಸುವುದಕ್ಕೆ ರಾಜ್ಯಪಾಲರು ಗಮನಹರಿಸುತ್ತಾರೆಯೇ?

■ ಡಿ.ಜಿ.ಗೌಡ

ಹರಪನಹಳ್ಳಿ ಕಾಂಗ್ರೆಸ್ ಅಭ್ಯರ್ಥಿ ಪತ್ರಕರ್ತ ತೌಡೂರ್




ಖ್ಯಾತ ಪತ್ರಕರ್ತ ಚಂದ್ರಶೇಖರ್ ತೌಡೂರ್ ಸಕ್ರಿಯ ರಾಜಕಾರಣಕ್ಕೆ ಬಂದಿದ್ದಾರೆ. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ವಿಧಾನಸಭಾ ಕ್ಷೇತ್ರವೇ ತೌಡೂರರ ಕಾರ್ಯಕ್ಷೇತ್ರವಾಗಲಿದೆ.

ತೌಡೂರ್ ಹರಪನಹಳ್ಳಿಯ ಕಾಂಗ್ರೆಸ್ ಪಾರ್ಟಿ ಅಭ್ಯರ್ಥಿಯಾಗಿ ಸ್ಪರ್ಧಿಸುವುದು ಈಗ ಬಹುತೇಕ ಖಚಿತವಾಗಿದೆ.

ಕಾಂಗ್ರೆಸ್‌ಗೇ ಇದರಿಂದ ಅನುಕೂಲವಾಗಲಿದೆ.

ಕರ್ನಾಟಕದ ಬೇರೆಬೇರೆ ರಂಗಗಳಲ್ಲಿ ಕ್ರಿಯಾಶೀಲರಾಗಿರುವ ಪ್ರತಿಭಾವಂತರು, ಜನಪ್ರಿಯ ವ್ಯಕ್ತಿಗಳು ಕಾಂಗ್ರೆಸ್‌ಗೆ ಬಂದರೆ ಅದರಿಂದ ಪಕ್ಷದ ವರ್ಚಸ್ಸು ಬೆಳೆಯುತ್ತದೆ ಎಂಬುದು ಪಾರ್ಟಿ ಹೈಕಮಾಂಡಿಗೂ ಗೊತ್ತಿದೆ. ತೌಡೂರ್ ಕಾಂಗ್ರೆಸ್ ಸೇರ್ಪಡೆ ಅದಕ್ಕೊಂದು ತಾಜಾ ಉದಾಹರಣೆಯಾಗಿದೆ. ಹರಪನಹಳ್ಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇದ್ದ ಇನ್ನೊಂದು ತಾಜಾ ಸುದ್ದಿ ಏನೆಂದರೆ ಎಂ.ಪಿ. ಪ್ರಕಾಶ್ ಅಲ್ಲಿಂದ ಸ್ಪರ್ಧಿಸಲು ಬಯಸಿದ್ದಾರೆ ಎಂಬುದು.



ಪ್ರಕಾಶ್ ಈಗ ಕಾಂಗ್ರೆಸ್ ಸೇರಿದ್ದಾರಲ್ಲವೆ? ಅದೇ ವೇಳೆ ಅವರ ಹೂವಿನಹಡಗಲಿಯು ಕ್ಷೇತ್ರ ಪುನರ್ ವಿಂಗಡಣೆಯಲ್ಲಿ ಈಗ ಮೀಸಲು ಕ್ಷೇತ್ರವಾಗಿ ಬದಲಾಗಿರುವುದರಿಂದ ಪ್ರಕಾಶ್ ಪಕ್ಕದ ದಾವಣಗೆರೆ ಜಿಲ್ಲೆಯ ಹರಪನಹಳ್ಳಿಗೆ ಬರುತ್ತಾರೆಂಬ ರೂಮರ್ ಇತ್ತು. ಅದನ್ನು ಪುಷ್ಟೀಕರಿಸುವಂತೆ ಪ್ರಕಾಶ್ ಸಹ ಒಂದೆರಡು ಬಾರಿ ಹರಪನಹಳ್ಳಿಗೆ ಭೇಟಿ ನೀಡಿದ್ದೂ ಉಂಟು. ಆದರೆ ಈ ಬಗ್ಗೆ ರಾಜ್ಯ ಕಾಂಗ್ರೆಸ್ ನಾಯಕರಲ್ಲಿ ಬಹಳ ಚರ್ಚೆಗಳಾಗಿ ಕೊನೆಗೆ ಚಂದ್ರಶೇಖರ್ ತೌಡೂರರೇ ಅಭ್ಯರ್ಥಿಯಾಗುವಂತೆಯೂ ಪ್ರಕಾಶ್‌ಗೆ ಬಳ್ಳಾರಿ ಜಿಲ್ಲೆಯಲ್ಲೇ ಒಂದು ಸುರಕ್ಷಿತ ಕ್ಷೇತ್ರ ಹುಡುಕುವುದು ಎಂತಲೂ ತೀರ್ಮಾನವಾಗಿದೆ ಎನ್ನಲಾಗಿದೆ.

ರಾಜ್ಯದ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾಗಿರುವ ಹರಪನಹಳ್ಳಿ ದಶಕಗಳ ಕಾಲದಿಂದಲೂ ಕಾಂಗ್ರೆಸ್‌ನ ಭದ್ರಕೋಟೆಯಾಗಿದೆ. ಇದು ಮೊದಲಿಂದಲೂ ಮೀಸಲು ಕ್ಷೇತ್ರವಾಗಿದ್ದು ಈಗ ಜನರಲ್ ಆಗಿದೆ. ಕಳೆದ ಬಾರಿ ಇಲ್ಲಿಂದ ಗೆದ್ದು ಬಂದಿದ್ದ ಹರಮೇಶ್ವರ ನಾಯಕ್ ಸಹ ಕಾಂಗ್ರೆಸ್‌ನವರೇ.

ಕಳೆದ ಮೂರು ದಶಕಗಳಿಂದಲೂ ಪತ್ರಕರ್ತರಾಗಿ ಕೆಲಸ ಮಾಡಿಕೊಂಡು ಬಂದಿರುವ ತೌಡೂರ್ ಲಂಕೇಶ್ ಪತ್ರಿಕೆ, ಪ್ರಜಾವಾಣಿ ಪತ್ರಿಕೆಗಳ ಮೂಲಕ ರಾಜ್ಯವ್ಯಾಪಿ ಪರಿಚಿತ ಹೆಸರು. ಜೊತೆಗೆ ಉದಯ ಟಿವಿಯ ಸುದ್ದಿ ಸಂಪಾದಕರಾಗಿ, ಜನಪ್ರಿಯ ವಿಶ್ವ ಪರ್ಯಟನೆ ಕಾರ್ಯಕ್ರಮದ ಮೂಲಕ ಅವರದ್ದು ಚಿರಪರಿಚಿತ ಮುಖವೂ ಹೌದು.

ಹರಪನಹಳ್ಳಿಯಲ್ಲಿ ಜನತಾದಳಕ್ಕೆ ಅಂಥ ವರ್ಚಸ್ಸೇನೂ ಇಲ್ಲ. ಸ್ಥಳೀಯ ಲೀಡರ್‌ಗಳಾದ ವಿಶ್ವನಾಥಯ್ಯ, ಎಂ.ಪಿ. ನಾಯಕ್ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ತೌಡೂರ್‌ಗೆ ಪ್ರತಿಸ್ಪರ್ಧಿ ನೀಡುವಂಥ ಶಕ್ತಿಶಾಲಿಗಳೇನಲ್ಲ ಇವರು.



ಇನ್ನು ಬಿಜೆಪಿಯಿಂದ ನಂಜನಗೌಡ, ನಾಗರಾಜ್ ಎಂಬ ಯುವಕರು ಟಿಕೆಟ್‌ಗಾಗಿ ಓಡಾಟ ಆರಂಭಿಸಿದ್ದಾರೆ. ಇವರ ಪೈಕಿ '2 ಕೋಟಿ ಖರ್ಚು ಮಾಡ್ತೀನಿ' ಎನ್ನುತ್ತಿರುವ ನಂಜನಗೌಡರು ದುಡ್ಡಿದ್ದರೆ ಸಾಕು ಎಲೆಕ್ಷನ್ ಗೆಲ್ಲಿಸಿ ಅಂದುಕೊಂಡಿರುವುದೇ ಆತನ ಹುಂಬತನಕ್ಕೆ ಸಾಕ್ಷಿಯಾಗಿದೆ.

ಹಾಲಿ ದಾವಣಗೆರೆ ಸಂಸದ ಕ್ಷೇತ್ರ ಬಿಜೆಪಿ ಕೈಲಿರುವುದರಿಂದ ಜಿಲ್ಲೆ ಪೂರ್ತಿ ನಮ್ಮವರೇ ಶಾಸಕರಾಗಿ ಗೆದ್ದು ಬರಲಿ ಅಂತ ಬಿಜೆಪಿ ಬಯಸುತ್ತಿದೆ. ಆದರೆ ಹರಪನಹಳ್ಳಿ ಮಟ್ಟಿಗೆ ಅದು ಅಸಾಧ್ಯ.

ನಲವತ್ತು ಸಾವಿರ ಲಿಂಗಾಯತರು, ತಲಾ ಇಪ್ಪತ್ತು ಸಾವಿರದಂತೆ ಕುರುಬರು, ಪರಿಶಿಷ್ಟ ಜಾತಿ, ಮುಸ್ಲಿಂ ಮತದಾರರು ಇಲ್ಲಿದ್ದಾರೆ. ಕಾಂಗ್ರೆಸ್‌ನ ಚಂದ್ರಶೇಖರ್ ತೌಡೂರ್ ಸ್ವತಃ ಲಿಂಗಾಯತರಾಗಿದ್ದು ಸಿದ್ಧರಾಮಯ್ಯನವರ ಬೆಂಬಲವನ್ನು ಹೊಂದಿರುವುದರಿಂದ ಕುರುಬರ, ದಲಿತ-ಮುಸ್ಲಿಮರ ಓಟು ಪಡೆಯುವುದು ಕಷ್ಟವಾಗಲಾರದು.

ಅತೀ ಮುಖ್ಯವಾಗಿ ಕಾಂಗ್ರೆಸ್ ಕಮ್ಯಾಂಡರ್ ಡಿ.ಕೆ. ಶಿವಕುಮಾರ್ ಬೆಂಬಲ ತೌಡೂರ್‌ಗಿದೆ.

ಜನಪರ ಕಾಳಜಿ, ನೇರ ದಿಟ್ಟ ಮಾತುಗಾರ ತೌಡೂರ್ ಹರಪನಹಳ್ಳಿ ಇಡೀ ಕ್ಷೇತ್ರವನ್ನು ಹಾಗೇ ಹಿಂದುಳಿದ ತಾಲ್ಲೂಕಾಗಿ ಉಳಿಯಲು ಬಿಡಬಾರದು, ಆಧುನಿಕ ಕರ್ನಾಟಕ ಸಾಗುತ್ತಿರುವ ವೇಗಕ್ಕೆ ಬದಲಾಯಿಸಬೇಕೆಂದು ಹೊರಟಿದ್ದಾರೆ. ಮುಂದೆ ಬರಲಿರುವ ಚುನಾವಣೆ ಅವರ ಪಾಲಿನ ಅಗ್ನಿಪರೀಕ್ಷೆಯಾಗಲಿದೆ.

ಶೇಷಾದ್ರಿಪುರಂ ಕಾಲೇಜ್

ಐಲು ಪ್ರಿನ್ಸಿಪಾಲ್ ದೊರೈರಾಜ್

ಬೆಂಗಳೂರಿನ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾಗಿರುವ ಶೇಷಾದ್ರಿಪುರಂ ಕಾಲೇಜ್ ಈಗ ಅವಿವೇಕಿಗಳ ಕೈಗೆ ಹೋಗಿ ಅದ್ವಾನಗಳ ಕೇಂದ್ರವಾಗಿ ಬದಲಾಗಿ ಹೋಗಿದೆ. ಪ್ರಿನ್ಸಿಪಲ್ ದೊರೈರಾಜ್ ಇದರ ಕಾರಣಕರ್ತ.

ಅದೇ ಕಾಲೇಜಿನಲ್ಲಿ ಕಾಮರ್ಸ್ ವಿಭಾಗದ ಎಚ್‌ಓಡಿಯಾಗಿದ್ದ ದೊರೈರಾಜ್ 2006 ರಲ್ಲಿ ಪ್ರಿನ್ಸಿಪಾಲರಾಗಿ ಬಂದರು. ಯಾವುದೇ ದಕ್ಷತೆ, ಕ್ರಿಯಾಶೀಲತೆಯಿರದಿದ್ದರೂ ಕೇವಲ ಸೀನಿಯಾರಿಟಿ ಮೇಲೆ ಪ್ರಿನ್ಸಿಪಾಲ್ ಕುರ್ಚಿ ಗಿಟ್ಟಿಸಿದ ದೊರೈರಾಜ್‌ರಿಂದಾಗಿ ಈಗ ಇಡೀ ಕಾಲೇಜಿನ ಅಕಾಡೆಮಿಕ್ ವಾತಾವರಣವೇ ಹದಗೆಟ್ಟು ಹೋಗಿದೆ.


ಒಂದು ಉದಾಹರಣೆಯ ಮೂಲಕ ಹೇಳಬೇಕೆಂದರೆ ಯಾವುದಾದರೂ ಪರೀಕ್ಷೆಗಳು ಮುಗಿದ ಮೇಲೂ ಅಥವಾ ಪರೀಕ್ಷೆ ನಡೆಯುವ ದಿನವೇ ವಿದ್ಯಾರ್ಥಿಗಳಿಗೆ ಪಾಠ ಮಾಡುವ ವಿಚಾರ ನೀವೆಲ್ಲಾದರೂ ಕೇಳಿದ್ದೀರಾ.

ದೊರೈರಾಜ್ ಇಂಥ ಪವಾಡಗಳನ್ನೆಲ್ಲಾ ನಡೆಸುತ್ತಿದ್ದಾರೆ.

ಕಳೆದ ನವೆಂಬರ್‌ನಲ್ಲಿ ಬಿಎಸ್ಸಿ ವಿದ್ಯಾರ್ಥಿಗಳಿಗೆ ಸೆಮಿಸ್ಟರ್‌ನ ಪ್ರಾಕ್ಟಿಕಲ್ ಪರೀಕ್ಷೆಗಳು ನವೆಂಬರ್ 5 ರಂದು ಶುರುವಾಗಿದ್ದವು. ಆದರೆ ಈ ದೊರೈ ಎಂಬ ತುಘಲಕ್ ದರ್ಬಾರು ಎಷ್ಟು ವಿಚಿತ್ರ ಎಂದರೆ ನವೆಂಬರ್ 6ರಿಂದ 13ರವರೆಗೆ ಥಿಯರಿ ಪ್ರಾಕ್ಟಿಕಲ್ ತರಗತಿ ನಡೆದಿರುವುದಾಗಿ ಅಟೆಂಡೆನ್ಸ್ ರಿಜಿಸ್ಟರ್‌ನಲ್ಲಿ ಹಾಕಿಸಿದ್ದಾರೆ. ಹಾಗಾದರೆ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೋ ಅಥವಾ ತರಗತಿಗೋ?

ದೊರೈ ಬಳಿಯಿರುವ ದಾಖಲೆಗಳನ್ನು ಚೆಕ್ ಮಾಡಿದರೆ ವಿದ್ಯಾರ್ಥಿಗಳು ಒಂದೇ ದಿನ ಒಂದೇ ಸಮಯದಲ್ಲಿ ಎರಡೂ ಕಡೆ ಹಾಜರಾಗಿದ್ದರಂತೆ!

ಅಷ್ಟೇ ಅಲ್ಲ ಬೆಂಗಳೂರು ವಿ.ವಿ. ನಿಯಮದ ಪ್ರಕಾರ ಒಂದು ಶೈಕ್ಷಣಿಕ ಸೆಮಿಸ್ಟರ್ ಅವಧಿಯಲ್ಲಿ ಕಡ್ಡಾಯವಾಗಿ 90 ದಿನಗಳ ಪಾಠ ನಡೆಯಬೇಕು. ಆದರೆ ಕಾಲೇಜ್‌ನ ಬೋಧನಾ ಸಿಬ್ಬಂದಿ ಬೇಕಾಬಿಟ್ಟಿ ಪಾಠ ಮಾಡಿದ್ದರಿಂದ 90 ದಿನದ ಕೋಟಾ ತುಂಬಲು ಅಕ್ಟೋಬರ್ 15 ರಿಂದ ನವೆಂಬರ್ 14 ರವರೆಗೆ ತರಗತಿಗಳು ನಡೆದಿರುವುದಾಗಿ ಬಿಂಬಿಸಿ ಎಲ್ಲಾ ವಿದ್ಯಾರ್ಥಿಗಳಿಗೂ ಹೋಲ್‌ಸೇಲಾಗಿ 100% ಅಟೆಂಡೆನ್ಸ್ ಕೊಡಿಸಿ ಬಿಟ್ಟಿದ್ದಾರೆ.



ಕೆ.ಎಂ. ನಂಜಪ್ಪ


ಇವೆಲ್ಲಾ ಬಹುತೇಕ ಬೋಗಸ್!

ಈ ಅದ್ವಾನಗಳು ಸಾಲದೆಂಬಂತೆ ಬೋಧನಾ ಸಿಬ್ಬಂದಿಗೆ ಅದರಲ್ಲೂ ಮಹಿಳಾ ಸಿಬ್ಬಂದಿಗೆ ವಿಪರೀತ ಮಾನಸಿಕ ಕಿರುಕುಳ ನೀಡುವ ಚಾಳಿಯೂ ದೊರೈರಾಜ್‌ಗಿದೆ. ಈತ ಪ್ರಿನ್ಸಿಪಾಲ್ ಆಗಿ ಬಂದ ಮೇಲೆ ಕನಿಷ್ಠ 12 ಮಂದಿ ಮಹಿಳಾ ಲೆಕ್ಚರರ್‌ಗಳು ಶೇಷಾದ್ರಿಪುರಂ ಕಾಲೇಜ್ ಬಿಟ್ಟು ಬೇರೆಡೆ ಹೊರಟುಹೋಗಿದ್ದಾರೆ. ಒಬ್ಬ ಲೆಕ್ಚರರ್‌ಗೆ ಗರ್ಭಪಾತವಾಗಿ ರಜೆ ಕೇಳಲು ಬಂದರೆ 'ರಜಾನೂ ಇಲ್ಲ, ಗಿಜಾನೂ ಇಲ್ಲ, ಬೇಕಿದ್ರೆ ರಿಸೈನ್ ಮಾಡಿ ಹೋಗ್ರಿ' ಎನ್ನುವ ಕ್ರೌರ್ಯವನ್ನು ದೊರೈರಾಜ್ ತೋರಿಸಿದ್ದಾರೆ.

ಕಾಲೇಜಿನ ಮುಖ್ಯಸ್ಥನೊಬ್ಬ ಹೀಗೆ ಅಮಾನವೀಯವಾಗಿ ವರ್ತಿಸಿದರೆ ಉಳಿದ ಯಾರಿಗಾದರೂ ಕೆಲಸದಲ್ಲಿ ಶ್ರದ್ಧೆ-ಶಿಸ್ತು ಉಳಿಯಲು ಸಾಧ್ಯನಾ?

ಆಡಳಿತದಲ್ಲಿನ ಈ ತಂಟೆತರಲೆಗಳ ನಡುವೆ ವಿದ್ಯಾರ್ಥಿಗಳಿಗೂ ದೊರೈರಾಜ್‌ರ ಕಿರುಕುಳ ಶುರುವಾಗಿದೆ.

ಕಳೆದ ಅಕಾಡೆಮಿಕ್ ವರ್ಷದಲ್ಲಿ ಈ ದೊರೈರಾಜ್ ಒಂದು ದಿನ ವಿಚಿತ್ರ ಆದೇಶವೊಂದನ್ನು



ದೊರೈರಾಜ್


ಹೊರಡಿಸಿ ಇನ್ನು ಮೇಲೆ ಎಲ್ಲಾ ವಿದ್ಯಾರ್ಥಿಗಳೂ ಕೋಟ್ (blazer) ಹಾಕಿಕೊಂಡು ಬರಬೇಕು ಎಂದು ಹೇಳಿಬಿಟ್ಟರು. ಅದರಂತೆ ಪ್ರತಿಯೊಬ್ಬರಿಂದಲೂ ತಲಾ 600 ರೂ. ಕಿತ್ತುಕೊಂಡು ಬ್ಲೇಸರ್ ಸರಬರಾಜು ಮಾಡಲಾಯಿತು. ಜುಜುಬಿ ನಾನ್ನೂರು ರೂಪಾಯಿಗೂ ಬಾಳದ ಈ ಕಳಪೆ ಬ್ಲೇಸರ್‌ಗಳಿಗೆ ಹುಡುಗರು ಆರುನೂರು ತೆತ್ತಿದ್ದರು. ಈ ಕಾಲೇಜಿನಲ್ಲಿ ಒಟ್ಟು ಎರಡು ಸಾವಿರದ ಐನೂರು ವಿದ್ಯಾರ್ಥಿಗಳಿದ್ದಾರೆ. ತಲಾ ಇನ್ನೂರು ಲಾಭ ಎಂದಿಟ್ಟುಕೊಂಡರೂ 200x2500 ಅಂದರೆ ಎಷ್ಟಾಯಿತು?

ಭರ್ತಿ ಐದು ಲಕ್ಷ ರೂಪಾಯಿಗಳು!

ಡಿಗ್ರಿ ಲೆವೆಲ್ ವಿದ್ಯಾರ್ಥಿಗಳಿಗೆ ಯಾವ ಕಾಲೇಜುಗಳಲ್ಲೂ ಯೂನಿಫಾರಂ ಇರಲ್ಲ, ಡ್ರೆಸ್ ಕೋಡ್ ಸಹ ಇಲ್ಲ, ಹಾಗಿದ್ದಾಗ ವಿಶ್ವವಿದ್ಯಾಲಯದ ಯಾವ ನಿಯಮ, ಕಾನೂನಿನಡಿ ಈ ಕೋಟ್ ಕಡ್ಡಾಯ ಮಾಡಲಾಗಿದೆ.

ಬೆಂಗಳೂರು ವಿ.ವಿ.ಯ ವೈಸ್‌ಛಾನ್ಸಲರ್ ರಂಗನಾಥ್‌ರವರು ಹಾಗೂ ಸೆನೆಟ್ ಮೆಂಬರ್‌ಗಳು ಶೇಷಾದ್ರಿಪುರಂ ಕಾಲೇಜಿನಲ್ಲಿ ಏನೇನು ಅವ್ಯವಹಾರಗಳಾಗಿವೆ ಎಂಬ ಬಗ್ಗೆ ತನಿಖೆ ನಡೆಸಲಿ. ಅದೇ ವೇಳೆ ಮ್ಯಾನೇಜ್‌ಮೆಂಟ್‌ನವರು ದೊರೈರಾಜ್‌ರ ಅವಿವೇಕಿ ಆಡಳಿತದಿಂದ ಏನೇನು ಅನಾಹುತಗಳಾಗುತ್ತಿವೆ ಎಂಬ ಬಗ್ಗೆ ಗಮನಹರಿಸಲಿ, ಸಂಸ್ಥೆಯ ಅಧ್ಯಕ್ಷ ಕೆ.ಎಂ. ನಂಜಪ್ಪನವರ ಮೇಲೆ ಈ ಜವಾಬ್ದಾರಿಯಿದೆ.

ನಮ್ಮ ದುಡ್ಡಿನಲ್ಲಿ ಅಮೆರಿಕಾದ ಸೇವಕರು



ಇತ್ತೀಚೆಗೆ ಕೇಂದ್ರದ ಮಾನವ ಸಂಪನ್ಮೂಲ ಇಲಾಖೆಯ ರಾಜ್ಯಮಂತ್ರಿ ಪುರಂದೇಶ್ವರಿ ರಾಜ್ಯಸಭೆಯಲ್ಲಿ ಬಹಳ ಹೆಮ್ಮೆಯಿಂದ ಹಲವು ಅಂಕಿ-ಅಂಶಗಳನ್ನು ಪ್ರಕಟಿಸಿದರು. ಅವರ ಪ್ರಕಾರ ಇವತ್ತು ಅಮೆರಿಕದ ಪ್ರತಿಷ್ಠಿತ NASA ಸಂಸ್ಥೆಯ ಒಟ್ಟಾರೆ ಸಿಬ್ಬಂದಿಗಳಲ್ಲಿ ಶೇ. 36 ವಿಜ್ಞಾನಿಗಳು ಭಾರತದ ಮೂಲದವರಾಗಿದ್ದಾರೆ. ಅಷ್ಟೇ ಅಲ್ಲ, ಇವತ್ತು ಅಮೆರಿಕಾದಲ್ಲಿರುವ ವೈದ್ಯರಲ್ಲಿ ಶೇ. 38, ಮೈಕ್ರೋಸಾಫ್ಟ್ ಕಂಪನಿಯಲ್ಲಿ ಶೇ. 34 , ಐಬಿಎಂ ಕಂಪನಿಯಲ್ಲಿ ಶೇ. 28, ಇಂಟಲ್‌ನಲ್ಲಿ ಶೇ. 17 ರಷ್ಟು ಜನ ನೌಕರರು ಭಾರತೀಯ ಮೂಲದವರಾಗಿದ್ದಾರೆ. ಇದೆಲ್ಲದರ ಅರ್ಥ, ಪುರಂದೇಶ್ವರಿಯ ಪ್ರಕಾರ, ಭಾರತೀಯ ಮೂಲದವರು ಇವತ್ತು ಎಲ್ಲಾ ಕ್ಷೇತ್ರಗಳಲ್ಲೂ ದಾಪುಗಾಲು ಹಾಕುತ್ತಿದ್ದಾರಲ್ಲದೆ, ಅಮೆರಿಕಾದಂತಹ ದೇಶದ ಪ್ರತಿಷ್ಠಿತ ಕಂಪನಿಗಳಲ್ಲೂ ಭಾರತೀಯರು ಅನಿವಾರ್ಯವಾಗಿದ್ದಾರೆ.

ಆದರೆ ಪುರಂದೇಶ್ವರಿಯವರ ಈ ಅಂಕಿ ಅಂಶಗಳನ್ನು ಕಂಡು ಭಾರತೀಯ ಮೂಲದವರೇ ಆದ, ಅದೇ NASA ದಲ್ಲಿ ವಿಜ್ಞಾನಿಯಾಗಿ ಹಲವು ವರ್ಷಗಳ ಕಾಲ ದುಡಿದ ಸುಜಿತ್ ಸರಫ್ ಎಂಬುವವರಿಗೆ ಅಚ್ಚರಿಯಾಗಿದೆ. "ನಾಸಾದಲ್ಲಿ ಕಾರ್ಯನಿರ್ವಹಿಸುತ್ತಿರುವ ಹತ್ತರಲ್ಲಿ ನಾಲ್ಕು ಜನ ಭಾರತೀಯವರಾಗಿದ್ದರೆ ನಾನು ಹೇಗೆ ಅಪ್ಪೊಂದು ಗುಪ್ತಾ, ವೆಂಕಟೇಶ್, ಸಿಂಗ್ ಮತ್ತು ಶ್ರೀನಿವಾಸರನ್ನು ಭೇಟಿ ಆಗಲೇ ಇಲ್ಲ" ಎಂದು ಚಿಂತಿಸಿದ ಸರಫ್‌ರವರು ತಮ್ಮದೇ ಆದ ತನಿಖೆಯನ್ನು ಅಂತರ್‌ಜಾಲದಲ್ಲಿ ನಡೆಸಿದ್ದಾರೆ.

ಈಗ ಅಮೆರಿಕಾದಲ್ಲಿರುವ ಎನ್‌ಆರ್‌ಐಗಳು, ಭಾರತೀಯ ತಂದೆ ಅಥವಾ ತಾಯಿಗೆ ಜನಸಿದವರು, ಎರಡನೆ ತಲೆಮಾರಿನ ಭಾರತೀಯರಾಗಿದ್ದು ಈಗ ಅಮೆರಿಕದ ಪ್ರಜೆಗಳಾಗಿರುವವರು, ಇನ್ನೂ ಕಾಲೇಜುಗಳಲ್ಲಿ ಓದುತ್ತಿರುವ ಭಾರತೀಯ ವಿದ್ಯಾರ್ಥಿಗಳು, ಹೀಗೆ ಎಲ್ಲಾ ಬಗೆಯ ಜನರ ಸಂಖ್ಯೆಯನ್ನು ಅಳೆದು ಸುರಿದ ಸರಫ್ ಕೊನೆಗೆ ಕೊಟ್ಟಿರುವ ಅಂಕಿ ಅಂಶಗಳು ಹೀಗಿವೆ: NASA ದಲ್ಲಿ ಕೆಲಸ ಮಾಡುತ್ತಿರುವ ವಿಜ್ಞಾನಿಗಳ ಸಂಖ್ಯೆ ಎಷ್ಟೇ ತಿಪ್ಪರಲಾಗ ಹಾಕಿದರೂ ಶೇ. 6 ಕ್ಕಿಂತ ಹೆಚ್ಚಿಲ್ಲ! ಹಾಗೆಯೇ ಅಲ್ಲಿನ ಉದ್ಯಮಗಳಲ್ಲಿ ಅವರ ಸಂಖ್ಯೆ ಶೇ. 10 ನ್ನೂ ಮೀರುವುದಿಲ್ಲ.

ಆದರೂ ಪುರಂದೇಶ್ವರಿ ವಿದೇಶಿ ಕಂಪನಿಗಳಿಗೆ 'ಸೇವೆ' ಸಲ್ಲಿಸುತ್ತಿರುವ ಭಾರತೀಯರ ಸಂಖ್ಯೆಯನ್ನು ಏಕೆ ಹೆಚ್ಚಿಸಿದರು? ಉತ್ತರ ಸುಲಭ. ಮಾಜಿ ಭಾರತೀಯರು NASA ಗೆ ಸಲ್ಲಿಸುತ್ತಿರುವ ಅಪಾರ ಸೇವೆಯನ್ನೇ ಆಧರಿಸಿ ಆಕೆ ಭಾರತದಲ್ಲಿ ಉನ್ನತ ಶಿಕ್ಷಣಕ್ಕೆ ಹೆಚ್ಚು ಹಣವನ್ನು ಸರಕಾರ ನೀಡಬೇಕು ಎಂದು ವಾದಿಸಿದ್ದರು.


ಅಂದರೆ ನಮ್ಮ ತೆರಿಗೆ ದುಡ್ಡು ಅಮೆರಿಕದ ನಾಸಾ, ಬಿಲ್ ಗೇಟ್ಸ್‌ನ ಮೈಕ್ರೋಸಾಫ್ಟ್‌ನಂತಹ ಕಂಪನಿಗಳಿಗೆ 'ಸೇವಕ'ರನ್ನು ಒದಗಿಸಲು ವೆಚ್ಚವಾಗಬೇಕು.

ಜೈ ಭಾರತ ಮಾತೆ!

ಗೂಢಚರ್ಯೆಯನ್ನು ಶಿಕ್ಷಿಸಿ ಸರಬ್‌ಜಿತ್‌ನನ್ನು ರಕ್ಷಿಸಿ

(2ನೇ ಪುಟದಿಂದ)

ಆಗಿರುವಾಗ ದೇಶ ವಿರೋಧಿ ಗೂಢಚರ್ಯೆಗಳು ಕೊಲೆ ಅಥವಾ ಇನ್ನಿತ್ಯಾದಿ ಸಾಮಾನ್ಯ ಅಪರಾಧಗಳಿಗಿಂತ ತೀವ್ರ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಹೀಗಾಗಿ ಅಲ್ಲಿ ಅಪರಾಧಿಯನ್ನು ಒಬ್ಬ ಸಾಮಾನ್ಯ ಮನುಷ್ಯ ಎಂಬ ನೆಲೆಗಟ್ಟಿನಲ್ಲಿ ನೋಡುವುದೇ ಇಲ್ಲ. ಆತನಿಗೆ ಕೊಡುವ ಶಿಕ್ಷೆ ಆತನ ವೈಯಕ್ತಿಕ ಅಪರಾಧಗಳಿಗೆ ಕೊಡುವ ಶಿಕ್ಷೆಯಾಗಿರುವುದಿಲ್ಲ. ಬದಲಿಗೆ ಅದು ಆತನ ಮೂಲಕ ಆತನ ದೇಶಕ್ಕೆ ಕೊಡುತ್ತಿರುವ ಶಿಕ್ಷೆಯೆಂದೇ ಎಲ್ಲಾ ರಾಷ್ಟ್ರ ಪ್ರಭುತ್ವಗಳು ಭಾವಿಸುತ್ತವೆ.


ತಾನು ಗೂಢಚಾರಿ ಎಂದು ಒಪ್ಪಿಕೊಳ್ಳುತ್ತಿರುವ ಕಾಶ್ಮೀರ್ ಸಿಂಗ್

ಹೀಗಾಗಿ ಮಾನವೀಯ ನೆಲೆಗಟ್ಟಿನಲ್ಲಿ ಸರಬ್‌ಜಿತ್ ಸಿಂಗ್‌ರ ಮೇಲಿರುವ ಆರೋಪಗಳನ್ನು ಕ್ಷಮಿಸಿ ಬಿಡುಗಡೆ ಮಾಡಬೇಕೆಂಬ ಭಾರತ ಸರ್ಕಾರದ ಮನವಿಯೇ ಅಪಾಥಭೂತಿತನದ್ದಾಗಿರುತ್ತದೆ. ಏಕೆಂದರೆ ಮಾನವೀಯ ನೆಲೆಗಟ್ಟಿನಲ್ಲಿ ಭಾರತ ಸರ್ಕಾರವಾಗಲೀ, ಪಾಕಿಸ್ತಾನದ ಸರ್ಕಾರವಾಗಲೀ ತಮ್ಮ ತಮ್ಮ ದೇಶಗಳಲ್ಲಿ ಸಾಮಾನ್ಯ ಮನುಷ್ಯರ ಯಾವುದೇ ಅಪರಾಧವನ್ನು ಪರಿಗಣಿಸುವುದಿಲ್ಲ. ಹಾಗೆ ನೋಡಿದರೆ ಸರಬ್‌ಜಿತ್ ಸಿಂಗ್ ಮತ್ತು ಹಲವು ಮಿಸ್ಸಿಂಗ್ ಪಾಕಿಸ್ತಾನದ ಗೂಢಚಾರರ ನಡುವೆ ಮತ್ತೊಂದು ಸಮಾನವಾದ ಅಂಶವೂ ಇದೆ. ಅದು ಅವರಿಬ್ಬರ ಬಡತನ. ಎರಡು ದೇಶಗಳಿಗೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದ ನಂತರವೂ ಬಗೆಹರಿಯದ ಬಡತನ ಮತ್ತು ನಿರುದ್ಯೋಗಗಳೆಂಬ ಅಮಾನವೀಯತೆಯೇ ಅವರನ್ನು ಬಲವಂತದ ದೇಶಭಕ್ತಿಯ ಬಲಿಪಶುಗಳನ್ನಾಗಿ ಮಾಡಿವೆ.



ಸರಬ್‌ಜಿತ್ ಸಿಂಗ್ ಕುಟುಂಬ
©PTI

ಹೀಗಾಗಿ ಸರಬ್‌ಜಿತ್ ಸಿಂಗರ ಅಪರಾಧ ಅಥವಾ ಯಾವುದೇ ಪಾಕಿಸ್ತಾನದ ಗೂಢಾಚಾರ ಮಾಡುವ ಅಪರಾಧದ ಹೊಣೆ ಹೊತ್ತಿಕೊಳ್ಳಬೇಕಿರುವುದು ಆಯಾ ದೇಶಗಳ ಪ್ರಭುತ್ವಗಳೇ. ಆಳುವ ವರ್ಗಗಳೇ. ಶಿಕ್ಷಿಸಬೇಕಿರುವುದು ರಾಷ್ಟ್ರಭಕ್ತಿಯ ಅಮಲನ್ನು ಕುಡಿಸಿ ತಮ್ಮ ಆಸಕ್ತಿಗಳನ್ನು ವಿಸ್ತರಿಸಿಕೊಳ್ಳುವ, ಆ ಕಾರಣಕ್ಕಾಗಿ ಗೂಢಚರ್ಯೆಯನ್ನೂ ಸಹ ಬಳಸಿಕೊಳ್ಳುವ ಎರಡು ದೇಶಗಳ ಪ್ರಭುತ್ವವನ್ನು ಮತ್ತು ಅವರ ಪ್ರಭುತ್ವದ ಅಸ್ತಿತ್ವದ ಭಾಗವೇ ಆಗಿರುವ ಗೂಢಚರ್ಯೆಯೆಂಬ ದೇಶಭಕ್ತಿಯ ಮುಸುಕಿನಲ್ಲಿರುವ ನಯವಂಚಕತನವನ್ನು. ತಮ್ಮ ಬದುಕಿನ ಅನಿವಾರ್ಯತೆಗಳ ಕಾರಣದಿಂದ ತಮ್ಮ ದೇಶದ ಪ್ರಭುತ್ವಗಳ ಹುನ್ನಾರಕ್ಕೆ ಬಲಿಯಾಗಿ ಬೀಳುವ ಸರಬ್‌ಜಿತ್ ಸಿಂಗ್‌ಗಳನ್ನಲ್ಲ.

ಏನಿಲ್ಲವೆಂದರೂ ಗೂಢಚರ್ಯೆ ಎಂಬುದು ಶಾಂತಿ ಸಮಯದಲ್ಲಿ ಒಂದು ದೇಶವು ಮತ್ತೊಂದು ದೇಶದ ಮೇಲೆ ಮಾಡುವ ಮುಸುಕಿನ ಯುದ್ಧವೇ ಆಗಿರುವುದರಿಂದ ಅದರಲ್ಲಿ ಬಂಧಿತರಾಗುವವರನ್ನು ಕನಿಷ್ಟ ಯುದ್ಧ ಕೈದಿಗಳ ರೀತಿ ನಡೆಸಿಕೊಳ್ಳುವ, ಆ ನಿಟ್ಟಿನಲ್ಲಿ ಯುದ್ಧ ಕೈದಿಗಳನ್ನು ನಡೆಸಿಕೊಳ್ಳುವುದು ಹೇಗೆಂದು ಜಿನೀವಾ ಸಮ್ಮೇಳನ ರೂಪಿಸಿರುವ ನೀತಿಗಳನ್ನಾದರೂ ಎಲ್ಲಾ ದೇಶಗಳು ಪಾಲಿಸುವಂತಾಗಬೇಕು.

ನೈಪಾಲ್‌ನ ಗೊಂದಲದ ಬದುಕು, ನಿಲುವು

ವಿ.ಎಸ್. ನೈಪಾಲ್ ಎಂಬ ಲೇಖಕನಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಅದೆಷ್ಟು ಖ್ಯಾತಿ ಇದೆಯೋ ಅಷ್ಟೇ ಕುಖ್ಯಾತಿಯೂ ಇದೆ. ಹಾಗೆಯೇ ಈ ವ್ಯಕ್ತಿಯಲ್ಲಿ ಪ್ರತಿಭೆ ಮತ್ತು ಹುಂಬತನ, ಒಳನೋಟ ಮತ್ತು ಕುರುಡುತನ ಎರಡೂ ಇವೆ. ಈ ಎಲ್ಲ ಅಂಶಗಳನ್ನು ಬಿಚ್ಚಿಡುವ ಪುಸ್ತಕವನ್ನು ಪಾಟ್ರಿಕ್ ಫ್ರೆಂಚ್ ಎಂಬುವವರು ಇತ್ತೀಚೆಗೆ ಬರೆದಿದ್ದಾರೆ. ಅದರಲ್ಲಿರುವ ಹಲವಾರು ಗಮನಾರ್ಹ ಸಂಗತಿಗಳಲ್ಲಿ ಬಾಬರಿ ಮಸೀದಿಯನ್ನು ಕುರಿತದ್ದು ಮತ್ತು ರಾಜಕೀಯದಲ್ಲಿ ಧರ್ಮವನ್ನು ಬೆರೆಸುವುದನ್ನು ಕುರಿತದ್ದು: ಈ ಎರಡೂ ವಿಷಯಗಳ ಬಗ್ಗೆ ನೈಪಾಲ್ ವಿವಿಧ ನಿಲುವುಗಳನ್ನು ತಾಳಿರುವುದು ಅಚ್ಚರಿ ಮೂಡಿಸುತ್ತದೆ.



ಭಾರತೀಯ ಮೂಲದ ನೈಪಾಲ್ ಹುಟ್ಟಿದ್ದು, ಬೆಳೆದದ್ದು ಟ್ರೀನಿಡಾಡ್‌ನಲ್ಲಿ. ಆದರೆ ಆತ ಚಿಕ್ಕವನಾಗಿದ್ದಾಗಿನಿಂದಲೂ ಭಾರತದ ಬಗ್ಗೆ ಅದೆಂತದ್ದೋ ವ್ಯಾಮೋಹ, ಅಷ್ಟೇ ದ್ವೇಷ ಕೂಡ. ಒಮ್ಮೆ ಆತನ ಅಕ್ಕ ಬೆನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಗ ಆಗಿನ್ನೂ 17 ವರ್ಷ ವಯಸ್ಸಿನವನಾಗಿದ್ದ ನೈಪಾಲ್ ಆಕೆಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದ್ದ: "ಆ ಪಾಪಿಷ್ಟ, ಅದಕ್ಷ, ಕುತಂತ್ರಿ ಭಾರತೀಯರಿಗೆ ನೀನು ಬೈಯ್ದದ್ದನ್ನು ಕೇಳಿ ನನಗೆ ಸಂತೋಷವಾಯಿತು. ಮುಂದೊಂದು ದಿನ ಆ ಅಸಹ್ಯದ ಜನರ ಬಗ್ಗೆ, ಅವರ ಶಾಪಗ್ರಸ್ಥ ದೇಶದ ಬಗ್ಗೆ ಒಂದು ಪುಸ್ತಕ ಬರೆಯಬೇಕೆಂದಿದ್ದೇನೆ. ಅದರಲ್ಲಿ ಅವರನ್ನು ಸರಿಯಾಗಿ ತರಾಟೆಗೆ ತೆಗೆದುಕೊಂಡು ಅವರ ಎಲ್ಲಾ ಹೇವರಿಕೆ ತರುವ ಗುಣಗಳನ್ನು ತೆರೆದಿಡುತ್ತೇನೆ."

ಇಂತಹ ಪೂರ್ವಾಗ್ರಹದ ನೈಪಾಲ್ ಪ್ರಥಮ ಬಾರಿಗೆ ಭಾರತಕ್ಕೆ ಭೇಟಿ ನೀಡಿದಾಗ ಆತನಿಗೆ ಎಲ್ಲೆಲ್ಲೂ ಕಂಡಿದ್ದು ಭಾರತೀಯರ ಹೇಲು. ವಿಮಾನ ನಿಲ್ದಾಣದ ಶೌಚಾಲಯದಲ್ಲಿ, ರೈಲು ಕಂಬಿಯ ಪಕ್ಕದಲ್ಲಿ, ಎಲ್ಲ ಕಡೆ ನೈಪಾಲ್‌ನನ್ನ ಸ್ವಾಗತಿಸಿದ್ದು ಭಾರತೀಯರ ಕಕ್ಕಸ್ಸು! ಅದೆಲ್ಲ ಇರಲಿ, ಆಗಿನ ಭಾರತದ ರಾಜಕೀಯವನ್ನು ಕಂಡು ತನ್ನ ಮಿತ್ರನೊಬ್ಬನಿಗೆ ನೈಪಾಲ್ ಬರೆದ ಪತ್ರದಲ್ಲಿ "ರಾಜಕೀಯದಲ್ಲಿ ಧರ್ಮವನ್ನು ಬೆರೆಸುತ್ತಿರುವುದೇ ಈ ದೇಶದ ಶಾಪವಾಗಲಿದೆ. ಇದರಿಂದಾಗಿ ಇಡೀ ದೇಶ ಹಿಂದೂ ಮೂಲಭೂತವಾದಿಗಳ ಕೈಗೆ ಹೋಗಲಿದೆ. ಅದು ಎಲ್ಲಾ ಫ್ಯಾಸಿಸಿಂನಷ್ಟೇ ಅಸಹ್ಯ ಹುಟ್ಟಿಸುವಂತಹದ್ದು" ಎಂದು ಹೇಳಿದ್ದ.

ಆದರೆ ಇದಾದ ಮೂವತ್ತು ವರ್ಷಗಳ ನಂತರ ಹಿಂದೂ ಮೂಲಭೂತವಾದಿಗಳು ಅಯೋಧ್ಯೆಯಲ್ಲಿನ ಬಾಬ್ರಿ ಮಸೀದಿಯನ್ನು ಕೆಡವಿದಾಗ ನೈಪಾಲ್‌ಗೆ ಎಷ್ಟು ಸಂತೋಷವಾಗಿತ್ತೆಂದರೆ ಆಗ ಆತನಿಗೆ ತೀವ್ರ ಬೆನ್ನು ನೋವಿದ್ದರೂ, ನಿಲ್ಲಲೂ ಆಗದಿದ್ದರೂ ಸಂದರ್ಶವೊಂದನ್ನು ನೀಡಿ ಸಂಭ್ರಮಿಸಿದ್ದ. ಆ ಸಂದರ್ಶನದಲ್ಲಿ "ಆ ಜನರನ್ನು ಮಸೀದಿಯ ಗುಮ್ಮಟದ ಮೇಲೆ ಹೊತ್ತೊಯ್ದ ಭಾವೋದ್ರೇಕತೆಯನ್ನು ಅರ್ಥ ಮಾಡಿಕೊಳ್ಳಬೇಕು. ಅದನ್ನು ಕಡೆಗಣಿಸುವಂತಿಲ್ಲ. ಇದು ಕೆಳಗಿನಿಂದ ಬೆಳೆದು ಬಂದಿರುವ ಪ್ರಕ್ರಿಯೆ. ಬುದ್ಧಿವಂತರು ಇದನ್ನು ಅರ್ಥ ಮಾಡಿಕೊಂಡು ಇದು ಮೂಲಭೂತವಾದಿಗಳ ಕೈಯಲ್ಲಿ ಉಳಿಯದಂತೆ ನೋಡಿಕೊಳ್ಳಬೇಕು. ಇದನ್ನು ಉಪಯೋಗಿಸಿಕೊಂಡು ಭಾರತದ ಬೌದ್ಧಿಕ ಬದಲಾವಣೆಗೆ ಪ್ರಯತ್ನಿಸಬೇಕು" ಎಂದಿದ್ದ ನೈಪಾಲ್.

ಸಹಜವಾಗಿಯೇ ಆತನ ಇಂತಹ ಹೇಳಿಕೆಗಳನ್ನು ಹಿಂದೂತ್ವವಾದಿಗಳು ಸಂತೋಷದಿಂದ ಸ್ವೀಕರಿಸಿದ್ದರು. ಇದರಿಂದ ಇನ್ನಷ್ಟು ಉತ್ತೇಜನಗೊಂಡ ನೈಪಾಲ್ ತನ್ನ ಈ ನಿಲುವನ್ನು ಸಮರ್ಥಿಸಿಕೊಂಡೇ ಸಾಗಿದ. "ಮೊಘಲ್ ರಾಜನ ಸಮಾಧಿಯನ್ನು ನಾಶಪಡಿಸಿದ್ದರೊಂದಿಗೆ ಭಾರತದ ಬಡಜನರು ಸ್ಪಂದಿಸುವುದು ತುಂಬಾ ಅದ್ಭುತವಾಗಿದೆ. ಬರುವ ವರ್ಷಗಳಲ್ಲಿ ಅದನ್ನು ಒಂದು ಅತ್ಯದ್ಭುತ ಕ್ಷಣ ಎಂದು ಗುರುತಿಸಲಾಗುತ್ತದೆ. ಭಾರತ ತನ್ನ ಆತ್ಮವನ್ನು ಹಿಂದೆ ಪಡೆಯುವ ಐತಿಹಾಸಿಕ ಘಟನೆ ಅದಾಗಿದೆ" ಎಂದೆಲ್ಲಾ ಹೇಳಿದ್ದಾನೆ ನೈಪಾಲ್.


ಈತನ ಹುಂಬತನ ಎಂತಹದ್ದೆಂದರೆ ಬಾಬ್ರಿ ಮಸೀದಿಯನ್ನು ಕೆಡವಿದ ನಂತರ ಸಂಭವಿಸಿದ ಗಲಭೆಗಳಲ್ಲಿ ನೂರಾರು ಜನರು ಸತ್ತಿದ್ದನ್ನು, ರಕ್ತದೋಕುಳಿ ನಡೆದದ್ದನ್ನು ಕುರಿತು ಪ್ರಶ್ನಿಸಿದರೆ ಆತ ಕೊಟ್ಟ ಉತ್ತರ "ನಾನೇನು ನನ್ನ ಕೈಯಾರೆ ಅವರನ್ನು ಕೊಲ್ಲಲಿಲ್ಲ."

ನೋಬೆಲ್‌ನಂತಹ ಪ್ರತಿಷ್ಠಿತ ಪ್ರಶಸ್ತಿಯನ್ನೂ ಪಡೆದಿರುವ ಸಾಹಿತಿ ನೈಪಾಲ್‌ಗೆ ಕೊಲೆ ಮಾಡುವ ಕೈಗಳು ಬೇರೆಯವರದ್ದಾಗಿದ್ದರೂ ಅದಕ್ಕೆ ಪ್ರಚೋದನೆ ನೀಡುವುದು ತನ್ನಂತಹ, ಎಲ್.ಕೆ. ಅಡ್ವಾಣಿ ಮತ್ತು ನರೇಂದ್ರ ಮೋದಿಯಂತಹ 'ಶುದ್ಧ ಹಸ್ತ'ದ ಜನರ ಮೆದುಳುಗಳು ಎಂಬುದೂ ಗೊತ್ತಿಲ್ಲವೇ?

ನೈಪಾಲ್ ಎಂತಹ ಮೋಸದ, ಗೊಂದಲದ ವ್ಯಕ್ತಿ ಎಂಬುದಕ್ಕೆ ಆತನ ವೈಯಕ್ತಿಕ ಜೀವನವೂ ಒಂದು ನಿದರ್ಶನವಾಗಿದೆ. ಆತ ಪೆಟ್ರಿಷಿಯ ಎಂಬಾಕೆಯನ್ನು ಮದುವೆಯಾಗಿದ್ದರೂ 23 ವರ್ಷಗಳ ಕಾಲ ಮಾರ್ಗರೆಟ್ ಗೂಡಿಂಗ್ ಎಂಬಾಕೆಯೊಂದಿಗೆ ಸಂಬಂಧ ಹೊಂದಿದ್ದ. ತನ್ನ ಹೆಂಡತಿ ಸ್ತನದ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾಗಲೂ ಈತ ಮಾರ್ಗರೆಟ್‌ಳೊಂದಿಗೆ ದೇಶದೇಶ ಅಲೆಯುತ್ತಿದ್ದ. ಪೆಟ್ರಿಷಿಯ ಸತ್ತ ನಂತರವಾದರೂ ತನ್ನನ್ನು ನೈಪಾಲ್ ಮದುವೆಯಾಗುತ್ತಾನೆಂದು ನಂಬಿದ್ದ ಮಾರ್ಗರೆಟ್‌ಗೆ ಕೈಕೊಟ್ಟ. ಇಂಗ್ಲೆಂಡಿನಲ್ಲಿ ಹೆಂಡತಿ ಪೆಟ್ರಿಷಿಯ ಸಾವಿನ ಅಂಚಿನಲ್ಲಿ ನಿಂತಿದ್ದಾಗ ಈತ ಪಾಕಿಸ್ತಾನದಲ್ಲಿ ನದೀರಾ ಎಂಬಾಕೆಯೊಂದಿಗೆ ಸರಸ ಸಲ್ಲಾಪದಲ್ಲಿ ತೊಡಗಿದ್ದ. ತನ್ನ ಬದುಕಿಗೆ ಅಡಚಣೆಯಾಗಿರುವ ಹೆಂಡತಿ ಸಾಯುವುದಕ್ಕೆ ಯಾಕೆ ಇಷ್ಟು ದಿನ ತೆಗೆದುಕೊಳ್ಳುತ್ತಿದ್ದಾಳೆ ಎಂದು ಅವಳನ್ನೇ ಶಪಿಸುತ್ತಿದ್ದ.

ಕೊನೆಗೂ ಪೆಟ್ರಿಷಿಯ ಸತ್ತಳು. ಅವಳ ಅಂತ್ಯಸಂಸ್ಕಾರಗಳನ್ನು ಬೇಕಾಬಿಟ್ಟಿಯಾಗಿ ಮುಗಿಸಿದ ನೈಪಾಲ್ ಮನೆಗೆ ಹಿಂದಿರುಗಿ ಮನೆಯಲ್ಲಿದ್ದ ಅವಳ ಸಾಮಾನುಗಳನ್ನೆಲ್ಲ ಖಾಲಿ ಮಾಡಿದ. ಅದೇ ಸಂಜೆ ಪಾಕಿಸ್ತಾನದಿಂದ ಬಂದ ತನ್ನ ಪ್ರೇಯಸಿ ನದೀರಾಳನ್ನು ಅದೇ ಮನೆಗೆ ಬರಮಾಡಿಕೊಂಡ.

ಇಂತಹ ನೈಪಾಲ್‌ನಿಂದ ಇನ್ನೆಂತಹ ನಿಲುವುಗಳನ್ನು ನಿರೀಕ್ಷಿಸಲು ಸಾಧ್ಯ? ■




ರಷ್ದಿಯ ಹೊಸ ಕನ್ಯೆ

ವಿಖ್ಯಾತ ಲೇಖಕ ಸಲ್ಮಾನ್ ರಷ್ದಿ ತನ್ನ ಮೂರನೆ ಹೆಂಡತಿಯಾಗಿದ್ದ ಪದ್ಮ ಲಕ್ಷ್ಮಿ ಎಂಬ ತಮಿಳ್‌ಹೆಣ್ಣಿನಿಂದ ಸೋಡಾ ಚೀಟಿ ಪಡೆದು ಹಲವಾರು ತಿಂಗಳುಗಳಾದವು. ಆನಂತರ ಆತ ಬೆಂಗಾಲಿ ಯುವತಿಯೊಬ್ಬಳನ್ನು ವರಿಸುತ್ತಿದ್ದಾರೆ ಎಂಬ ಸುದ್ದಿಯೂ ಎಲ್ಲೆಡೆ ಹರಡಿತ್ತು. ಆದರೆ ಈಗ ಬಂದಿರುವ ತಾಜಾ ಸುದ್ದಿಯ ಪ್ರಕಾರ 60 ದಾಟಿರುವ ರಷ್ದಿ ಈಗ ವರಿಸುತ್ತಿರುವುದು 26 ಹರೆಯದ ವಿದ್ಯಾರ್ಥಿನಿಯೊಬ್ಬಳನ್ನು. ಅರ್ಧ ಚೀನಿ, ಅರ್ಧ ಹಂಗೆರಿ ದೇಶದ ಈ ಯುವತಿ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಳೆ. 'ಎಲ್' ಎಂಬ ಮಹಿಳೆಯರ 'ಸೌಂದರ್ಯ' ಪತ್ರಿಕೆಗೆ ಬರೆಯುವ ಆಕೆ ತಾನು ಪುರುಷ ಮಾಡೆಲ್‌ಗಳನ್ನು ಇಷ್ಟಪಡುತ್ತೇನೆ ಎಂದಿದ್ದಾಳಂತೆ.

ಬೊಕ್ಕು ತಲೆಯ, ಸೈತಾನನ ಕಣ್ಣುಗಳನ್ನು ಹೊಂದಿರುವ ರಷ್ದಿ ಯಾವ ದಿಕ್ಕಿನಿಂದಲೂ ಮಾಡೆಲ್‌ನಂತೆ ಕಾಣುವುದಿಲ್ಲವಲ್ಲ ಎಂಬ ಪ್ರಶ್ನೆಗೆ ಸದ್ಯದಲ್ಲೇ ಆಕೆ ಉತ್ತರ ನೀಡಲಿದ್ದಾಳಂತೆ!

ಸ್ಮಿತಾ ಠಾಕ್ರೆಯ ದುರಂತ



ಒಂದಾನೊಂದು ಕಾಲದಲ್ಲಿ ಬಾಳ್ ಠಾಕ್ರೆಯ ಮಗ ಜೈದೇವ್‌ನನ್ನು ಸ್ಮಿತಾ ಮದುವೆಯಾಗಿದ್ದಳು. ಆದರೆ ಅವರ ದಾಂಪತ್ಯ ಜೀವನ ಸರಿ ಬರಲಿಲ್ಲವಾದ್ದರಿಂದ ಅವರಿಬ್ಬರೂ ವಿಚ್ಛೇದನೆ ಪಡೆದಿದ್ದರು. ಸಾಮಾನ್ಯವಾಗಿ ಅಂತಹ ಸಂದರ್ಭದಲ್ಲಿ ಸೊಸೆಯೇ ಗಂಡ-ಮಾವನ ಮನೆಯಿಂದ ಹೊರ ನಡೆಯುತ್ತಾಳೆ. ಆದರೆ ಸೊಸೆ ಸ್ಮಿತಾ ಬಗ್ಗೆ ಬಾಳ್ ಠಾಕ್ರೆಗೆ ಅಕ್ಕರೆ ಇದ್ದಿದ್ದರಿಂದ ಅವರ ಮಗ ಜೈದೇವನೇ ತಂದೆಯ ಮನೆಯನ್ನು ತೊರೆದ.


ಮಾವನ ಪ್ರೀತಿ, ಆತನ ರಾಜಕೀಯ ಪ್ರಭಾವ ಮತ್ತು ಶಿವಸೇನೆ ಎಂಬ ಕೋಮುವಾದಿ ಪುಂಡರ ತೋಳ್ಬಲದಿಂದ ಉತ್ತೇಜನ ಪಡೆದ ಸ್ಮಿತಾ ಬಾಲಿವುಡ್‌ನಲ್ಲಿ ಬಲಿಷ್ಠ ಸಿನಿಮಾ ನಿರ್ಮಾಪಕಿಯಾಗಿ ಬೆಳೆದಳು. ಆದರೆ ಸ್ಮಿತಾಗೆ ರಾಜಕೀಯ ಆಕಾಂಕ್ಷೆಗಳೂ ಇದ್ದು ಅವುಗಳನ್ನೂ ತನ್ನ ಮಾವ ಪೂರೈಸುತ್ತಾರೆ ಎಂದೇ ಭಾವಿಸಿದ್ದಳು.

ಆದರೆ ಬಾಳ್ ಠಾಕ್ರೆಯ ಇನ್ನೋರ್ವ ಮಗ ಮತ್ತು ಆತನ ಉತ್ತರಾಧಿಕಾರಿ ಉದ್ಧವ್‌ಗೆ ಸ್ಮಿತಾ ಮತ್ತೋರ್ವ ಎದುರಾಳಿಯಾಗಿ ಬೆಳೆಯಬೇಕಿರಲಿಲ್ಲ. ಈಗಾಗಲೇ ಆತನ ಸಹೋದರ ಸಂಬಂಧಿ ರಾಜ್‌ಠಾಕ್ರೆ ತನ್ನದೇ ಆದ ಪುಂಡರ ಗುಂಪನ್ನು ಕಟ್ಟಿಕೊಂಡು ಉದ್ಧವ್‌ನಿಗೆ ಸಾಕಷ್ಟು ತಲೆನೋವಾಗಿದ್ದಾನೆ. ಅಂತಹ ಪರಿಸ್ಥಿತಿಯಲ್ಲಿ ಸ್ಮಿತಾ ಕೂಡ ರಾಜಕೀಯಕ್ಕೆ ಕಾಲಿಟ್ಟರೆ ಮುಂದೆ ತನಗೇ ಆಕೆ ತೊಡರುಗಾಲಾಗುತ್ತಾಳೆಂದು ಭಾವಿಸಿ "ನನ್ನ ಮುಂದೆ ಇನ್ನಷ್ಟು ಅಡಚಣೆಗಳನ್ನು ಇಡಬೇಡಿ" ಎಂದು ಅಪ್ಪ ಠಾಕ್ರೆಗೆ ಕಡ್ಡಿ ತುಂಡಾಗುವಂತೆ ಹೇಳಿದನಂತೆ.

ಇದೆಲ್ಲದರ ಬಗ್ಗೆ ಅರಿವೇ ಇಲ್ಲದಿದ್ದ ಸ್ಮಿತಾ ತನ್ನ ಮಾವ ತನ್ನನ್ನು ಈ ಬಾರಿ ರಾಜ್ಯಸಭೆಗೆ ನೇಮಿಸಿಯೇ ತೀರುತ್ತಾರೆಂದು ನಂಬಿದ್ದಳಂತೆ. ಆದರೆ ಮೊನ್ನೆ ರಾಜ್ಯಸಭಾಕ್ಕೆ ನೇಮಕಗೊಳ್ಳಲಿರುವ ಸದಸ್ಯರ ಪಟ್ಟಿ ಪ್ರಕಟವಾದಾಗ ಸ್ಮಿತಾಗೆ ಎಷ್ಟು ಶಾಕ್ ಆಗಿದೆ ಎಂದರೆ ಆಕೆಯನ್ನು ಕೂಡಲೇ ಆಸ್ಪತ್ರೆಗೆ ಸೇರಿಸಲಾಗಿದೆ.

ಆದರೆ ಆದರಿಂದಲೂ ಠಾಕ್ರೆ ಸೀನಿಯರ್ ಮತ್ತು ಠಾಕ್ರೆ ಜೂನಿಯರ್‌ಗಳ ನಿರ್ಧಾರ ಬದಲಾಗಲಿಲ್ಲವಂತೆ.

ಸಂಸತ್ತಿಗೂ ಅಂಬಾನಿಗಳ ಲಗ್ಗೆ




ಕಳೆದ ಬಾರಿ ರಾಜೀವ್ ಚಂದ್ರಶೇಖರ್ ಎಂಬ ಉದ್ಯಮಿ ಕರ್ನಾಟಕದ ಬಜೆಪಿ ಮತ್ತು ಜನತಾದಳದ ನಾಯಕರಿಗೆ ಸಾಕಷ್ಟು ಕಪ್ಪವನ್ನು ಸಲ್ಲಿಸಿ ರಾಜ್ಯಸಭಾ ಚುನಾವಣೆಯಲ್ಲಿ ಗೆದ್ದಿದ್ದ. ಅದರ ಹಿಂದಿನ ಬಾರಿ ಎಂ.ಎ.ಎಂ. ರಾಮಸ್ವಾಮಿ ಎಂಬ ರೇಸ್ ಕುದುರೆಗಳ ಮಾಲೀಕ ಮತ್ತು ವಿಜಯ್ ಮಲ್ಯ ಎಂಬ ಮದ್ಯದ ದೊರೆ ಕೂಡ ಇದೇ ಮಾರ್ಗವನ್ನು ಹಿಡಿದು ಸಂಸದರಾಗಿದ್ದರು.

ಆದರೆ ಈಗ ಕಾಲ ಬದಲಾಗಿದೆಯಾದ್ದರಿಂದ ರಾಜ್ಯಸಭಾ ಸದಸ್ಯತ್ವಕ್ಕೆ ನಡೆಯಲಿರುವ ಚುನಾವಣೆಗಳೂ ಸ್ವಲ್ಪ ಮಟ್ಟಿಗೆ ಬದಲಾಗಿವೆ.

ಹೇಗೆ ಬದಲಾಗಿದೆ ಎಂದರೆ ಇವತ್ತು ರಿಲೆಯನ್ಸ್‌ನಂತಹ ಕಂಪನಿಗಳು ತಮ್ಮ ಪೆಟ್ರೋಲ್ ಬಂಕ್‌ಗಳಿಗೆ, ರಿಲೈಯನ್ ಫ್ರೆಷ್‌ನಂತಹ ಮಳಿಗೆಗಳಿಗೆ ಕಚ್ಚಾವಸ್ತುಗಳನ್ನು ಖರೀದಿಸಿ ಅವುಗಳನ್ನು ಸಾರ್ವಜನಿಕರಿಗೆ ಮಾರುತ್ತಾರೋ, ಹಾಗೆಯೇ ಈಗ ರಾಜ್ಯಸಭೆಯ ಸದಸ್ಯರನ್ನು ತಾವೇ ಆಯ್ಕೆ ಮಾಡಿ ಅವರೇ ಚುನಾಯಿತರಾಗುವಂತೆ ನೋಡಿಕೊಳ್ಳಲು ಹೊರಟಿದ್ದಾರೆ.

ಕಳೆದ ಬಾರಿ ಸಮಾಜವಾದಿ ಪಕ್ಷದ ಬೆಂಬಲದೊಂದಿಗೆ ಅನಿಲ್ ಅಂಬಾನಿ ರಾಜ್ಯಸಭಾದ ಸದಸ್ಯನಾಗಿದ್ದ. ಈಗ ಆತನನ್ನು ಮೀರಿಸಲು ಹೊರಟಿರುವ ಅಣ್ಣ ಮುಖೇಶ್ ತನಗೆ ಬೇಕಿರುವ ಮೂರು ಜನರನ್ನು ಆಯ್ಕೆ ಮಾಡಿ ಅವರೆಲ್ಲಾ ಸಂಸದರಾಗುವಂತೆ ಕಾರ್ಯಾಚರಣೆ ಪ್ರಾರಂಭಿಸಿದ್ದಾನೆ.



ಮುಖೇಶ್ ಅಂಬಾನಿ ಆಯ್ಕೆ ಮಾಡಿರುವ ಮೂವರಲ್ಲಿ ಪರಿಮಲ್ ನಾಥವಾಣಿ ಎಂಬಾತನು ಗುಜರಾತಿನ ಜಾಮ್‌ನಗರದಲ್ಲಿ ರಿಲೆಯನ್ಸ್ ಕಂಪನಿಯ ರಿಫೈನರಿಗೆ ಸಾಕಷ್ಟು ಜಾಗ ಸಿಗುವಂತೆ ನೋಡಿಕೊಂಡವ. ಈತ ಇವತ್ತು ಗುಜರಾತಿನಲ್ಲಿ ಎಷ್ಟು ಪ್ರಭಾವಶಾಲಿ ಆಗಿದ್ದಾನೆಂದರೆ ಮುಖ್ಯಮಂತ್ರಿ ನರೇಂದ್ರ ಮೋದಿಯ ನಂತರ ಈತನಿಗೆ ಅಲ್ಲಿ ನಂ. 2 ಸ್ಥಾನ. ಪರಿಮಲ್ ನಾಥವಾಣಿಯನ್ನು ಜಾರ್ಖಂಡ್ ರಾಜ್ಯದಿಂದ ಸ್ಪರ್ಧೆಗೆ ಇಳಿಸಿರುವ ಮುಖೇಶ್ ಅಂಬಾನಿ ಈಗಾಗಲೇ ಅಲ್ಲಿನ ಜಾರ್ಖಂಡ್ ಮುಕ್ತಿ ಮೋರ್ಚಾದ 11 ಶಾಸಕರು ಮತ್ತು ಓರ್ವ ಬಿಜೆಪಿ ಶಾಸಕ ಇವನನ್ನೇ ಆಯ್ಕೆ ಮಾಡುವಂತೆ 'ವ್ಯವಸ್ಥೆ' ಮಾಡಿದ್ದಾನೆ.

ಮುಖೇಶ್ ಅಂಬಾನಿ ಆಯ್ಕೆ ಮಾಡಿರುವ ಎರಡನೇ ವ್ಯಕ್ತಿ ವೈ.ಪಿ. ತ್ರಿವೇದಿ ಎಂಬ ತೆರಿಗೆ ತಜ್ಞ. ಈತನಿಗಾಗಲೇ ಮಹಾರಾಷ್ಟ್ರದ ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಪಕ್ಷದ ಶಾಸಕರು ತಮ್ಮ ಬೆಂಬಲವನ್ನು ಘೋಷಿಸಿದ್ದಾರೆ. ಆದರೆ ಈ ಘನಕಾರ್ಯಕ್ಕೆಂದು ಅವರು ಪಡೆಯಲಿರುವ ಸಂಭಾವನೆಯನ್ನು ಮಾತ್ರ ಗೌಪ್ಯವಾಗಿಟ್ಟಿದ್ದಾರೆ. ಅಂದಹಾಗೆ ಪರಿಮಲ್ ನಾಥವಾಣಿ ಮತ್ತು ವೈ.ಪಿ. ತ್ರಿವೇದಿ, ಇವರಿಬ್ಬರೂ ರಿಲೈಯನ್ಸ್ ಕಂಪನಿಯ ನಿರ್ದೇಶಕ ಮಂಡಳಿಯ ಸದಸ್ಯರು.

ಮುಖೇಶ್ ಅಂಬಾನಿಯ ಪಟ್ಟಿಯಲ್ಲಿರುವ ಮೂರನೇ ವ್ಯಕ್ತಿ ಎನ್.ಕೆ. ಸಿಂಗ್. ಈತ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕ ಮಾತ್ರವಲ್ಲ ದಾವೋಸ್‌ನಲ್ಲಿರುವ World Economic Forumನೊಂದಿಗೆ ಗಳಸ್ಯ ಕಂಠಸ್ಯ ಸಂಬಂಧ ಹೊಂದಿರುವವನು. ಈತನಿಗೆ ಬಿಹಾರದ ಎನ್‌ಜೆಪಿ ಮತ್ತು ಸಂಯುಕ್ತ ಜನತಾದಳದ ಬೆಂಬಲವನ್ನು ಮುಖೇಶ್ ಅಂಬಾನಿ ದೃಢಪಡಿಸಿಕೊಂಡಿದ್ದಾನೆ.

ಇದೆಲ್ಲದರ ಅರ್ಥ ಇಷ್ಟೇ. ಪೆಟ್ರೋ ಕೆಮಿಕಲ್ಸ್‌ನಿಂದ ಹಿಡಿದು ಚಿಲ್ಲರೆ ವ್ಯಾಪಾರದ ತನಕ ತಮ್ಮ ಬಾಹುಗಳನ್ನು ಚಾಚಿರುವ ಕಾರ್ಪೊರೇಟ್ ಕಂಪನಿಗಳು ಇವತ್ತು ರಾಜ್ಯಸಭೆಗೆ ತಮಗೆ ಬೇಕಾದವರನ್ನು ಕಳುಹಿಸುವ ಸಾಹಸಕ್ಕೆ ಕೈಯಿಟ್ಟಿದ್ದಾರೆ. ಅವರೊಂದಿಗೆ ಈ ಘನ ಪ್ರಜಾಪ್ರಭುತ್ವದ ಪ್ರತಿನಿಧಿಗಳು ಹಣದ ಆಸೆಗಾಗಿ ಕೈಜೋಡಿಸಿದ್ದಾರೆ.

ಇಲ್ಲೊಂದು ಸಣ್ಣ ಪ್ರಶ್ನೆ: ಇವತ್ತು ರಾಜ್ಯಸಭೆಯನ್ನೇ 'ಖರೀದಿಸಲು' ಹೊರಟಿರುವ ಈ ಕಾರ್ಪೊರೇಟ್ ಕಂಪನಿಗಳು ನಾಳೆ ಲೋಕಸಭೆಯನ್ನು ಸುಮ್ಮನೆ ಬಿಡುತ್ತಾರೆಯೇ?

ಇದು ಯಡ್ಡಿ ವಂಶಂ ಚಡ್ಡಿವಶಂ!
ರೋಗಿಯ ಖಾಯಿಲೆ ವೈದ್ಯನನ್ನೇ ತಿಂದುಬಿಟ್ಟರೆ?

ಅಪ್ಪಮಕ್ಕಳ ಅನುವಂಶಿಕ ಜಾಡ್ಯವನ್ನು ಬೈದೂಬೈದು ಬಾಯಿ ನೋಯಿಸಿಕೊಂಡ ಬಿಜೆಪಿಗೆ ಈಗ ಉಗಿದ ಉಗುಳೇ ಮುಖಕ್ಕೆ ಮೆತ್ತಿಕೊಂಡಿದೆ. ಸದ್ಯ ಬಿಜೆಪಿಗಳ ಅಧಿನಾಯಕ ಯಡ್ಡಿಯ ಲೆಕ್ಕಾಚಾರಕ್ಕೆ ರೆಕ್ಕೆಪುಕ್ಕ ಮೊಳೆತು ಬಿಟ್ಟರೆ ಅವರ ದ್ವಿತೀಯ ಪುತ್ರ ರಾಘವೇಂದ್ರನೇ ಶಿಕಾರಿಪುರಕ್ಕೆ ಮುಂದಿನ ಬಿಜೆಪಿ ಅಭ್ಯರ್ಥಿಯಂತೆ!

ತನ್ನ ವಿರುದ್ಧ ಬಂಗಾರಪ್ಪ ಏನಾದರೂ ಕತ್ತಿ ಮಸೆದು ಕಾಂಗ್ರೆಸ್ಸಿಗೆ ಬೆಂಬಲ ಕೊಟ್ಟುಬಿಟ್ಟರೆ ಶಿಕಾರಿಪುರದಲ್ಲಿ ಸೋಲು ಕಟ್ಟಿಟ್ಟಬುತ್ತಿ, ಅದಕ್ಕೆ ತಾನು ಪಕ್ಕದ ಶಿಕಾರಿಪುರದಿಂದ ಕಣಕ್ಕಿಳಿದು ತನ್ನ ಕರುಳಕುಡಿ ರಾಘವೇಂದ್ರನನ್ನೇ ಶಿಕಾರಿಪುರಕ್ಕೆ ಬಿಜೆಪಿ ಅಭ್ಯರ್ಥಿಯನ್ನಾಗಿಸುವುದು ಯಡ್ಡಿಯ ಲೇಟೆಸ್ಟ್ ಹುನ್ನಾರ. ಅದಕ್ಕೆಂದೇ ತನ್ನ ಪುಂಡ ಪುತ್ರ



ರಾಘವೇಂದ್ರನನ್ನು ಶಿಕಾರಿಪುರ ಪುರಸಭೆಗೆ ನಿಲ್ಲಿಸಿ ಗೆಲ್ಲಿಸಿ ಈ ಬಾರಿಯೇ ಪುರಸಭಾಧ್ಯಕ್ಷನನ್ನಾಗಿ ಮಾಡಲು ಹೊರಟ ಯಡ್ಡಿ ಕೊನೇಗಳಿಗೆಯಲ್ಲಿ ಮನಸ್ಸು ಬದಲಿಸಿ ತನ್ನ ಭಟ್ಟಂಗಿ ವೆಂಕಟೇಶನನ್ನು ಶಿಕಾರಿಪುರ ಪುರಸಭಾಧ್ಯಕ್ಷನನ್ನಾಗಿ ಮಾಡಿದ್ದು ಕೂಡ ಮತ್ತೊಂದು ತಂತ್ರವಾಗಿತ್ತು.

ರಾಘವೇಂದ್ರನನ್ನು ಎರಡನೇ ಅವಧಿಗೆ ಪುರಸಭಾಧ್ಯಕ್ಷನನ್ನಾಗಿಸುವುದು; ಈ ಮಧ್ಯೆ ಅವಕಾಶವಾದರೆ ಆತನನ್ನೇ ತನ್ನ 'ವಾರಸ್ದಾರ'ನಾಗಿ ಶಿಕಾರಿಪುರಕ್ಕೆ ಬಿಜೆಪಿಯಿಂದ ಕಣಕ್ಕಿಳಿಸುವುದು!

ಹಕೀಕತ್ತೇನೆಂದರೆ ಇದು ಯಡ್ಡಿಯ ಖಾಯಿಲೆಯಷ್ಟೇ ಅಲ್ಲ, ಕ್ಷೇತ್ರ ಪುನರ್‌ವಿಂಗಡಣೆಯನ್ನೇ ಲಾಭ ಮಾಡಿಕೊಂಡು ತಮ್ಮ ಕರುಳ ಕುಡಿಗಳನ್ನೋ ಒಡಹುಟ್ಟಿದವರನ್ನೋ ಬಿಜೆಪಿಯಿಂದ ನಿಲ್ಲಿಸಿ ಗೆಲ್ಲಿಸಲು ಹೊಂಚು ಹಾಕುತ್ತಿರುವ ಅರ್ಧ ಡಜನ್ ನಾಯಕರು ಬಿಜೆಪಿಯಲ್ಲಿದ್ದಾರೆ. ಈ ಪೈಕಿ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ತನ್ನ ನೆಲಕಂಟಕ ಪುತ್ರ ಕಟ್ಟಾ ಜಗದೀಶನಿಗೆ ಶಿವಾಜಿನಗರದ ಬಿಜೆಪಿ ಟಿಕೆಟ್ ಕೊಡಿ ಎಂದು ನಾಚಿಕೆ ಮಾನಬಿಟ್ಟು ಲಾಬಿಗಿಳಿದಿದ್ದಾನೆ. ತಾನು ಹೊಸಕ್ಷೇತ್ರ ಹೆಬ್ಬಾಳದಿಂದ ನಿಂತು ಗೆದ್ದು ಪಕ್ಕದ ಶಿವಾಜಿನಗರದಿಂದ ತನ್ನ ಮಗ ಎಮ್ಮೆಲ್ಲೇಯಾದರೆ ದೊಡ್ಡಮಟ್ಟದಲ್ಲಿ ರಿಯಲ್ ಎಸ್ಟೇಟ್ ಲೂಟಿಗಿಳಿಯಬಹುದಲ್ಲ....?



ಇನ್ನು ಇದೇ ಜಾಯಮಾನದ ಬೆಂಗಳೂರಿನ ಮತ್ತೊಬ್ಬ ಬಿಜೆಪಿ ಲೀಡರ್ ಆರ್. ಅಶೋಕ್ ಕೇಳಬೇಕಾ? ಬ್ಯಾಡರಹಳ್ಳಿಗೆ 'ಬಿ' ಫಾರ್ಮ್ ಕೊಡಲೇಬೇಕೆಂದು ಹಠಕ್ಕೆ ಬಿದ್ದಿದ್ದಾರೆ. ತಾನು ದಾಸರಹಳ್ಳಿಯಿಂದಲೋ ಅಥವಾ ಪದ್ಮನಾಭನಗರದಿಂದಲೋ ನಿಲ್ಲುತ್ತೇನೆ. ಜೊತೆಗೆ ತಮ್ಮನನ್ನೂ ಗೆಲ್ಲಿಸಿರುತ್ತೇನೆಂಬುದು ಅಶೋಕ್ ಪಟ್ಟಾದರೆ ಇತ್ತೀಚೆಗಷ್ಟೇ ಜೆಡಿಎಸ್ ತೊರೆದು ಬಿಜೆಪಿ ಹೊಕ್ಕ ಉತ್ತರಹಳ್ಳಿ ಮಾಜಿ ಶಾಸಕ ಎಂ. ಶ್ರೀನಿವಾಸ್ ತನ್ನ ತಮ್ಮ ಕೃಷ್ಣಪ್ಪನಿಗೆ ಯಶವಂತಪುರದಿಂದ ಬಿಜೆಪಿ ಟಿಕೆಟ್ ಬೇಕೇಬೇಕೆಂದು ಕಂಡಕಂಡ ಬಿಜೆಪಿ ನಾಯಕರ ಕಾಲಿಗೆ ಬೀಳುತ್ತಿದ್ದಾನೆ. ಸದ್ಯ ತನ್ನ ಮಗ ಕಾಂತೇಶನನ್ನೂ ಎಮ್ಮೆಲ್ಲೇ ಮಾಡಿ ಎಂದು ಈಶ್ವರಪ್ಪ ಗೋಗರೆಯುತ್ತಿಲ್ಲವಲ್ಲ; ಅದೇ ಬಿಜೆಪಿಯ ಪುಣ್ಯ!



ನಿನ್ನೆ ಮೊನ್ನೆಯ ತನಕ ಅಪ್ಪಮಕ್ಕಳ ಕುಟುಂಬಾಡಳಿತದ ವಿರುದ್ಧ ಬಾಯಿಬಡಕೊಂಡ ಯಡ್ಡಿಯ ಕತೆ ಒತ್ತಟ್ಟಿಗಿರಲಿ. ಇಲ್ಲಿಗೆ ತಿಂಗಳ ಹಿಂದಷ್ಟೇ ಒಂದೇ ಕುಟುಂಬದವರಿಗೆ ಬಿಜೆಪಿ ಟಿಕೆಟ್ ನಿಷಿದ್ಧವೆಂದು ಸಭೆ ಸೇರಿ ನಿರ್ಣಯ ಕೈಗೊಂಡ ಚಡ್ಡಿವೀರರ ಇಬ್ಬಂದಿಬುದ್ಧಿಗೆ ಇದಕ್ಕಿಂತ ಬೇಕೆ?


ಉಗಿದ ಉಗುಳೇ ಮುಖಕ್ಕೆ ಬೀಳುವುದೆಂದರೆ ಇದೇ ತಾನೆ? ಯಾವ ಬಾಯಿಂದ ಇನ್ನು ಮುಂದೆ ನೆಹರೂ, ಇಂದಿರಾ, ದೇವೇಗೌಡ, ಕುಮಾರಸ್ವಾಮಿಯ ವಂಶಾಡಳಿತವನ್ನು ಬಿಜೆಪಿ ಖಂಡಿಸುತ್ತದೆ?

■ ವರದಿಗಾರ

ಯಾಮಾರಿದ್ದು ಟೀವಿ ನೈನಾ, ಬೆಂಗಳೂರು ಪೊಲೀಸರಾ







ತಿರುಪತಿ ತಿಮ್ಮಪ್ಪನ ಸನ್ನಿಧಿಯಲ್ಲಿ ಮದುಮಗನೊಬ್ಬನಿಗೆ ಹೆಂಗಸೊಬ್ಬಳು ಎಗರಿಎಗರಿ ಡಿಚ್ಚಿ ಹೊಡೆಯುತ್ತಿದ್ದ ಸೀನು ನೋಡಿದ ವೀಕ್ಷಕರಿಗೇ ಅಚ್ಚರಿಯಾಗಿತ್ತು, ನಂಬಿದ ತಪ್ಪಿಗೆ ಈಕೆಯ ವಿರುದ್ಧವೇ ಟೀವಿ ನೈನ್ ಇನ್ನೆರಡು ದಿನಗಳ ವಿಶೇಷ ಕಾರ್ಯಕ್ರಮ ಬಿತ್ತರಿಸಬೇಕಾಯಿತು!

ಅವಳ ಹೆಸರು ಸುಶೀಲಾ ಶರ್ಮಾ. ಬೆಂಗಳೂರಿನಿಂದ ಹಿಡಿದು ತಮಿಳುನಾಡಿನ ಸೇಲಂ, ಮುಂಬೈ, ರಾಜಸ್ಥಾನದ ಜೈಪುರ ಹಾಯ್ದು ದೆಹಲಿಯ ತನಕ ಮಾಡಿದ ಮೋಸ ಮತ್ತು ದೋಚಿದ ಆಸ್ತಿಯ ವಿವರಗಳೆಲ್ಲ ಅಗೆದಷ್ಟೂ ಅಗಾಧಗೊಳ್ಳುತ್ತಿವೆ. ಹಾರಿಹಾರಿ ಡಿಚ್ಚಿ ಹೊಡೆಯುತ್ತಿದ್ದ ತಾಯಿ ಮತ್ತು ನಡುರಸ್ತೆಯಲ್ಲೇ ಕರಾಟೆ ಹೊಡೆಯುತ್ತಿದ್ದ ಈಕೆಯ ಮಗಳನ್ನು ತೋರಿಸಿ ತೋರಿಸಿ ಮಜಾಕು ಮಾಡಿದ ಸ್ವತಃ ಟೀವಿ ನೈನೇ ಈಕೆಯ ವಿರುದ್ಧ ಎರಡು ದಿನಗಳ ವಿಶೇಷ ತನಿಖಾ ವರದಿ ಮಾಡಬೇಕಾಯಿತು!

ಬಹುಶಃ ಬೆಂಗಳೂರು ಪೊಲೀಸರಿಗಾಗಲಿ, ಈಕೆಯ ತಿರುಪತಿ ಪ್ರಹಸನವನ್ನು ನಂಬಿ ಯಾಮಾರಿದ ಮಾಧ್ಯಮಗಳಿಗಾಗಲಿ ಈಕೆಯ ಪೂರ್ತಿ ಜಾತಕ ಗೊತ್ತಿರಲಿಕ್ಕಿಲ್ಲ. ಕತೆ ಕೂಡ ವಿಚಿತ್ರವಾಗಿತ್ತು. ಅದೇ ಮಾರ್ಚ್ 17 ರ ಬೆಳ್ಳಂ ಬೆಳಿಗ್ಗೆ ಟೀವಿ ನೈನ್ ತಾಯಿ ಮಗಳಿಬ್ಬರು ತಮ್ಮ ಸಹಚರರ ಜೊತೆ ಸೇರಿಕೊಂಡು ತಿರುಪತಿಯಲ್ಲಿ ಮದುಮಗನೊಬ್ಬನನ್ನು ಹಿಡಿದು ಬಡಿಯುತ್ತಿದ್ದ ದೃಶ್ಯಾವಳಿಯನ್ನು ಅತ್ಯಂತ ರಸವತ್ತಾಗೇ ಬಿತ್ತರಿಸಿತ್ತು. ಹೊಡೆಸಿಕೊಂಡಾತ ಒಂದಲ್ಲ ನಾಲ್ಕು ಮದುವೆಯಾಗಿದ್ದಾನೆಂದೂ, ಸದ್ಯ ಹೊಡೆಯುತ್ತಿದ್ದ ಯುವತಿ ಆತನ ಮೂರನೇ ಪತ್ನಿಯೆಂದೂ, ಮಗಳ ಜೊತೆ ಸೇರಿ ಆಕೆಯ ತಾಯಿ ಸುಶೀಲಾ ಶರ್ಮಾ ಎಂಬಾಕೆ ತನ್ನ ಸೋಕಾಲ್ಡ್ ಅಳಿಯನಿಗೆ ಎಗರಿ ಎಗರಿ ಡಿಚ್ಚಿ ಹೊಡೆಯುತ್ತಿದ್ದದ್ದನ್ನೂ ಸತತ ಒಂದೂವರೆ ಗಂಟೆ ಕಾಲ ಬಿತ್ತರಿಸಿದ ಟೀವಿ ನೈನ್ ಮರುದಿನಕ್ಕೇ ವ್ಯತಿರಿಕ್ತ ವರದಿ ಪ್ರಕಟಿಸಿತ್ತು. ಕಾಶ್ಮೀರದ ಸುನೀಲ್ ಎಂಬಾತ ದೆಹಲಿ ಪೊಲೀಸರ ಸಮೇತ ವಾರೆಂಟ್ ಹಿಡಿದು ಸುಶೀಲಾ ಶರ್ಮಾಳನ್ನು ಕರೆದೊಯ್ಯಲು ಬಂದಿದ್ದ!

ಅದರ ಮರುದಿನವೇ ಟೀವಿ ನೈನ್ ಮಗಳು ಸುನೀತಾಳಿಗೆ ಈಗಾಗಲೇ ಮುಂಬಯಿಯ ದಿನೇಶ್ ಹರಿಯಾ ಎಂಬಾತನ ಜೊತೆ ಮದುವೆಯಾಗಿದ್ದನ್ನು ದಾಖಲೆ ಸಹಿತ ಬಯಲಿಗೆಳೆದಿತ್ತು. ಸಾಲದ್ದಕ್ಕೆ, ಬೆಂಗಳೂರಿನ ಒಂದು ಡಜನ್ ಆಸ್ತಿವಂತರಿಗೆ ಪಂಗನಾಮ ಹಾಕಿದ್ದಳು ಸುಶೀಲಾ ಶರ್ಮಾ. ಯಾವತ್ತು ಟೀವಿಯಲ್ಲಿ ಈಕೆಯ ಕತೆ ಧಾರಾವಾಹಿಯಾಗಿ ಬರತೊಡಗಿತೋ ಈಕೆಯಿಂದ ಮೋಸ ಹೋದವರ ಪಟ್ಟಿಯೂ ಬೆಳೆಯುತ್ತಾ ಹೋಯಿತು.

ಒಂದಲ್ಲ ಎರಡು ಬಾರಿ ಜೈಲಿಗೆ ಹೋಗಿ ಬಂದಿದ್ದ ಸುಶೀಲಾ ಶರ್ಮಾ ನಿಸ್ಸಂಶಯವಾಗಿ ಬೆಂಗಳೂರಿನ ರಿಯಲ್ ಎಸ್ಟೇಟ್ ರಾಣಿ!

ಮುಂಬಯಿಯಲ್ಲಿ ಈಕೆ ಸುಹೀಲಾ ಶರ್ಮಾ ಎಂಬ ಮುಸ್ಲಿಂ ಹೆಸರಿಟ್ಟುಕೊಂಡಿದ್ದಾಳೆ. ರಾಜಸ್ಥಾನದ ಜೈಪುರದಲ್ಲಿ ಎಸ್.ಆರ್.ಜಿ. ಕಂಪ್ಯೂಟರ್ಸ್ ಪ್ರೈ. ಲಿಮಿಟೆಡ್ ಕಂಪೆನಿ ತೆರೆದು ಐದು ಕೋಟಿಗೂ ಹೆಚ್ಚು ಮೊತ್ತದ ಸಾಲ ಮಾಡಿ ಎಚ್‌ಡಿಎಫ್‌ಸಿ ಬ್ಯಾಂಕಿಗೆ ವಂಚಿಸಿ ಪರಾರಿಯಾಗಿದ್ದಾಳೆ. ಮುಂಬಯಿಯ ವರ್ಲಿ, ದೆಹಲಿ ಪೊಲೀಸ್ ಠಾಣೆಗಳಲ್ಲಿ ಈಕೆಯ ವಿರುದ್ಧ ಕ್ರಿಮಿನಲ್ ಕೇಸುಗಳಿವೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಡಿಫಾಲ್ಟರ್ಸ್ ಅಂದರೆ ದಿವಾಳಿಕೋರರ ಲಿಸ್ಟಿನಲ್ಲಿ ಈಕೆಯ ಹೆಸರು ದಾಖಲಾಗಿದೆ. ಮುಂಬಯಿಯ ಡಾನ್ ರವಿ ಪೂಜಾರಿಯ ಹೆಸರಲ್ಲಿ ಬೆಂಗಳೂರಿನ ಮೂವರು ಆಸ್ತಿವಂತರಿಗೆ ಧಮಕಿ ಹಾಕಿದ್ದಾಳೆ. ದೇವನಹಳ್ಳಿ ಏರ್‌ಪೋರ್ಟ್ ಸುತ್ತಮುತ್ತ ಇವಳೊಬ್ಬಳೇ ನೂರೆಂಬತ್ತು ಎಕರೆಗಳಷ್ಟು ಭೂಮಿ ಖರೀದಿಸುತ್ತಾಳೆಂದರೆ,ಮಾಜಿ ಸಮಾಜ ಕಲ್ಯಾಣ ಮಂತ್ರಿ ಬಾಲಚಂದ್ರ ಜಾರಕಿಹೊಳಿಗೆ ಗಿಫ್ಟಾಗಿ ಡಾಲರ್ಸ್ ಕಾಲೋನಿಯಲ್ಲೊಂದು ಬಂಗಲೆ ಕೊಡಿಸುತ್ತಾಳೆಂದರೆ; ಇವಳ ತಾಕತ್ತು ಇನ್ನೆಷ್ಟಿರಬೇಡ?

ರಿಯಲ್ ಎಸ್ಟೇಟ್ ರಾಣಿಯ ಇನ್ನೊಂದು ಮುಖ

ಈಗ ತನ್ನ ಸೋಕಾಲ್ಡ್ ಅಳಿಯನೆಂದು ಯಾವ ಪುರುಷೋತ್ತಮ ಎಂಬಾತನ ವಿರುದ್ಧ ಈಕೆ ಬೀದಿರಂಪಕ್ಕಿಳಿದಿದ್ದಾಳೋ ಆತ ನಿನ್ನೆಮೊನ್ನೆಯ ತನಕ ಈಕೆಯ ರಿಯಲ್ ಎಸ್ಟೇಟ್ ದಂಧೆಯ ಏಜೆಂಟಾಗಿದ್ದಾತ. ಈಕೆಯ ಪರ ವಹಿಸಿ ಬೆಂಗಳೂರಿನ ಆಸ್ತಿವಂತರ ವಿರುದ್ಧ ಬಡಿದಾಡಿಕೊಂಡಿದ್ದ. ತಾನೇ ಜಾಮೀನು ಕೊಟ್ಟು ಜೈಲಿಂದ ಬಿಡಿಸಿಕೊಂಡು ಬಂದಿದ್ದ. ಮಗಳ ಜೊತೆ ಸಲಿಗೆಯಿಂದಿದ್ದ. ಇನ್ನೇನು ಮದುವೆಯಾಗಿ ಕೈತಪ್ಪಿ ಹೋಗುತ್ತಾನೆನ್ನುವಾಗಲೇ ತಾಯಿ-ಮಗಳು ಸೇರಿಕೊಂಡು ತಿರುಪತಿಗೆ ದಾಳಿಯಿಟ್ಟು 'ರೋಡ್ ಶೋ' ಕೊಟ್ಟಿದ್ದು!



ಮೂಲತಃ ಮುಂಬಯಿಯ ಸುಶೀಲಾ ಶರ್ಮಾ ಬೆಂಗಳೂರಿಗೆ ಬಂದಿದ್ದು 1985 ರಲ್ಲಿ. ಈಕೆಯ ತಂದೆಯ ಹೆಸರು ರುಕ್ಮಾಂಗದ ಶರ್ಮಾ. ಮುಂಬಯಿಯ ದೆಹಲಿ ವೆಸ್ಟ್ ಸಂತೋಷ್ ಶರ್ಮಾ ಎಂಬಾತನನ್ನು ಮದುವೆಯಾಗಿ ಶಿವಾಜಿ ರಸ್ತೆಯ ಮಹಾಕಾಲವಾಡಿಯ ನಾಯ್ಕರ್ ಸದನ್ ಎಂಬ ಅಪಾರ್ಟ್‌ಮೆಂಟಿನಲ್ಲಿದ್ದ. ಸುಶೀಲಾ ಶರ್ಮಾ ಕ್ರಮೇಣ ಮುಂಬಯಿ ಅಂಡರ್‌ವರ್ಲ್ಡ್ ಸಹವಾಸಕ್ಕೆ ಬಿದ್ದು ಝೋಪಡ ಪಟ್ಟಿಗಳಲ್ಲಿ ಬಿಡಿ ಶೆಡ್ಡುಗಳನ್ನು ಖರೀದಿಸಿ ಮಾರುವ ದಂಧೆಗಿಳಿಯುತ್ತಾಳೆ. ಈ ಮಧ್ಯೆ ಆಕೆಯ ಗಂಡ ಸಂತೋಷ್ ಶರ್ಮಾ ನಿಗೂಢವಾಗಿ ಕಣ್ಮರೆಯಾಗುತ್ತಾನೆ. ಅಷ್ಟೇ ನಿಗೂಢವಾಗಿ ಸುಶೀಲಾ ಬೆಂಗಳೂರಿಗೆ ಬಂದು ಆರ್‌ಪಿಸಿ ಲೇಔಟಿನಲ್ಲಿ ಶಿವಕುಮಾರ್ ಭಾರ್ಗವ ಎಂಬಾತನ ಜೊತೆ ನೆಲೆಸುತ್ತಾಳೆ. ಈ ಹೊತ್ತಿಗೇ ಸುನೀತಾ ಎಂಬ ಹೆಣ್ಣುಮಗುವಾಗುತ್ತದೆ. ಇದೇ ಶಿವಕುಮಾರ್ ಭಾರ್ಗವನ ಜೊತೆ ಸೇರಿ ಸುಶೀಲಾ ಮಾಳಗಾಳದಲ್ಲಿ 50x70 ಅಳತೆಯ ಸೈಟೊಂದನ್ನು ಖರೀದಿಸುತ್ತಾಳೆ. ಆನಂತರ ಶಿವಾನಂದ್ ಎಂಬ ಸಿನಿಮಾ ನಿರ್ಮಾಪಕನೊಬ್ಬನ ಸಂಪರ್ಕಕ್ಕೆ ಬಂದು ಮಲ್ಲೇಶ್ವರದ ಲಿಂಕ್ ರಸ್ತೆಯ ಮೂರನೇ ಕ್ರಾಸಿನಲ್ಲಿ ಮನೆ ಮಾಡುತ್ತಾಳೆ.

ನಿಗೂಢವೆಂದರೆ ಆತನಕ ಸುಶೀಲಾಳ ಜೊತೆಗಿದ್ದ ಶಿವಕುಮಾರ್ ಭಾರ್ಗವನೂ 1989 ರ ಹೊತ್ತಿಗೆ ಕಣ್ಮರೆಯಾಗುತ್ತಾನೆ. ಆತ ಏನಾದ ಎಲ್ಲಿಗೆ ಹೋದ ಎಂಬುದು ಇವತ್ತಿಗೂ ನಿಗೂಢವೆ. ವಿಚಿತ್ರವೆಂದರೆ ಮುಂದೆ ಚಿತ್ರ ನಿರ್ಮಾಪಕ ಶಿವಾನಂದ ಮೇಲೆ ವಿಜಯನಗರ ಪೊಲೀಸ್ ಠಾಣೆಯಲ್ಲಿ ತನ್ನ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದನೆಂದು ಸುಶೀಲಾ ದೂರು ಕೊಡುತ್ತಾಳೆ. ವಾಸ್ತವವೇನೆಂದರೆ ಶಿವಾನಂದನಿಗೆ ಈಕೆ ಐದು ಲಕ್ಷಕ್ಕೆ ಟೋಪಿ ಹಾಕಿರುತ್ತಾಳೆ.

ಈ ಮಧ್ಯೆ ರಾತ್ರೋರಾತ್ರಿ ಮಲ್ಲೇಶ್ವರದ ಮನೆ ಖಾಲಿ ಮಾಡಿಕೊಂಡು 1990 ರ ಹೊತ್ತಿಗೆ ಸುಶೀಲಾ ತಮಿಳುನಾಡಿನ ಸೇಲಂನ ಕುಮಾರ ಸ್ವಾಮಿಪಟ್ಟಿ ಏರಿಯಾದಲ್ಲಿ ಪ್ರತ್ಯಕ್ಷಳಾಗುತ್ತಾಳೆ. ಅಲ್ಲಿ ಈಕೆಗೆ ಜೊತೆಯಾದವನು ಮುಜಮ್ಮಿಲ್ ಅಹ್ಮದ್ ಎಂಬ ಇಂಟೀರಿಯರ್ ಡೆಕೊರೇಟರ್. ಆತನಿಂದ ಬಳುವಳಿಯಾಗಿ ಫ್ಲಾಟ್ ಒಂದನ್ನು ಪಡೆದು 1992 ರ ಹೊತ್ತಿಗೆ ಮತ್ತೆ ಮುಂಬಯಿಗೆ ಬರುತ್ತಾಳೆ. 1996 ರ ತನಕ ಮುಂಬಯಿಯಲ್ಲಿದ್ದುಕೊಂಡೇ ಪದೇಪದೇ ಬೆಂಗಳೂರಿಗೆ ಬಂದು ಲ್ಯಾಂಡ್ ಡಿಸ್ಪ್ಯೂಟುಗಳಿಗೆ ಕೈಹಾಕುತ್ತಾಳೆ. ಈ ಪೈಕಿ ಒಂದು ಆಸ್ತಿಯೇ ಎಚ್.ಎ.ಎಲ್. ಸಮೀಪದ 70x60x120 ಅಳತೆಯ ಒಂದೂವರೆ ಕೋಟಿ ಮೌಲ್ಯದ ಭಾರೀ ಸೈಟು. ಅದು ಕಗ್ಗದಾಸಪುರಕೆರೆ ಭೂಮಿ. ಸರಿಸುಮಾರು ಹದಿನೈದು ಮಂದಿ ಧಾಂಡಿಗರನ್ನು ಕಟ್ಟಿಕೊಂಡು ಕೆರೆ ಭೂಮಿಗೆ ಕಾಂಪೌಂಡ್ ಹಾಕಿದ ಸುಶೀಲಾ ಶರ್ಮಾಳ ವಿರುದ್ಧ ಬೆಂಗಳೂರು ನಗರ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕೆ.ಆರ್. ಪುರದ ರೇಂಜ್ ಫಾರೆಸ್ಟ್ ಆಫೀಸರ್ ಸೇರಿಕೊಂಡು ಪೊಲೀಸರಿಗೆ ದೂರು ಕೊಡುತ್ತಾರೆ.

ಇದ್ಯಾವುದಕ್ಕೂ ಜಗ್ಗದ ಸುಶೀಲಾ ಈ ಅರಣ್ಯಾಧಿಕಾರಿಗಳಿಬ್ಬರ ವಿರುದ್ಧವೇ ಕೇಸು ಹಾಕಿದ್ದಾಳೆ. ಸಾಲದ್ದಕ್ಕೆ ಪಕ್ಕದ ಬೆಂಗಳೂರು ಗೇಮ್ಸ್ ಅಂಡ್ ಫಿಟ್‌ನೆಸ್ ಇನ್‌ಸ್ಟಿಟ್ಯೂಟಿನ ವಾಸುದೇವರೆಡ್ಡಿ ಮತ್ತು ಪ್ರಕಾಶ್‌ರೆಡ್ಡಿಯ ಸೈಟನ್ನೂ ಆಕ್ರಮಿಸಿ ಅವರಿಬ್ಬರ ವಿರುದ್ಧ ಮತ್ತೊಂದು ಕೇಸು ಹಾಕುತ್ತಾಳೆ!

ಭೂಕೊಳ್ಳೆಗೆ ಬಂದವನೇ ಅಳಿಯ

ಅಸಲಿಗೆ ಈಕೆಯ ಸೋಕಾಲ್ಡ್ ಅಳಿಯನೆಂದು ತಿರುಪತಿಯ ನಡುರಸ್ತೆಯಲ್ಲಿ ಒದೆತಿಂದ ಪುರುಷೋತ್ತಮನದ್ದೂ ರಿಯಲ್ ಎಸ್ಟೇಟ್ ದಂಧೆಯೇ. 2006 ರ ಹೊತ್ತಿಗೆ ಸುಶೀಲಾ ಶರ್ಮಾ ಸದಾಶಿವನಗರದ ಎಂಟನೇ 'ಬಿ' ಮೇನ್‌ನಲ್ಲಿದ್ದ ಭಾರೀ ಸೈಟೊಂದಕ್ಕೆ ವಕ್ಕರಿಸಿ ಪುಷ್ಪಾದಿ. ಗಂಗ್ಲಾನಿ ಎಂಬಾಕೆಗೆ ಮುಂಗಡವಾಗಿ ಒಂದೂವರೆ ಕೋಟಿಯ ಚೆಕ್ ಬರೆದುಕೊಡುತ್ತಾಳೆ. ಈ ಪೈಕಿ ಒಂದು ಕೋಟಿಯ ಚೆಕ್ ನಗದಾಗಿ ಬಾಕಿ ಐವತ್ತು ಲಕ್ಷದ ಚೆಕ್ಕು ಬೌನ್ಸಾಗುತ್ತದೆ.

ವಾಸ್ತವವಾಗಿ ಈ ಆಸ್ತಿಯ ಮಾರ್ಕೆಟ್ ರೇಟೇ ಆರು ಕೋಟಿ ಹತ್ತು ಲಕ್ಷ. ಅಷ್ಟೇ ಮೊತ್ತಕ್ಕೆ ಖರೀದಿ ಒಪ್ಪಂದಕ್ಕೆ ರುಜು ಹಾಕಿದ ತಾಯಿಮಗಳು ಕ್ರಮೇಣ ಆರು ಕೋಟಿಗೆ ಬದಲಾಗಿ ಅಗ್ರಿಮೆಂಟ್ ಅನ್ನು ಮೂರು ಕೋಟಿಗೆ ತಿದ್ದುತ್ತಾರೆ. ಅದನ್ನೇ ಮುಂದಿಟ್ಟುಕೊಂಡು ರಿಜಿಸ್ಟರ್ ಮಾಡಿ ಕೊಡುವಂತೆ ಪುಷ್ಪಾ ಗಂಗ್ಲಾನಿಯ ಮೇಲೆ ಕೇಸ್ ಹಾಕುತ್ತಾರೆ. ಯಾವತ್ತೂ ಮೂಲ ಅಗ್ರಿಮೆಂಟ್ ತಿದ್ದಿದ್ದು ಗೊತ್ತಾಯಿತೋ ಪುಷ್ಪಾ ಗಂಗ್ಲಾನಿ ಅಲಸೂರು ಗೇಟ್ ಪೊಲೀಸ್ ಠಾಣೆಗೆ ದೂರು ಕೊಡುತ್ತಾರೆ. ಅಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಅಮ್ಮ-ಮಗಳ ವಿರುದ್ಧ ವಂಚನೆ ಕೇಸು ದಾಖಲಾಗುತ್ತದೆ. ಸದರಿ ಕೇಸಿಗೆ ಅಮ್ಮ ಮಗಳಿಗೆ ಜಾಮೀನು ಕೊಡಲೆಂದು ಬಂದವನೇ ಕೆ.ಆರ್.ಪುರದ ಪುರುಷೋತ್ತಮ!



ಈತ ಬೆಸ್ಟ್ ಪ್ರಾಪರ್ಟೀಸ್‌ನ ಲೋಕಲ್ ಏಜೆಂಟ್. ಯಾವುದೋ ಆಸ್ತಿಗೆ ಸಂಬಂಧಪಟ್ಟಂತೆ ಅಮ್ಮ ಮಗಳಿಗೆ ಪರಿಚಿತನಾಗಿದ್ದ ಪುರುಷೋತ್ತಮ 2007 ರ ಮಾರ್ಚ್‌ನಲ್ಲಿ ಅಮ್ಮ ಮಗಳಿಬ್ಬರೂ ತನಗೆ ಪರಿಚಿತರೆಂದು ಜಾಮೀನು ಕೊಡುತ್ತಾನೆ. ಮುಂದೆ ಮಗಳು ಸುನೀತಾ ಶರ್ಮಾ ಮತ್ತು ಪುರುಷೋತ್ತಮನ ಮಧ್ಯೆ ಸಲುಗೆ ಬೆಳೆಯುತ್ತದೆ. ಹಕೀಕತ್ತೇನೆಂದರೆ ಈ ಹೊತ್ತಿಗಾಗಲೇ ಸುನೀತಾಗೆ ಮುಂಬಯಿಯ ದಿನೇಶ್ ಹರಿಯಾಣ ಜೊತೆ ಮದುವೆಯಾಗಿ ಆತನಿಂದ ಪ್ರೀತಿ ಎಂಬ ಹನ್ನೆರಡು ವರ್ಷದ ಮಗಳಿರುತ್ತಾಳೆ.

ಇನ್ನೂ ಮೊದಲ ಗಂಡನ ಜೊತೆ ಡೈವೋರ್ಸಾಗಿಲ್ಲ. ಹಾಗಿದ್ದೂ ಪುರುಷೋತ್ತಮ ತಿರುಪತಿಯಲ್ಲಿ ಮದುವೆಯಾಗುತ್ತಾನೆಂದು ಗೊತ್ತಾಗಿದ್ದೇ ತಾಯಿ ಮಗಳು ರೌಡಿ ಪಡೆ ಕಟ್ಟಿಕೊಂಡುಹೋಗಿ ಮದುವೆಗೆ ಬಂದವರನ್ನೂ ಸೇರಿಸಿ ಅಟ್ಟಾಡಿಸುತ್ತಾರೆ. ಈತನಕ ಮದುವೆಯಾಗಿದ್ದಾನೆಂದು ಪುರುಷೋತ್ತಮನ ವಿರುದ್ಧ ತಿರುಪತಿ ಪೊಲೀಸರಿಗೆ ದೂರು ಕೊಡುತ್ತಾರೆ. ಇದನ್ನೇ ನಂಬಿದ ಟೀವಿಗಳು ಹುಮ್ಮಸ್ಸಿಗೆ ಬಿದ್ದು ವರದಿ ಬಿತ್ತರಿಸುತ್ತವೆ. ಆದರೆ ಮರುದಿನಕ್ಕೇ ಕೇಸು ಉಲ್ಟಾ ಹೊಡೆದು ಸುನೀತಾಳಿಗೆ ದಿನೇಶ್ ಹರಿಯಾಣ ಜೊತೆ ಮದುವೆಯಾಗಿದ್ದ ದಾಖಲೆಗಳು ಬಹಿರಂಗಗೊಳ್ಳುತ್ತವೆ. ಅಲ್ಲಿಗೆ ಅಮ್ಮ, ಮಗಳ ಪರವಹಿಸಿ ಸುದ್ದಿಮಾಡಿದ ಟೀವಿಗಳೇ ಉಲ್ಟಾ ಹೊಡೆದು ತಾಯಿ-ಮಗಳ ಒಂದೊಂದೇ ವಂಚನಾಕಾಂಡಗಳನ್ನು ಬಯಲಿಗೆಳೆಯುತ್ತವೆ.

ಇಂಟರೆಸ್ಟಿಂಗ್ ಸಂಗತಿಯೆಂದರೆ ಅಮ್ಮ-ಮಗಳು ಆರೋಪಿಸಿದ ಹಾಗೇ ಪುರುಷೋತ್ತಮ ನಾಲ್ಕನೇ ಮದುವೆಯಾಗೇ ಇರಲಿಲ್ಲ. ಈತನ ಎರಡನೇ ಪತ್ನಿಯೆಂದು ಆರೋಪಿಸಲ್ಪಟ್ಟ ಶಶಿಕಲಾ ಇಲ್ಲಿಗೆ ತಿಂಗಳ ಹಿಂದೆ ತನ್ನ ಗಂಡ ಪ್ರಸಾದ್ ಎಂಬಾತನ ವಿರುದ್ಧ ದೂರು ಕೊಟ್ಟು ಆತನಿಂದ ಮಕ್ಕಳನ್ನು ವಶಕ್ಕೆ ಪಡೆಯಲು ಪುರುಷೋತ್ತಮ್ ನೆರವಾಗಿದ್ದು ಬಿಟ್ಟರೆ ಆತನಿಗೂ ಶಶಿಕಲಾಗೂ ಯಾವುದೇ ಸಂಬಂಧವಿರಲಿಲ್ಲ. ಮೊದಲ ಪತ್ನಿ ಸವಿತಾ ಎಂಬ ಹೆಸರೇ ಕಾಲ್ಪನಿಕವಾಗಿತ್ತು. ಇನ್ನು ಮೂರನೇ ಪತ್ನಿ ತಾನೆಂದು ಹೇಳಿಕೊಂಡ ಮಗಳು ಸುನೀತಾ ಪೊಲೀಸರಿಗೆ ಕೊಟ್ಟ ಫೋಟೋ ನಕಲಿ ಚಿತ್ರವಾಗಿತ್ತು. ದುರಂತವೆಂದರೆ ಇದ್ಯಾವುದಕ್ಕೂ ಸಂಬಂಧವೇ ಇಲ್ಲದ ತಿರುಪತಿಯಲ್ಲಿ ಪುರುಷೋತ್ತಮನ ಜೊತೆ ಮದುವೆಯಾಗಿದ್ದ ದುರ್ಗಾ ಭವಾನಿ ಎಂಬಾಕೆ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಳು!

ಜಾರಕಿಹೊಳಿ ಬಂಗಲೆಯ ಮರ್ಮ?

ಪುರುಷೋತ್ತಮ ಲಂಪಟನಿರಬಹುದು. ಆದರೆ ಮದುವೆಯಾಗಿದ್ದೇ ಸುಳ್ಳಾಗಿತ್ತು. ಪುರುಷೋತ್ತಮನನ್ನು ಮುಂದಿಟ್ಟುಕೊಂಡು ಅಮ್ಮ-ಮಗಳು ಕೊಳ್ಳೆ ಹೊಡೆದ ಆಸ್ತಿ ಎಲ್ಲಿ ಕೈತಪ್ಪುತ್ತೋ ಎಂದು ಮದುವೆಯ ಕತೆ ಕಟ್ಟಿದ್ದನ್ನು ಟೀವಿಗಳೇ ಬಯಲಿಗೆಳೆದುಬಿಟ್ಟವು.

ಇಂಥ ಅನಾಹುತಕಾರಿ ಸುಶೀಲಾ ಶರ್ಮಾಳ ಜೊತೆ

ಇದಿಷ್ಟು 2000 ರ ಇಸವಿ ತನಕದ ಸುಶೀಲಾ ಶರ್ಮಾಳ ಭಾನಗಡಿಗಳಾದರೆ ಇಲ್ಲಿಂದಾಚೆಗೆ ಆಕೆಯ ಬ್ಲ್ಯಾಕ್ ಗ್ರಾಬಿಂಗ್ ಸ್ಟೈಲೇ ಬೇರೆ. ಈ ಮಧ್ಯೆ ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿ ರಾಜೇಂದ್ರನನ್ನು ಪರಿಚಯಿಸಿಕೊಂಡ ಸುಶೀಲಾ ಶರ್ಮಾ ಆತನ ತಮ್ಮ ಫ್ರಾಂಕ್ಲಿನ್ ಆಂಡ್ರೂಸ್ ಜೊತೆ ಅತೀ ಸಲುಗೆಯಿಂದ ಓಡಾಡುತ್ತಾಳೆ. ಅದೇನಾಯಿತೋ 2000 ದ ಮಾರ್ಚ್‌ನಲ್ಲಿ ಬಸವನಗುಡಿಯ ಕೆ.ಆರ್. ರಸ್ತೆಯಲ್ಲಿ ವಾಕಿಂಗ್ ಮಾಡಿಕೊಂಡಿದ್ದ ಫ್ರಾಂಕ್ಲಿನ್ ಆಂಡ್ರೂಸ್‌ನನ್ನು ರೌಡಿ ಗುಂಪೊಂದು ನಡುರಸ್ತೆಯಲ್ಲೇ ಅಟ್ಯಾಡಿಸಿ ಕತ್ತರಿಸುತ್ತದೆ.



ಆಂಡ್ರೂಸ್ ಸತ್ತೇ ಹೋದನೆಂದು ಬಿಟ್ಟು ಹೋದ ಹಂತಕರ ಪೈಕಿ ಸುಶೀಲಾಳ ಕಾರಿನ ಡ್ರೈವರ್ ರಾಜು ಕೂಡ ಒಬ್ಬ. ಅದೃಷ್ಟವಶಾತ್ ಬದುಕುಳಿದ ಆಂಡ್ರೂಸ್ ಸುಶೀಲಾಳನ್ನೇ ಮೊದಲ ಆರೋಪಿಯನ್ನಾಗಿಸಿ ದೂರು ಕೊಡುತ್ತಾನೆ. ಬಸವನಗುಡಿ ಪೊಲೀಸರು ಸುಶೀಲಾ, ಆಕೆಯ ಡ್ರೈವರ್ ರಾಜು ಮತ್ತು ಇತರೇ ಮೂವರು ಆಸಾಮಿಗಳನ್ನು ಹಿಡಿದು ಜೈಲಿಗೆ ಹಾಕುತ್ತಾರೆ. ಎರಡು ತಿಂಗಳು ಜೈಲು ಕಳೆದ ಸುಶೀಲಾ ತನ್ನ ಜೊತೆಗೇ ಜೈಲಲ್ಲಿದ್ದ ಇನ್ನಿಬ್ಬರು ಹುಡುಗಿಯರಿಗೆ ಜಾಮೀನು ಮಾಡಿಸುತ್ತಾಳೆ.

2004 ರ ಹೊತ್ತಿಗೆ ಸುಶೀಲಾಳ ಗೆಟಪ್ಪೇ ಬದಲಾಗಿ ಪ್ರತಿಷ್ಠಿತ ಲ್ಯಾವೆಲ್ಲಿ ರಸ್ತೆಯ ಗೋಲ್ಡನ್ ಆರ್ಕಿಡ್ಸ್ ಅಪಾರ್ಟ್‌ಮೆಂಟ್ಸಿನಲ್ಲಿ ಒಂದೂವರೆ ಕೋಟಿಯ ಫ್ಲಾಟ್ ಒಂದನ್ನು ಖರೀದಿಸುತ್ತಾಳೆ. ಅಲ್ಲೇ ಮಗಳು ಸುನೀತಾಳ ಜೊತೆ ವಾಸಿಸಿಕೊಂಡಿದ್ದು ಜೇವಧಾನಿ ಇನ್ವೆಸ್ಟರ್ಸ್ ಅಂಡ್ ಡೆವಲಪರ್ಸ್ ಎಂಬ ನಾಮಕಾವಸ್ತೆಯ ಕಂಪೆನಿಯೊಂದರ ಬೋರ್ಡ್ ಹಾಕುತ್ತಾಳೆ. ಅದೇ ಗೋಲ್ಡನ್ ಆರ್ಕಿಡ್ ಅಪಾರ್ಟ್‌ಮೆಂಟ್‌ನಲ್ಲಿ ಮತ್ತೆ ಒಂದೂವರೆ ಕೋಟಿಯ ಇನ್ನೊಂದು ಫ್ಲಾಟ್ ಖರೀದಿಸಿ ಅದನ್ನು ತನ್ನ ಅತಿಥಿಗಳಿಗೆಂದು ಮೀಸಲಿಡುತ್ತಾಳೆ.



ಎಚ್.ಎಂ.ಟಿ. ಸಮೀಪ ದೋಚಿದ ಅರಣ್ಯ ಭೂಮಿ

ಅಲ್ಲಿಗೆ ಸುಶೀಲಾ ಶರ್ಮಾಳ ರಿಯಲ್ ಎಸ್ಟೇಟ್ ಹಾವಳಿಗಳ ಎರಡನೇ ಇನ್ನಿಂಗ್ಸ್ ಶುರುವಾಗಿತ್ತು, ಅದೂ ಯಾವ ಮಟ್ಟಕ್ಕೆಂದರೆ ಎಂದೋ ಸತ್ತು ಹೋಗಿದ್ದ ಮುತ್ತಯ್ಯ ಎಂಬಾತ ತನಗೆ ಜೆಪಿಎ ಮಾಡಿ ಕೊಟ್ಟಿದ್ದಾನೆಂದು ಕಳ್ಳ ಜೆರಾಕ್ಸ್ ಪ್ರತಿಯೊಂದನ್ನು ಹಿಡಿದು ಮಾಳಗಾಳದ 150x 180 ಅಳತೆಯ ಸೈಟಿಗೆ ರಾತ್ರೋರಾತ್ರಿ ದಾಳಿಯಿಟ್ಟಳು. ಸೈಟಿನ ಅಸಲೀ ಧಣಿ ರಾಜೇಶ್ ವಿರುದ್ಧ ತನ್ನ ವಾಚು, ಉಂಗುರ, ಚೈನು ಕಿತ್ತುಕೊಂಡು ಹಲ್ಲೆ ನಡೆಸಿದರೆಂದು ಜ್ಞಾನಭಾರತಿ ಪೊಲೀಸ್ ಠಾಣೆಗೆ ದೂರು ಕೊಡುತ್ತಾಳೆ. ಇದಾಗಿ ಕೆಲದಿನಕ್ಕೆ ಚಾಮರಾಜಪೇಟೆಯ ಸೈಟೊಂದಕ್ಕೆ ವಕ್ಕರಿಸಿ ಅದರ ಮಾಲೀಕ ದೇವರಾಜು ತನ್ನನ್ನು ರೇಪ್ ಮಾಡಿದನೆಂದು ಇನ್ಸ್‌ಪೆಕ್ಟರ್ ವೈ.ಬಿ. ನಾಗರಾಜಯ್ಯನಿಗೆ ಇನ್ನೊಂದು ಕಂಪ್ಲೆಂಟ್ ಕೊಡುತ್ತಾಳೆ. ಆಯ್ತು ರೇಪ್ ನಡೆದ ಬಗ್ಗೆ ಮೆಡಿಕಲ್ ಪರೀಕ್ಷೆಯಾಗಲಿ ಎಂದು ಇನ್ಸ್‌ಪೆಕ್ಟರ್ ಹೇಳುತ್ತಿದ್ದಂತೆ ಪೊಲೀಸ್ ಠಾಣೆ ಬಿಟ್ಟೇ ಪರಾರಿಯಾಗುತ್ತಾಳೆ.

ಇದು ಸುಶೀಲಾ ಶರ್ಮಾಳ ಕೇಡಿ ಬುದ್ಧಿಯ ಕೆಲ ಸ್ಯಾಂಪಲ್ಲುಗಳಷ್ಟೇ. ಸಾಮಾನ್ಯವಾಗಿ ಹೆಂಗಸರು ವ್ಯವಹಾರದಲ್ಲಿ ಮೋಸ ಮಾಡುವುದಿಲ್ಲ ಎಂದುಕೊಂಡೇ ದೂರದ ಮುಂಬಯಿ, ದೆಹಲಿ, ಲಕ್ನೋ, ಅಹಮದಾಬಾದ್‌ನಿಂದ ಬರುವ ಬಹುತೇಕ ಲ್ಯಾಂಡ್ ಡೀಲರುಗಳನ್ನು ಮುಟ್ಟಿ ನೋಡಿಕೊಳ್ಳುವಂತೆ ಯಾಮಾರಿಸಿದ್ದಾಳೆ ಸುಶೀಲಾ ಶರ್ಮಾ. ಈ ಪೈಕಿ ಕಾಶ್ಮೀರದ ಸುನೀಲ್ ಎಂಬಾತನಿಗೆ ತನ್ನ ದೇವನಹಳ್ಳಿ ಏರ್‌ಪೋರ್ಟ್ ಪಕ್ಕದ ಎರಡೆಕರೆ ಜಮೀನು ತೋರಿಸಿ ಮೂವತ್ತು ಲಕ್ಷದ ಅಡ್ವಾನ್ಸ್ ಕಿತ್ತು ವಂಚಿಸಿದ್ದಾಳೆ.
ಹಿಂದಿಯ ಖ್ಯಾತ ನಟ ರಾಜ್‌ಕುಮಾರ್‌ನ ಮಗಳು ವಾಸ್ತುವಿಕತಾ ಎಂಬಾಕೆಯಿಂದ ದೇವನಹಳ್ಳಿ ಸಮೀಪದ ಚಿಕ್ಕ ಕಿತ್ತಮಂಗಲದಲ್ಲಿ 4.38 ಎಕರೆ ಫಾರ್ಮ್‌ಹೌಸ್ ಖರೀದಿಸಿದ್ದಕ್ಕೆ ಈಕೆ ಕೊಟ್ಟ ಎರಡು ಕೋಟಿಯ ಚೆಕ್ಕುಗಳೆಲ್ಲ ಬೌನ್ಸ್ ಆಗಿವೆ. ನಟ ರಾಜ್‌ಕುಮಾರ್‌ನ ಮಗಳು ಈ ಬಗ್ಗೆ ಮುಂಬಯಿ ವರ್ಲಿ ಪೊಲೀಸರಿಗೆ ದೂರುಕೊಟ್ಟಿದ್ದಾಳೆ. ಗುಡಿಬಂಡೆ ತಾಲ್ಲೂಕು ಕಸಬಾ ಹೋಬಳಿ ವಾಬಸಂದ್ರದಲ್ಲಿ ಈಕೆ ಖರೀದಿಸಿದ ಹನ್ನೆರಡೂವರೆ ಎಕರೆ ಜಮೀನಿನ ಮಾರ್ಕೆಟ್ ರೇಟೇ ಆರೂವರೆ ಕೋಟಿಯಾಗುತ್ತದೆ. ದೇವನಹಳ್ಳಿ ಏರ್‌ಪೋರ್ಟ್ ಸಮೀಪದ ಶಿಡ್ಲಘಟ್ಟ ರಸ್ತೆಯ ಬಳಜಿಗರ ಪಡೆ ಗ್ರಾಮದಲ್ಲಿ ಒಂದೇ ಪ್ಲಾಟು 96 ಎಕರೆಯಷ್ಟು ಭೂಮಿ ಖರೀದಿಸುತ್ತಾಳೆ. ಅದೂ ಎರಡು ಕೋಟಿಯಷ್ಟು ಅಡ್ವಾನ್ಸ್ ಕೊಟ್ಟು!

ಇದರ ಪಕ್ಕದಲ್ಲೇ ಮತ್ತೆ ನಾಲ್ಕೂವರೆ ಎಕರೆಗೆ ಪಿಳ್ಳಪ್ಪ ಎಂಬಾತನಿಂದ ಅಗ್ರಿಮೆಂಟ್ ಮಾಡಿಕೊಂಡು ಆತನಿಗೆ ಕೊಟ್ಟ ಐದು ಲಕ್ಷದ ಚೆಕ್ಕು ಬೌನ್ಸಾಗುತ್ತದೆ. ಪ್ರಶ್ನೆಯೆಂದರೆ ಈತನಕ ಒಂದೇ ಒಂದು ಲ್ಯಾಂಡ್ ವ್ಯವಹಾರವನ್ನೂ ನೆಟ್ಟಗೆ ಮಾಡಿ ಲಾಭ ಅಂತ ಒಂದೇ ಒಂದು ಪೈಸೆಯನ್ನೂ ಸಂಪಾದಿಸದ ಸುಶೀಲಾ ಶರ್ಮಾಳಿಗೆ ಇಷ್ಟೆಲ್ಲ ದುಡ್ಡು ಬಂದಿದ್ದಾದರೂ ಎಲ್ಲಿಂದ?

ಆರ್‌ಬಿಐನ ಡಿಫಾಲ್ಟರ್ಸ್ ಪಟ್ಟಿಯಲ್ಲಿರುವುದರಿಂದ ಯಾವುದೇ ಬ್ಯಾಂಕ್ ಈಕೆಗೆ ಸಾಲ ಕೊಡುವುದಿಲ್ಲ. ಹೀಗೆ ಕಂಡಕಂಡ ಆಸ್ತಿಗೆ ಅಡ್ವಾನ್ಸ್ ಕೊಟ್ಟು ಎಲ್ಲೆಂದರಲ್ಲಿ ವಂಚನೆ ಕೇಸಿಗೆ ಸಿಲುಕಿದ್ದರಿಂದ ಹೂಡಿದ ಕೋಟಿಗಟ್ಟಲೆ ದುಡ್ಡೂ ಪ್ರಯೋಜನಕ್ಕೆ ಬರುತ್ತಿಲ್ಲ. ಅಂದಮೇಲೆ ಈಕೆಗೆ ಕೋಟಿಗಟ್ಟಲೇ ದುಡ್ಡು ಹುಟ್ಟುವುದಾದರೂ ಎಲ್ಲಿಂದ? ಏಕೆ ಮೇಲೆ ಬಿದ್ದು ಕೈಯಿಟ್ಟ ಪ್ರತಿ ಡೀಲನ್ನೂ ಕೋರ್ಟಿಗೊಯ್ಯುತ್ತಾಳೆ? ಯಾವ ಧೈರ್ಯದ ಮೇಲೆ ಬೆಂಗಳೂರಿನಲ್ಲಿ ಇಷ್ಟೊಂದು ಭೂವಿವಾದಗಳಿಗೆ ಕೈಹಾಕಿದ್ದಾಳೆ? ಈಕೆಯ ಹಿಂದಿರುವ ಕಾಣದ ಕೈ ಯಾರು? ಕಮ್ಮಿಯೆಂದರೂ ಎಂಟು ಪೊಲೀಸ್ ಠಾಣೆಗಳಿಗೆ ವಾಂಟೆಡ್ ಆಗಿರುವ ಈಕೆಯನ್ನು ಬೆಂಗಳೂರು ಪೊಲೀಸರು ಏಕೆ ಮುಟ್ಟುತ್ತಿಲ್ಲ?

ನಿಜಕ್ಕೂ ಸುಶೀಲಾ ಶರ್ಮಾಳ ರಿಯಲ್ ಎಸ್ಟೇಟ್ ದಂಧೆಯ ಹಿಂದೆ ಮುಂಬಯಿ ಅಂಡರ್‌ವರ್ಲ್ಡ್‌ನ ದುಡ್ಡಿದೆಯೆ?

ಇದು ಅಸಲೀ ಪ್ರಶ್ನೆ. ಬೆಂಗಳೂರಿನ ಮೂರು ಪ್ರಮುಖ ಲ್ಯಾಂಡ್ ಹೊಡೆದಾಟದಲ್ಲಿ ಈಕೆ ಪಾತಕಿ ರವಿ ಪೂಜಾರಿಯ ಹೆಸರು ಬಳಸಿದ್ದಾಳೆ. ತನ್ನಿಂದ ವಂಚನೆಗೀಡಾದ ಪ್ರತಿಯೊಬ್ಬರನ್ನೂ ಮುಗಿಸುತ್ತೇನೆಂದು ಧಮಕಿ ಕೊಡುತ್ತಾಳೆ.

ಇಷ್ಟಾಗ್ಯೂ ಈಕೆಯ ವಿರುದ್ಧ ಪೊಲೀಸರಿನ್ನೂ ಮುಗುಮ್ಮಾಗಿದ್ದಾರೇಕೆ?

■ ರಾ. ಸೋಮನಾಥ್



ಪುಷ್ಪಾ ಗಂಗ್ವಾನಿಯ ಬಂಗಲೆ

ರೆಗ್ಯೂಲರ್ ಆತ್ಮೀಯತೆ ಇಟ್ಟುಕೊಂಡ ಆಕ್ಸ್‌ಫರ್ಡ್ ಅರಸರಾಜು ಮಗ ರಮೇಶ್ ರಾಜು ಮತ್ತು ಮಾಜಿ ಸಮಾಜ ಕಲ್ಯಾಣ ಮಂತ್ರಿ ಬಾಲಚಂದ್ರ ಜಾರಕಿಹೊಳಿಗೂ ಈಕೆಯ ರಿಯಲ್ ಎಸ್ಟೇಟ್ ವಂಚನೆಗೂ ಯಾವುದೋ ಸಂಬಂಧವಿರಲೇಬೇಕು. ಇಲ್ಲದಿದ್ದರೆ ಸದ್ಯ ಮತ್ತೊಬ್ಬ ಮಾಜಿ ಮಂತ್ರಿ ಡಿ.ಟಿ. ಜಯಕುಮಾರ್ ಬಾಡಿಗೆಗೆ ವಾಸಿಸುತ್ತಿರುವ ಸದಾಶಿವನಗರದ 349, 4 ಚದುರ ಅಡಿ ಬಂಗಲೆಯನ್ನು ಸುಶೀಲಾ ಶರ್ಮಾಳೇ ಸಿಂಹ ಸುಧೀರ್ ವೋರಾ ಎಂಬಾತನಿಂದ ಬಾಲಚಂದ್ರ ಜಾರಕಿಹೊಳಿಗೆ ಏಕೆ ಕೊಡಿಸುತ್ತಾಳೆ? ಈಕೆಯ ನಕಲಿ ಅನಾಥಾಶ್ರಮಕ್ಕೆ ಏಕೆ ಸಮಾಜ ಕಲ್ಯಾಣ ಇಲಾಖೆಯಿಂದ ಲಕ್ಷಾಂತರ ರೂಪಾಯಿ ಅನುದಾನ ಮಂಜೂರಾಗುತ್ತದೆ? ತನಿಖೆ ನಡೆಯಬೇಕಲ್ಲವೇ?

‘ಅವ್ವ ಚಿತ್ರ’ ನೋಡಿ ನಮ್ಮ ಮಕ್ಕಳು ಹಾಳಾಗ್ತವುಂಟು

ಥೂತ್ತೇರಿ

ಯಾಹೂ

ಪತ್ರಿಕೆ ಮುದ್ರಣದ ದಾರಿ ಹಿಡಿಯುವ ಸಮಯಕ್ಕೆ ಸರಿಯಾಗಿ ಸಂಪಾದಕರ ಫೋನ್ ಸದ್ದು ಮಾಡತೊಡಗಿತು. ತಮ್ಮ ಮುಂದಿದ್ದ ಮಾಯಾಜಾಲದ ತೆರೆಗೆ ಕಣ್ಣುನೆಟ್ಟಿದ್ದ ಸಂಪಾದಕರು ಎಷ್ಟು ಹೊತ್ತಾದರೂ ಫೋನಿಗೆ ಕೈಯಾಕದ ಪ್ರಯುಕ್ತ ನಾನೇ ತೆಗೆದುಕೊಳ್ಳಬೇಕಾಯ್ತು.

“ಹಲೋ, ನಾನು ಪ್ರಸಾದ್ ಮಾತನಾಡ್ತಯಿರುವುದು. ಮೇಡಂಗೆ ಫೋನು ಕೊಡಿ.”

“ಮೇಡಂ ಕಂಪ್ಯೂಟರ್ ಮುಂದೆ ಕುಳಿತಿದ್ದಾರೆ. ತಾವ್ಯಾರು?”

“ನಾನು ಪ್ರಸಾದ್ ಇವರೆ.”

“ಎಲ್ಲಿಂದ?”

“ಜೋಯಿಡಾದಿಂದ.”

“ಯಾವ ದೇಶ ಅದು? ಎಲ್ಲಿದೆ?”

“ಜೋಯಿಡ ಗೊತ್ತಿಲ್ಲ ಅಂತ ಹೇಳಿದರೆ ನೀವು ಕರ್ನಾಟಕದಲ್ಲಿ ಇಲ್ಲ ಅಂತ ಆಯ್ತಲ್ಲ?”

“ಯಾವುದೋ ಬೇರೆ ದೇಶದ ಹೆಸರು ಕೇಳಿದಂತಾಯ್ತು, ಅದ್ಕೆ ಕೇಳಿದೆ. ಏನಾಗಬೇಕಾಗಿತ್ತು?”

“ಮೇಡಂ ಬಳಿ ನಾವು ಏನೊ ಹೇಳುವುದಿದೆ.”

“ನನಗೇ ಹೇಳಿ, ನಾನವರಿಗೆ ಹೇಳ್ತಿನಿ.”

“ಅವರ ‘ಅವ್ವ’ ಸಿನಿಮಾ ನೋಡಿದ್ದರೆ ಮಕ್ಕಳು ಹಾಳಾಗುವುದುಂಟು. ಅಂತ ಸಿನಿಮಾ ತೆಗೆಯುವುದಾ ಅವರು?”

“ನಿಮ್ಮ ಮಕ್ಕಳಾ?”

“ಹೌದು.!”

“ಅಲ್ರೋ ಗಾಂಪರ, ‘ಅವ್ವ’ ಚಿತ್ರ ತೆಗೆದಿರೋದು ಮಕ್ಕಳಿಗಲ್ಲ, ನಿಮ್ಮಂಥ ಮಂದಮತಿಗಳಿಗೆ. ಅದ್ಕೆ ಅಲ್ವಾ, ‘ಎ’ ಸರ್ಟಿಫಿಕೇಟ್ ಕೊಟ್ಟಿರೋದು?”

“ನೀವು ಗಾಂಪರು, ಮಂದಮತಿಗಳು ಅಂತ ಹೇಳುವುದು ಬೇಡ.”

“ಇನ್ನೇನ್ಹೇಳಬೇಕು ನಿಮಗೆ? ‘ಅವ್ವ’ ಚಿತ್ರ ಕಾದಂಬರಿ ನಿಷ್ಠ ಚಿತ್ರ. ಆ ಕಾದಂಬರಿ ಬಂದು ಸರಿಯಾಗಿ ಮುವ್ವತ್ತು ವರ್ಷ ಆಯ್ತು, ಒಂದಳ್ಳಿ ವಾತಾವರಣದಲ್ಲಿ ಮಕ್ಕಳು ಹೇಗೆ ಹಾಳಾಗ್ತರೆ, ಊರಿಗೆ ಒಳ್ಳೆ ಮೇಷ್ಟ್ರು ಇಲ್ಲ ಅಂದ್ರೆ ಶಾಲೆ ಹೇಗೆ ಹಾಳಾಗುತ್ತೆ, ಪ್ರೀತಿ ಪ್ರೇಮಕ್ಕೆ ಬೆಲೆ ಕೊಡದೆ ಜಾತೀಯತೆಯನ್ನೆ ಮೆರೆಯೋದಾದ್ರೆ ಅದರ ಪರಿಣಾಮ ಏನಾಗುತ್ತೆ ಅಂತ ತಿಳಿಸಿರೊ ಚಿತ್ರ ಅದು. ಆ ಚಿತ್ರದಲ್ಲಿ ಹಳ್ಳಿಗರಿಗೆ ಜವಾಬ್ದಾರಿಯ ಅರಿವು ಮಾಡಿಕೊಡೊ ಸಂದೇಶಗಳೆಲ್ಲಾ ಇವೆ. ಚಿತ್ರದ ಆಶಯ ಕರಿಯನಂಥ ಮಕ್ಕಳು ಹೆಚ್ಚಾಗಲಿ, ಸಣ್ಣೆರಪ್ಪನಂತ ಮೇಷ್ಟ್ರು ಸಂಖ್ಯೆ ಜಾಸ್ತಿಯಾಗಲಿ ಅಂತ ಇದಿಯಾ?”

“ಸಮಾಜ ಹಾಳಾಗ್ತ ಇರುವುದು ಶಿಕ್ಷಕರಿಂದಲ್ಲ, ಇಂಥ ಚಿತ್ರ ನೋಡಿದ ಮಕ್ಕಳಿಂದ.”

“ಲೇ ಮಂಗ ಮುಂಡೆದೆ, ಪಾಠ ಹೇಳೊ ಗುರುಗಳು ಹೆಣ್ಣುಮಕ್ಕಳಿಗೆ ಕೊಡೊ ಲೈಂಗಿಕ ಕಿರುಕುಳ ಹಗರಣ ತಿಂಗಳಿಗೊಂದು ಪ್ರಕಟ ಆಗ್ತಾ ಅವಲ್ಲ, ಅದು ಗೊತ್ತಿಲವ ನಿನಗೆ? ಅರ್ಧಕ್ಕರ್ಧ ಶಿಕ್ಷಕರು ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡು ಕುಡುಕರಾಗಿರದು ಗೊತ್ತಿಲವ ನಿನಿಗೆ? ‘ಅವ್ವ’ ಚಿತ್ರದ ಸಂದೇಶ ಗೊತ್ತ ನಿನಿಗೆ?”



“ಮಕ್ಕಳು ಹ್ಯಂಗಾಳಾಗ್ತರೆ?”

“ಆ ಸಿನಿಮಾ ನೋಡಿದ ಮಕ್ಕಳು ಓಸಿ ಆಡುವುದನ್ನು ಕಲಿಯುತ್ತಾರೆ. ಸಾರಾಯಿ ಕುಡಿಯುವುದನ್ನು ಕಲಿಯುತ್ತಾರೆ. ಕಳವು ಮಾಡುವುದನ್ನು ಕಲಿಯುವುದುಂಟು.”

“ಹೌದಾ?”

“ಹೌದು, ಕಲಿಯುವ ವಯಸ್ಸಿನ ಮಕ್ಕಳು ಹಾಳಾಗುವುದುಂಟು.”

“ಅವ್ವ ರಿಲೀಸ್ ಆದ ಮೇಲೆ ಇಂಥ ಪ್ರಕರಣಗಳು ಜಾಸ್ತಿಯಾಗಿದಾವ?”

“ನಾವು ಸಮೀಕ್ಷೆ ಮಾಡಿಲ್ಲ.”

“ಅವ್ವ, ರಿಲೀಜ್‌ಗೂ ಮೊದಲು ಇಂಥ ಪ್ರಕರಣ ಮಕ್ಕಳಿಂದ ನಡೆದೇ ಇರಲಿಲ್ಲವ?”

“ಅದನ್ನು ಹೇಳಲು ಬರುವುದಿಲ್ಲ, ಈ ಚಿತ್ರ ಮಕ್ಕಳ ಮೇಲೆ ತುಂಬ ಪರಿಣಾಮ ಬೀರುವುದುಂಟು. ಹಾಗಂತ ನನ್ನ ಗೆಳೆಯರಾದ ಗಿರೀಶ್, ಶ್ರೀಕಾಂತ ಹೇಳ್ತಯಿದ್ದಾರೆ.”

“ಪ್ರಸಾದ್, ಗಿರೀಶ್, ಶ್ರೀಕಾಂತ ಅಂದ್ರೆ, ಯಂಕ, ನಾಣಿ, ಸೀನ ಅಲ್ಲವೆ?”

“ಅದ್ಯಾಕೆ ಹಾಗೆ ಹೇಳುವುದು?”

“ನಿಮ್ಮ ಅಭಿಪ್ರಾಯನ ನಾನು ಭಟ್ಟನ ಪತ್ರಿಕೆಲಿ ನೋಡಿದ್ದೆ, ಅವರೆನಾ ನೀವು?”

“ಹೌದು ಅವರೆ, ಇಂಥ ಚಿತ್ರಗಳಿಂದ ಮಕ್ಕಳು ಹಾಳಾಗ್ತವುಂಟು.”

“ಏನು ಸಂದೇಶ? ಅಲ್ಲಿ ಸಂದೇಶ ಬೇರೆ ಉಂಟಾ?”

“ಒಂದಳ್ಳಿಲಿ ಸಣ್ಣೆರಪ್ಪನಂತ ಮೇಷ್ಟ್ರು ಇರಬಾರದು, ಕರಿಯನಂತ ಕುಡುಮಿ ಇರಬಾರ್ದು, ಭದ್ರನನಂತ ಜಾತಿವಾದಿ ಲೀಡ್ರು ಇರಬಾರ್ದು, ಇವರೆಲ್ಲಾ ಇರೊ ಹಳ್ಳಿ ಉದ್ಧಾರವಾಗಲ್ಲ ಅನ್ನೊ ಸಂದೇಶ ಇದೆ ಕಣೊ, ಗಾಂಪ!”


“ಪುನಃ ಗಾಂಪ ಅನ್ನುವುದು ಬೇಡ ನೀವು.”

“ಮತ್ತಿನ್ನೆನನ್ನಲಿ? ನೀನು ಫೋನು ಮಾಡಬೇಕಾದದ್ದು ಕವಿತಾ ಲಂಕೇಶ್‌ಗೆ. ಅದೆ, ಫೋನು ಮಾಡಿರೋದು ಗೌರಿ ಲಂಕೇಶ್‌ಗೆ. ಈಗಾಗ್ಲೆ ‘ಅವ್ವ’ ಚಿತ್ರ ನೋಡಿದ ಮಕ್ಕಳೆಲ್ಲಾ ಕುಡುದು ಜೂಜಾಡಿ ಕಳ್ಳತನ ಮಾಡ್ತಯಿವೆ ಅನ್ನೋತರ ಹೇಳ್ತಯಿಲ್ಲಾ ಮೊದ್ಲು ಆ ವಕ್ರತನ ಬಿಡ್ಲೆಲೆ.”

“ನಿಮ್ಮ ಬಳಿ ಮಾತನಾಡುವವರಿಗೆ ಮಂತೆಯಿಲ್ಲ.”

“ಅದೀಗ ಗೊತ್ತಾಯ್ತಲ್ಲ ಬಿಡು!”

ಥೂತ್ತೇರಿ!!! ■



ದಲಿತ ಜಯರಾಮನನ್ನು ಬೆತ್ತಲೆ ಮಾಡಿ ಬೂಟು ಕಾಲಿನಿಂದ ಒದೆಯುತ್ತಿರುವ ಬಿಜೆಪಿಗಳು

ಬಿಜೆಪಿ ದೌರ್ಜನ್ಯ ದಲಿತರ ಬೆತ್ತಲೆ ಮೆರವಣಿಗೆ

ಬಿಜೆಪಿಯ ಪುರೋಹಿತಶಾಹಿ ಭಟ್ಟ, ಜುಟ್ಟರೆಲ್ಲಾ ಸೇರಿಕೊಂಡು ಇಡೀ ಕರ್ನಾಟಕಕ್ಕೆ ಬೆಂಕಿ ಹಚ್ಚಲು ಹೊರಟಿದ್ದಾರೆ. ಮುಸ್ಲಿಮರನ್ನು ಹೊಡೆದೂ ಬಡಿದೂ ಹಿಂಸಿಸುತ್ತಿದ್ದ ಬಿಜೆಪಿ ಮತ್ತು ಸಂಘ ಪರಿವಾರದ ವಕ್ರದೃಷ್ಟಿ ಈಗ ದಲಿತರ ವಿರುದ್ಧವೂ ತಿರುಗಿದೆ. ದನದ ಮಾಂಸ ಮಾರುತ್ತಿದ್ದನೆಂಬ ನೆಪ ಹೇಳಿ ಭಯಾನಕ ದೌರ್ಜನ್ಯ ನಡೆಸಿರುವ ಘಟನೆಯೊಂದು ಮಲೆನಾಡಿನಲ್ಲಿ ನಡೆದುಹೋಗಿದೆ. ಇಲ್ಲಿ ಪ್ರಕಟಿಸಿರುವ ಫೋಟೋಗಳನ್ನೇ ನೋಡಿ.

ಬಿಳಿದಾಳೆ ಈರ

ಕರ್ನಾಟಕದಲ್ಲಿ ಬಿಜೆಪಿಯು ಅಧಿಕಾರಕ್ಕೆ ಬಂದೇ ಬಿಟ್ಟರೆ ಜನರಿಗೆ ಏನೇನು ಅನಾಹುತಗಳು ಕಾದಿವೆಯೊ....

ಇವರು 'ನಾವೆಲ್ಲಾ ಹಿಂದೂ ನಾವೆಲ್ಲಾ ಒಂದು' ಎನ್ನುತ್ತಲೇ ದಲಿತರನ್ನು ಕೊಚ್ಚಿ ಚೆಲ್ಲುತ್ತಾ ಅಟ್ಟಹಾಸ ನಡೆಸುತ್ತಿದ್ದಾರೆ. ಇವರ ಪುರೋಹಿತಶಾಹಿ ಭಟ್ಟ, ಜುಟ್ಟರೆಲ್ಲಾ ಸೇರಿಕೊಂಡು ಇಡೀ ಕರ್ನಾಟಕಕ್ಕೆ ಬೆಂಕಿ ಹಚ್ಚಲು ಹೊರಟಿದ್ದಾರೆ.


ಬಿಜೆಪಿಗೀಗ ಓಟು ಬೇಕು.

ಬಿಜೆಪಿಗೀಗ ಅಧಿಕಾರ ಬೇಕು.

ಅದಕ್ಕಾಗಿ ಅವರಿಗೆ ರಕ್ತವೂ ಚೆಲ್ಲಾಡಬೇಕು.

ಇಂಥ ದುರುದ್ದೇಶದ ಬಿಜೆಪಿ ನಾಯಕತ್ವದ ಹಿಂದೂ ಫ್ಯಾಸಿಸ್ಟರ ಕ್ರೌರ್ಯ ಈಗ ದಲಿತರತ್ತ ತಿರುಗಿದೆ. ದನದ ಮಾಂಸ ಮಾರುತ್ತಾರೆಂದು.

ಅದೇನು ಕಾನೂನುಬಾಹಿರವಲ್ಲದಿದ್ದಾಗಲೂ, ಮುಸ್ಲಿಮರನ್ನು ಹೊಡೆದೂ ಬಡಿದೂ ಹಿಂಸಿಸುತ್ತಿದ್ದ ಬಿಜೆಪಿ ಮತ್ತು ಸಂಘ ಪರಿವಾರದ ವಕ್ರದೃಷ್ಟಿ ಈಗ ದಲಿತರ ವಿರುದ್ಧವೂ ತಿರುಗಿದೆ. ದನದ ಮಾಂಸ ಮಾರುತ್ತಿದ್ದನೆಂಬ ನೆಪ ಹೇಳಿ ಭಯಾನಕ ದೌರ್ಜನ್ಯ ನಡೆಸಿರುವ ಘಟನೆಯೊಂದು ಮಲೆನಾಡಿನಲ್ಲಿ ನಡೆದುಹೋಗಿದೆ. ಇಲ್ಲಿ ಪ್ರಕಟಿಸಿರುವ ಫೋಟೋಗಳನ್ನೇ ನೋಡಿ.



ರಾಜ್ಯದ ಬಹುತೇಕ ದಿನಪತ್ರಿಕೆಗಳೂ ಹಾಗೂ ಟಿವಿ ಚಾನೆಲ್‌ಗಳು ಉದ್ದೇಶಪೂರ್ವಕವಾಗಿಯೇ ಮುಚ್ಚಿಟ್ಟ ಈ ಘಟನೆ ನಡೆದಿರುವುದು ಚಿಕ್ಕಮಗಳೂರಿನ ಬಾಳೆಹೊನ್ನೂರಿನ ಶಾಂತಿಪುರ ಗ್ರಾಮದಲ್ಲಿ.

ಮಾರ್ಚ್ ನಾಲ್ಕನೇ ತಾರೀಖು ಬಿಜೆಪಿ ಗ್ಯಾಂಗ್‌ನಿಂದ ಈ ಭಯಾನಕ ದೌರ್ಜನ್ಯ ನಡೆದಿದ್ದರೂ ಪೊಲೀಸರೂ, ಆಡಳಿತ ಯಂತ್ರಾಂಗವೂ ಮೌನವಾಗಿಯೇ ಇವೆ. ಇನ್ನು ಕಾಂಗ್ರೆಸ್, ಜನತಾದಳಗಳು, ಪಕ್ಷಗಳೂ ಈ ಘಟನೆ ಬಗ್ಗೆ ಕಿಂಚಿತ್ತೂ ಗಮನ ಕೊಡದೆ ತಮ್ಮ ಅಸಲಿ ಯೋಗ್ಯತೆ ಏನೆಂದು ತೋರಿಸಿಕೊಂಡಿವೆ.

ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆಗಳು ಹತ್ತಿರವಾಗುತ್ತಿರುವುದು, ಗುಜರಾತಿನ ಪಾತಕಿ ಮುಖ್ಯಮಂತ್ರಿ ನರೇಂದ್ರ ಮೋದಿ ತಿಂಗಳಿಗೆರಡು ಬಾರಿ ಕರ್ನಾಟಕಕ್ಕೆ ಬಂದು ಹೋಗುತ್ತಿರುವುದು. ಇದೇ ಸಮಯದಲ್ಲಿ ರಾಜ್ಯಾದ್ಯಂತ ಮಸೀದಿ, ಚರ್ಚುಗಳ ಮೇಲೆ ದಾಳಿನಡೆಯುತ್ತಿರುವುದು, ಮುಸ್ಲಿಂ, ಕ್ರಿಶ್ಚಿಯನ್‌ರ ಮೇಲಿನ ಹಲ್ಲೆ, ದೌರ್ಜನ್ಯದ ಘಟನೆಗಳು ಹೆಚ್ಚುತ್ತಿರುವುದಕ್ಕೂ ನೇರ ಸಂಬಂಧವಿದೆ. ಕ್ರಿಶ್ಚಿಯನ್ನರ ಮೇಲೆ ಮತಾಂತರದ ಆರೋಪಿಸುತ್ತಾ, ದನ ಕದಿದರು, ದನ ಸಾಗಾಣಿಕೆ ಮಾಡುತ್ತಿದ್ದಾರೆಂದು ಮುಸ್ಲಿಂ ಹಾಗೂ ದಲಿತರನ್ನು ಬೇಟೆಯಾಡುತ್ತಿರುವ ಬಿಜೆಪಿ ಗುಂಪಿಗೆ ಯಾವ ಕಾನೂನಿನ ಭಯವೂ ಇಲ್ಲದಂತಾಗಿ ಹೋಗಿದೆ.

ಶಾಂತಿಪುರದಲ್ಲಿ ನಡೆದದ್ದು

ಬಿಜೆಪಿಗಳ ಸಮಾಜದ್ರೋಹಿ ಕೆಲಸಗಳು ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಎಗ್ಗಿಲ್ಲದೆ ನಡೆಯುತ್ತಲೇ ಇವೆ.

ಮಲೆನಾಡಿನ ಗಂಧಕಳ್ಳರೂ, ಅಕ್ರಮ ನಾಟಾ ಸಾಗಾಣಿಕೆದಾರರೂ ಭಜರಂಗ ದಳ ಸೇರಿಕೊಂಡು ಹಿಂದೂ ಧರ್ಮದ ಉದ್ಧಾರಕ್ಕೆ ಕಂಕಣ ತೊಟ್ಟು ನಿಂತ ಮೇಲಂತೂ ಇಂಥ ದೌರ್ಜನ್ಯಗಳ ಸಂಖ್ಯೆ ಹೆಚ್ಚಾಗುತ್ತಲೇ ನಡೆದಿದೆ.

ಚಿಕ್ಕಮಗಳೂರು ಜಿಲ್ಲೆ ಜಯಪುರದ ಬಿಜೆಪಿ ಮುಖಂಡ ಅನಂತನ ಗ್ಯಾಂಗ್ ಇದರಲ್ಲೊಂದು.

ಮಾರ್ಚ್ ನಾಲ್ಕನೇ ತಾರೀಖು ಶಾಂತಿಪುರದ ನೀದುವಾನೆವಾಣಿ ವಾಸಿಯಾದ ದಲಿತ ಜನಾಂಗದ ಜಯರಾಂ ಎಂಬುವರು ಅದೇ ಊರಿನ ಕುಂಜುಮ್ಮೈದರ ಕಾಫಿ ತೋಟಕ್ಕೆ ಕೆಲಸಕ್ಕೆ ಹೋಗಿದ್ದಾರೆ. ಆಗ ಮಧ್ಯಾಹ್ನ ಎರಡು ಗಂಟೆ ಸುಮಾರಿಗೆ ಅನಂತನ ಗ್ಯಾಂಗ್ ಅಲ್ಲಿಗೆ ಬಂದಿದೆ. ಜೊತೆಯಲ್ಲಿ ಭಜರಂಗ ದಳದ ಸತೀಶ, ನಿಡವಾಣಿಯ ಸುಂದರೇಶ, ಚಿಮ್ಮನಕೂಡಿಗೆಯ ನಾಗರಾಜ್ ಮತ್ತು ರಾಜೇಶ್, ಮತ್ತಿಮನೆಯ ಜಗದೀಶ್, ಕುಕ್ಕೊಡಿಗೆಯ ಸಚ್ಚಿನ್, ಇಲ್ಲಿಕೆರೆ ಗ್ರಾಮದ ಶಿವರದ, ವೆಂಕಟೇಶ್, ಹೇರೂರಿನ ಕೃಷ್ಣಪ್ಪ ಚಾರಿ, ಗುಂಡಕ್ಕಿಯ ರಿಕ್ಷಾ ಗುಂಡಾ ಮತ್ತಿತರರು ಏಕಾಏಕಿ ಕುಂಜುಮ್ಮೈದುನರ ಮನೆಗೆ ನುಗ್ಗಿದ್ದಾರೆ. ದನ ಕದಿದಿದ್ದಾರೆಂದು ಜಗಳ ತೆಗೆದು ಹಲ್ಲೆ ನಡೆಸಿದ್ದೇ ಅಲ್ಲದೆ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ದಲಿತ ಜನಾಂಗದ ಜಯಾರಾಂರನ್ನು ಎಳೆತಂದು ಬೇಕಾಬಿಟ್ಟಿ ಹೊಡೆದಿದ್ದಾರೆ. ಅಲ್ಲೇ ಇದ್ದ ಬಾಪ ಎಂಬ ಇನ್ನೊಬ್ಬ ಮುಸ್ಲಿಮ್ ವ್ಯಕ್ತಿಯ ಮೇಲೂ ದಾಳಿ ಮಾಡಿದ್ದಾರೆ.

ಯಾಕಾಗಿ ಈ ಗಲಾಟೆ

'ಮುಸ್ಲಿಮರೆಲ್ಲಾ ದೊಡ್ಡ ಕಳ್ಳರು' ಅಂದ ಪೊಲೀಸ್ ವಿಶ್ವನಾಥ್

ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾಗಿರುವ ಕೆ.ಆರ್. ಶ್ರೀನಿವಾಸನ್ ಕೂಡಾ ಗಮನ ಹರಿಸಲೇಬೇಕಾದ ಹೇಳಿಕೆ ಇದು.

ಶಾಂತಿಪುರದಲ್ಲಿ ದಲಿತ ಜಯರಾಂ ಹಾಗೂ ಮುಸ್ಲಿಮರಾದ ಬಾವ, ಕುಂಜುಮ್ಮೈದುನರ ಮೇಲೆ ಭಜರಂಗದಳದವರಿಂದ ಹಲ್ಲೆ ನಡೆದ ಬಗ್ಗೆ ವಿಚಾರಿಸಲು ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಕಾರ್ಯದರ್ಶಿ ಕೆ.ಎಲ್. ಅಶೋಕ್ ಬಾಳೆಹೊನ್ನೂರು ಠಾಣೆಗೆ ಫೋನ್ ಮಾಡಿದ್ದಾರೆ. ಆಗ ಇನ್ಸ್‌ಪೆಕ್ಟರ್ ವಿಶ್ವನಾಥ್ ತಲೆ ಕೆಟ್ಟವನಂತೆ ರೇಗುತ್ತಾ, "ನಿಮಗ್ಯಾಕ್ರಿ ಇವೆಲ್ಲಾ, ಮುಸ್ಲಿಮರೆಲ್ಲಾ ದೊಡ್ಡ ಕಳ್ಳರು" ಎಂದು ತೀರ್ಪು ನೀಡಿದ್ದಾನೆ.

ಹಲ್ಲೆಗೀಡಾದವರನ್ನೇ ಹಿಡಿದು ಬಂಧಿಸಿದ್ದ ಈ ವಿಶ್ವನಾಥ್ ಇವತ್ತಿನ ಕರ್ನಾಟಕ ಪೊಲೀಸರ ಸಮರ್ಥ ಪ್ರತಿನಿಧಿಯಂತಿದ್ದಾನೆ.

ರಾಜ್ಯ ಪೊಲೀಸ್ ಮುಖ್ಯಸ್ಥರು ಶಾಂತಿಪುರ ಪ್ರಕರಣದಲ್ಲಿ ಸ್ಥಳೀಯ ಪೊಲೀಸರು ಭಜರಂಗ ದಳದ ಚೇಲಾಗಳಂತೆ ವರ್ತಿಸಿರುವ ಬಗ್ಗೆ ತನಿಖೆ ಮಾಡಿಸಬೇಕಿದೆ. ಅಥವಾ ಈ ನಾಡಿನ ದಲಿತ, ಮುಸ್ಲಿಂ, ಕ್ರಿಶ್ಚಿಯನ್ನರಿಗೆ, ಎಲ್ಲಾ ದಮನಿತರಿಗೆ ಯಾವುದೇ ಕಾನೂನು ರಕ್ಷಣೆ ನೀಡಲಾಗುವುದಿಲ್ಲ ಎಂದು ಬಹಿರಂಗ ಹೇಳಿಕೆ ನೀಡಿಬಿಟ್ಟರೂ ಆದೀತು.

ಆನಂತರವಾದರೂ ಈ ಜನತೆ ತಮ್ಮ ರಕ್ಷಣೆಗೆ ಬೇಕಾದ್ದನ್ನೆಲ್ಲಾ ತಾವೇ ಏರ್ಪಾಡು ಮಾಡಿಕೊಳ್ಳಬಲ್ಲರು.

ದುಡಿದು ಬದುಕುವ ಈ ಜನರ ಬಳಿ ಇರುವ ಹತಾರುಗಳು ನಿರ್ಣಾಯಕ ಸಂದರ್ಭ ಬಂದಾಗ ಆತ್ಮರಕ್ಷಣೆಯ ಆಯುಧಗಳಾಗಿಯೂ ಬಳಸಬಲ್ಲಂತವುಗಳಾಗಿರುತ್ತವೆ.

ಕರ್ನಾಟಕ ಪೊಲೀಸರು ಈಗಾಗಲೇ ಜನರ ನಂಬಿಕೆ ವಿಶ್ವಾಸ ಕಳೆದುಕೊಂಡಿದ್ದಾರೆ.

ಅವರು ಸಂಘ ಪರಿವಾರದ ಏಜೆಂಟರಾಗಿ ಮಾತ್ರ ಕಾರ್ಯಾಚರಣೆ ನಡೆಸುತ್ತಿರುವ ಬಗ್ಗೆ ನೂರಾರು ಸಾಕ್ಷಿ ಪುರಾವೆಗಳಿವೆ.

ನೊಂದ ಜನ ತಿರುಗಿ ಬೀಳುವ ಮುನ್ನ ಪೊಲೀಸರಿಗೆ ತಮ್ಮ ಕರ್ತವ್ಯ ಹೊಣೆಗಾರಿಕೆಗಳನ್ನು ರಾಜ್ಯ ಪೊಲೀಸ್ ಮುಖ್ಯಸ್ಥರು, ಮಾನವಹಕ್ಕುಗಳ ಆಯೋಗದವರು ತಿಳಿಸಿಕೊಡಬೇಕಿದೆ.

ಅಂದಹಾಗೆ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಸ್.ಆರ್. ನಾಯಕ್ 'ಮಹಿಳೆಯರ ಬಟ್ಟೆ, ಪಬ್'ಗಳಂಥ 'ವಿಚಾರ ಪ್ರಸ್ತಾಪಿಸುತ್ತಾ ತಮ್ಮ ಬಾಲಿಶ ಚಿಂತನೆಗಳನ್ನು ಪ್ರತಿಪಾದಿಸುವ ಬದಲಾಗಿ ಶಾಂತಿಪುರ ಪ್ರಕರಣದ ಬಗ್ಗೆ ವಿಚಾರಣೆ ನಡೆಸುವುದು ಉತ್ತಮ ಅಲ್ಲವೆ?

ಮೈಸೂರಿನ ಹರಿಯಾಣದಲ್ಲಿ ದನದ ಚರ್ಮ ಸುಲಿದರೆಂದು ನಾಲ್ವರು ದಲಿತರನ್ನು ಜೀವಂತ ಸುಟ್ಟ ಘಟನೆ, ದಲಿತರ [illegible] ಸಾಮಾಜಿಕ ಶೋಷಣೆಯ ವಿರುದ್ಧದ ಪಿತೂರಿಗಳು, ದಲಿತ ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರಗಳ ಕಳಂಕವನ್ನೆಲ್ಲಾ [illegible] ಬಿಜೆಪಿ ಪಟಾಲಂಗೆ ಹಿಂದೂ ಧರ್ಮದ ಹೆಸರಿನಲ್ಲಿ ಅಮಾಯಕರನ್ನು ಹೊಡೆದು ಹಿಂಸಿಸಿ ಬೆತ್ತಲುಗೊಳಿಸುವ [illegible] ಗುಣವೂ ಇದೆ.

2005ರ ಮಾರ್ಚ್‌ನಲ್ಲಿ ಉಡುಪಿಯ ಬೌನಲ್ಲೇ ಇಂಥ ಬೆತ್ತಲು ದೌರ್ಜನ್ಯಕ್ಕೆ ಹಾಜಬ್ಬ, ಹಸನಬ್ಬ ಬಲಿಯಾಗಿದ್ದರು. ಹಿಂದೂ [illegible] ವಾದ ಪುರೋಹಿತಶಾಹಿಗಳ ಕರಾಳಕೃತ್ಯ ಇದಾಗಿತ್ತು. ಈಗ ಬಾಳೆಹೊನ್ನೂರಿನ ಇನ್ಸ್‌ಪೆಕ್ಟರ್ ವಿಶ್ವನಾಥ್ ಮಾಡಿರುವಂತೆಯೇ [illegible] ಕೂಡಾ ಉಡುಪಿಯ ಎಸ್‌ಪಿ ರೇಣುಕಾರಾಧ್ಯ ಚಡ್ಡಿಗಳ ವಿರುದ್ಧ ಯಾವುದೇ ಗಂಭೀರ ಕಾನೂನು ಕ್ರಮ ತೆಗೆದುಕೊಳ್ಳಲಿಲ್ಲ. [illegible] ಉಡುಪಿ ಎಸ್ಪಿ ಮುರುಗನ್ ತನ್ನ ಚೇಂಬರ್‌ನಿಂದ ಆಚೆಗೂ ಹೊರಟು ಬರಲಿಲ್ಲ.

ಹಾಜಬ್ಬ-ಹಸನಬ್ಬ ಪ್ರಕರಣ ನಡೆದು ಮೂರು ವರ್ಷಗಳಾಗಿವೆ. ಈ ನಡುವಿನ ಅವಧಿಯಲ್ಲೇ ಕರಾವಳಿ, ಮಲೆನಾಡು [illegible] ಕರ್ನಾಟಕದ ವಿವಿಧೆಡೆ ಹಿಂದೂ ಕೋಮುವಾದಿಗಳಿಂದ ಇಂತಹ ನೂರಾರು ಹಲ್ಲೆ ದೌರ್ಜನ್ಯಗಳು ನಡೆಯುತ್ತಲೇ [illegible] ಗುತ್ತಿವೆ. ಇವರ ದೌರ್ಜನ್ಯಕ್ಕೆ ಕೇವಲ ಮುಸ್ಲಿಮರು-ಕ್ರಿಶ್ಚಿಯನ್ನರು ಮಾತ್ರ ಬಲಿಯಾಗುತ್ತಿಲ್ಲ, ಸೆಕ್ಯುಲರ್ ಆಶಯಗಳುಳ್ಳ ಪ್ರಗತಿಪರರನ್ನು, ಬುದ್ಧಿಜೀವಿಗಳನ್ನು ಬಜೆಪಿ ತನ್ನ ದಾಳಿಗೆ ಗುರಿ ಮಾಡಿಕೊಂಡಿದೆ.

ಹಾಜಬ್ಬ ಹಸನಬ್ಬರಿಂದ ಶುರುವಾಗಿ...



ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಡಾ. ಸಿ.ಎಸ್. ದ್ವಾರಕಾನಾಥ್‌ರ ಮೇಲೆ ಮಡಿಕೇರಿಯಲ್ಲಿ ನಡೆದ ದೌರ್ಜನ್ಯ, ತೀರಾ ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಕುರುಬ ಜನಾಂಗದ ಮಠಾಧೀಶ ಬಸವರಾಜ ದೇವರಿಗೆ ಜೀವ ಬೆದರಿಕೆ ಹಾಕಿರುವುದು....

ಇಂಥ ಪ್ರಕರಣಗಳು ಒಂದೆ.... ಎರಡೇ......

ಕರ್ನಾಟಕದಲ್ಲಿ ಕೇವಲ ಮೂರು ಪರ್ಸೆಂಟ್ ಜನಸಂಖ್ಯೆಯಿರುವ ಪುರೋಹಿತಶಾಹಿಗಳ ಕುಮ್ಮಕ್ಕಿನಿಂದ, ಕೆಲ ಮೇಲ್ಜಾತಿ ವ್ಯಾಪಾರಿಗಳ ಹರಕೆಯುರಾದ ಮಾರ್ವಾಡಿಗಳ ಹಣದ ಬೆಂಬಲದಿಂದ ಕೊಬ್ಬಿ ಮೆರೆಯುತ್ತಿರುವ ಬಜೆಪಿ, ಭಜರಂಗಕ್ಕೆ ನಾಳೆ ನಿಜವಾಗಲೂ ರಾಜಕೀಯ ಅಧಿಕಾರ ಸಿಕ್ಕೇಬಿಟ್ಟರೆ ಏನೇನೆಲ್ಲಾ ಅನಾಹುತಗಳು, ಅತ್ಯಾಚಾರಗಳು ಘಟಿಸಬಹುದೋ ಯೋಚಿಸಿ ನೋಡಿ.

[illegible]ನ್ಯ ನಡೆಯುತ್ತಿದೆ ಎಂಬುದೇ [illegible]ಗದೆ ಅವರೆಲ್ಲಾ ಭೀತಿಯಿಂದ [illegible]ವಾಗಲೇ ಈ ಬಜೆಪಿ ಪುಂಡರ [illegible] ಜಯರಾಂನನ್ನು ಮುತ್ತಿ [illegible]ಡಿ ಕಾಲಿನಿಂದ ಮೇಲಿಂದ [illegible]ಲೆ ಒದೆಯುತ್ತಾ ನೆಲಕ್ಕೆ [illegible]ಕೊಂಡು ಜಪ್ಪ ಹಾಕಿದ್ದಾರೆ. [illegible]ವಿಜಯ್ ಹೊಲೆಯ ಸೂಳೆ [illegible]ನೆ' ಎಂದು ಒಂದೇ ಸಮನೆ [illegible]ದೂಳಿಸುತ್ತಾ ಜಯರಾಂ [illegible]ಣನಾಗಿ ಬಿದ್ದಿರುವಾಗ ಆತನ [illegible]ಗಳನ್ನು ಹರಿದೆಸೆದು ಅರೆಬೆತ್ತಲೆ [illegible] ನಿಲ್ಲಿಸಿದ್ದಾರೆ.

ಅದೇ ವೇಳೆಯಲ್ಲಿ ಕುಂಜುಮ್ಮೈದರ [illegible]ಲೂ ಹಲ್ಲೆ ನಡೆಸಿ ಅವರ ಮನೆ [illegible]ಯೇ ಇದ್ದ ಬಾವಾ ಎಂಬಾತನನ್ನು [illegible] ತಂದು ಬಟ್ಟೆ ಹರಿದು [illegible]ರವಾಗಿ ಥಳಿಸಿ ನೆಲಕ್ಕೆ ಕೆಡವಿ [illegible]ದಿದ್ದಾರೆ.

ಈ ಅನಿರೀಕ್ಷಿತ ಹಲ್ಲೆಯಿಂದ [illegible]ರಾಂ, ಬಾವ ಹಾಗೂ [illegible]ಜುಮ್ಮೈದರವರು ಶಾಕ್ ಆಗಿ [illegible]ರುವಾಗಲೇ ಅದೆಲ್ಲಿಂದಲೋ [illegible]ದ್ದ ದನದ ಮಾಂಸವನ್ನು ಇವರ [illegible]ಗೆಗೆ ಹಾಕಿದ್ದಾರೆ. ನಂತರ [illegible]ನೋ ಮಹತ್ಕಾರ್ಯ [illegible]ಸಿದವರಂತೆ ಅರೆಬೆತ್ತಲುಗೊಳಿಸಿದ್ದ [illegible]ರಾಂ, ಬಾವ ಹಾಗೂ [illegible]ಜುಮ್ಮೈದರನ್ನು ತಳ್ಳುತ್ತಾ [illegible]ದೆಯುತ್ತಾ ನಿಧಾನವಾಗಿಯಿಂದ [illegible]ರಟು ದೊಬ್ಬಾ ಪ್ಯಾಂಡ್‌ಪೋಸ್ಟ್ [illegible] ಮೆರವಣಿಗೆ ನಡೆಸಿದ್ದಾರೆ. ಕೊನೆಗೆ [illegible]ಡ್‌ಪೋಸ್ಟ್ ಬಳಿ ಮತ್ತೆ ಈ [illegible]ವರಿಗೂ ಬೂಟ್ ಕಾಲಲ್ಲಿ ಒದ್ದು [illegible] ಬಿಟ್ಟುಕೊಂಡು ಹೊಡೆಯುತ್ತಾ [illegible] ತೆಗೆಸಿಕೊಂಡಿದ್ದಾರೆ.


[illegible]ಂತಿಮವಾಗಿ ಈ ಭಜರಂಗಿ [illegible]ಗಳಾಗಲೇ ಪೊಲೀಸರಿಗೆ ಕರೆ [illegible]ಸಿದ್ದಾರೆ ಹಾಗೆ ಬಂದ [illegible] ಪೊಲೀಸರು [illegible]ಗಳ ವಿರುದ್ಧ ಕಾನೂನು ಕ್ರಮ [illegible] ಬದಲಾಗಿ [illegible]

[illegible]

ದಲಿತರ ಮೇಲಿನ ದೌರ್ಜನ್ಯದ ದೃಶ್ಯಗಳು











ಈ ಅಮಾನುಷ ಘಟನೆಯ ದೌರ್ಜನ್ಯದ ಪರಾಕಾಷ್ಠೆ ಅಂತಿಮವಾಗಿ ಬಾಳೆಹೊನ್ನೂರು ಪೊಲೀಸರ ಕಣ್ಣೆದುರೂ ನಡೆದುಹೋಯಿತು. ಪೊಲೀಸರೊಂದಿಗೆ ಠಾಣೆಗೆ ಬಂದಿದ್ದ ಭಜರಂಗಿ ಗ್ಯಾಂಗಿನ ಮುಸೀದಿಕೆರೆ, ಮಹೇಶ, ಸಂತೋಷ, ವಿವೇಕಾನಗರದ ಸುರೇಶ, ಮಣಿ ಮುಂತಾದವರು ಪೊಲೀಸರ ಎದುರೇ ಜಯರಾಂ, ಬಾವಾ ಹಾಗೂ ಕುಂಜುಮ್ಮೈದರ ಮೇಲೆ ಹಲ್ಲೆ ನಡೆಸಿದರು.

ಕರ್ನಾಟಕ ಪೊಲೀಸರು ಈಗಾಗಲೇ ಸಂಘ ಪರಿವಾರದ ಸೆಕ್ಯುರಿಟಿ ಫೋರ್ಸ್‌ನಂತಾಗಿ ಹೋಗಿದ್ದಾರೆ ಎನ್ನಲು ಈ ಘಟನೆಯು ಇನ್ನೊಂದು ಉದಾಹರಣೆಯಾಗಿದೆ.

ಈ ಅಮಾನುಷ ದೌರ್ಜನ್ಯದ ವಿರುದ್ಧ ದಲಿತ ಜಯರಾಂ ಅದೇ ಬಾಳೆಹೊನ್ನೂರು ಠಾಣೆಯಲ್ಲಿ ದೂರು ನೀಡಿದರೆ ಸಬ್‌ಇನ್ಸ್‌ಪೆಕ್ಟರ್ ವಿಶ್ವನಾಥ್ ದೂರು ಪಡೆಯಲು ನಿರಾಕರಿಸಿ ಕೊನೆಗೆ ಪ್ರತಿಭಟನೆಗೆ ಹೆದರಿ ನೆಪಮಾತ್ರಕ್ಕೆ ಚಡ್ಡಿಗಳ ವಿರುದ್ಧ ಕ್ರಮ ಜರುಗಿಸಿದ್ದಾನೆ.

ಬಿಜೆಪಿಯ ರಕ್ತ ರಾಜಕಾರಣ

ಹೇಗಾದರೂ ಮಾಡಿ ಈ ಬಾರಿ ಕರ್ನಾಟಕದಲ್ಲಿ ಅಧಿಕಾರ ಹಿಡಿಯಲೇಬೇಕೆಂಬ ರಣೋತ್ಸಾಹದಲ್ಲಿರುವ ಬಿಜೆಪಿಯು ತನಗೆ ಸಾಧ್ಯವಿರುವ ಕಡೆಗಳಲ್ಲೆಲ್ಲಾ ಮತಾಂತರ, ದನದ ಮಾಂಸ, ದೇವಸ್ಥಾನ ಮೂರ್ತಿ ಭಗ್ನ ಮುಂತಾದ ಸುಳ್ಳು ಸುಳ್ಳೆ ನೆಪಗಳನ್ನು ಹುಡುಕಿ ದಲಿತ, ಮುಸ್ಲಿಂ, ಕ್ರಿಶ್ಚಿಯನ್ನರ ವಿರುದ್ಧ ದಾಳಿಗಳನ್ನು ನಡೆಸುತ್ತಿದೆ. ರಾಜ್ಯದ ಪೊಲೀಸ್ ವ್ಯವಸ್ಥೆ ಬಿಜೆಪಿಗಳ ಈ ಪ್ರತಿಷ್ಠಾನಿಚಾರದ ದುಷ್ಟ ಕೆಲಸಗಳೊಂದಿಗೆ ಸಂಪೂರ್ಣ ಶಾಮೀಲಾಗಿ ಕೈಜೋಡಿಸಿರುವುದು ಇಂಥ ಪ್ರತಿ ಪ್ರಕರಣದಲ್ಲೂ ಗೋಚರವಾಗುತ್ತಿದೆ.

ಈ ಹಿಂದೂ ಫ್ಯಾಸಿಸ್ಟರಿಂದ ಹೀಗೆ ನಿರಂತರ ದಮನ, ದೌರ್ಜನ್ಯಕ್ಕೀಡಾಗುತ್ತಿರುವ ಜನಸಮುದಾಯಗಳು ಈಗ ತಿರುಗಿ ಬೀಳದೆ ಹೋದರೆ ಇಲ್ಲಿ ಯಾರ ಮಾನ-ಪ್ರಾಣಗಳೂ ಉಳಿಯುವಂತೆ ಕಾಣುತ್ತಿಲ್ಲ. ಜನತೆ ಈಗ ತಮ್ಮ ಆತ್ಮರಕ್ಷಣೆಗಾಗಿ ಸಂಘಟಿತ ಪ್ರತಿರೋಧವನ್ನು ತೋರಿಸಬೇಕಿದೆ.

ಏಕೆಂದರೆ ಬಿಜೆಪಿಗೀಗ ಅಧಿಕಾರ ಬೇಕಿದೆ. ಅದಕ್ಕಾಗಿ ಈ ಫ್ಯಾಸಿಸ್ಟರು ಇಡೀ ಕರ್ನಾಟಕಕ್ಕೆ ಬೆಂಕಿಹಚ್ಚಲು ಸಿದ್ಧರಾಗಿದ್ದಾರೆ.

ಖೈರ್ಲಾಂಜಿ ಅತ್ಯಾಚಾರ ನೆನಪಿದೆಯೇ

ಬಿಜೆಪಿಯ ದಾಳಿಕೋರ ಪಡೆಯಾದ ಭಜರಂಗ ದಳವು ದಲಿತರ ಮೇಲೆ ದೌರ್ಜನ್ಯ-ಅತ್ಯಾಚಾರ ನಡೆಸುತ್ತಿರುವುದು ಇದೇ ಮೊದಲೇನಲ್ಲ.

ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ ದಲಿತ ಮಹಿಳೆ ಸುರೇಖಾ ಮತ್ತವಳ ಮಗಳ ಮೇಲೆ ನಡೆದ ಅತ್ಯಾಚಾರ ಹಾಗೂ ಪೈಶಾಚಿಕ ಹತ್ಯೆ ಘಟನೆ ನಿಮಗೆ ನೆನಪಿರಬಹುದು.

ಮೇಲ್ಜಾತಿ ಹಿಂದೂಗಳಿಂದ ಆಗುತ್ತಿದ್ದ ಹಿಂಸೆ ಅವಮಾನಗಳನ್ನು ಸುರೇಖಾ ಪ್ರತಿಭಟಿಸಿ ಪೊಲೀಸ್ ಕಂಪ್ಲೇಂಟ್ ಕೊಟ್ಟಳೆಂದು ರೊಚ್ಚಿಗೆದ್ದ ಭಜರಂಗ ದಳದ ಕಾರ್ಯಕರ್ತರು ಈ ಇಬ್ಬರೂ ದಲಿತ ಮಹಿಳೆಯರನ್ನು ನಡುಬೀದಿಯಲ್ಲಿ ಬೆತ್ತಲುಗೊಳಿಸಿ, ಅತ್ಯಾಚಾರ ನಡೆಸಿ ಕೊಚ್ಚಿ ಕೊಂದು ಹಾಕಿದರು. ಆಕೆಯ ಪುತ್ರರನ್ನೂ ಕೊಂದರು.


ಈ ಘಟನೆ ಆಗ ಯಾವ ಮಾಧ್ಯಮದವರಿಗೂ ಬೇಕಾಗಿರಲಿಲ್ಲ. ಆದರೆ ಯಾವಾಗ ಮಹಾರಾಷ್ಟ್ರದ ದಲಿತ ಸಮುದಾಯ ಇದರ ವಿರುದ್ಧ ಪ್ರತಿಭಟಿಸಿ ದಂಗೆ ಎದ್ದರೋ, ರಸ್ತೆ ತಡೆ, ಹಿಂಸಾಚಾರ, ಪೊಲೀಸ್ ಗೋಲಿಬಾರ್‌ಗಳು ನಡೆದವೋ ಆಗಷ್ಟೇ ಈ ಘಟನೆ ಬೆಳಕಿಗೆ ಬಂತು.

ಕರ್ನಾಟಕದ ಶಾಂತಿಪುರದಲ್ಲೂ ಈಗ ನಡೆದಿರುವುದು ಇಂತದ್ದೇ ದಬ್ಬಾಳಿಕೆ. ಕರ್ನಾಟಕದಲ್ಲಿ ಹತ್ತಾರು ದಲಿತ ಸಂಘಟನೆಗಳಿವೆ, ನೂರಾರು ನಾಯಕರೂ, ಲಕ್ಷಾಂತರ ಕಾರ್ಯಕರ್ತರೂ ಇದ್ದಾರೆ. ಜೊತೆಗೆ ಸಮಾನತೆ, ಸಾಮಾಜಿಕ ನ್ಯಾಯದ ಆಶಯಗಳುಳ್ಳ ಸಾವಿರಾರು ಪ್ರಗತಿಪರ ಸಂಘಟನೆಗಳೂ, ವ್ಯಕ್ತಿಗಳೂ ಇದ್ದಾರೆ.

ಬಜೆಪಿ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಇಂಥ ದೌರ್ಜನ್ಯಗಳನ್ನು ಎಲ್ಲರೂ ಒಂದುಗೂಡಿ ಪ್ರತಿರೋಧಿಸಬಾರದೆ?







ತ್ರಿಶೂಲ ದೀಕ್ಷೆ ಫ್ಲಾಪ್ ಮುತಾಲಿಕ್ ಎಸ್ಕೇಪ್




ಗದಗ

ಗದಗದಲ್ಲಿ ಹಿಂದೂ ಲಾಡೆನ್ ಪ್ರಮೋದ್ ಮುತಾಲಿಕ್‌ನ ಕಪಿಸೈನ್ಯ ಏರ್ಪಡಿಸಿದ್ದ 'ತ್ರಿಶೂಲ ದೀಕ್ಷಾ' ಎಂಬ ಭಯೋತ್ಪಾದನಾ ಚಟುವಟಿಕೆ ಜನಬೆಂಬಲವಿಲ್ಲದೇ ಫ್ಲಾಪ್ ಆದರೆ ಅದರ ನೇತೃತ್ವ ವಹಿಸಿದ್ದ ಮುತಾಲಿಕ್ ಪೊಲೀಸರ ಸರ್ಪಗಾವಲಿನಲ್ಲಿ ಎಸ್ಕೇಪ್ ಆಗಿದ್ದಾನೆ.

ಮತೀಯ ಸಾಮರಸ್ಯವನ್ನು ಎಂದೂ ಸಹಿಸದ ಮುತಾಲಿಕನ 'ಶ್ರೀರಾಮ ಸೇನೆ' ಎಂಬ ಕಪಿಸೈನ್ಯ ರಾಜ್ಯದಲ್ಲಿ ನಡೆಸುತ್ತಿರುವ ಭಯೋತ್ಪಾದನಾ ಕೃತ್ಯಗಳು ಒಂದೆರಡಲ್ಲ. ಬಿಜಾಪುರ ಜಿಲ್ಲೆಯಲ್ಲಿ ಮುಗ್ಧ ಯುವಕರ ತಲೆಗೆ ಹಿಂದೂತ್ವದ ವಿಷ ತುಂಬಿ ಬಂದೂಕಿನ ತರಬೇತಿ ನೀಡುತ್ತಿರುವುದು ಯಾರಿಗೂ ಗೊತ್ತಿಲ್ಲದ ವಿಚಾರವೇನಲ್ಲ. ಕಳೆದ ವರ್ಷ ಕೆಇಎಲ್ ಸಂಸ್ಥೆಯ ಪ್ರಭಾಕರ ಕೋರೆಗೆ ಅವರ ತಮ್ಮನ ಮಗ ಶೂಟ್ ಮಾಡಲು ಉಪಯೋಗಿಸಿದ್ದ ರಿವಾಲ್ವಾರ್‌ನ್ನೂ ಮುತಾಲಿಕ್‌ನ ಕಪಿಸೇನೆಯೇ ಪೂರೈಸಿತ್ತು. ಇವೆಲ್ಲ ಇನ್ನೂ ಹಸಿ ಹಸಿಯಾಗಿರುವಾಗಲೇ ಮೊನ್ನೆ ಮಾರ್ಚ್ 16ರಂದು ಶಾಂತಿಪ್ರಿಯ ಗದುಗಿನಲ್ಲಿ ತ್ರಿಶೂಲ ದೀಕ್ಷೆ ಕಾರ್ಯಕ್ರಮವನ್ನು ಮುತಾಲಿಕನ ಕಪಿಗಳು ಹಮ್ಮಿಕೊಂಡಿದ್ದರು.

ಆದರೆ ಸೌಹಾರ್ದ ಪರಂಪರೆಗೆ ಹೆಸರು ಮಾಡಿದ ಜಿಲ್ಲೆ ಗದಗ. ವೈಷ್ಣವ ಸಂಪ್ರದಾಯದ ವೀರನಾರಾಯಣ ಗುಡಿ, ಶೈವ ಪರಂಪರೆಯ ತ್ರಿಕೂಟೇಶ್ವರ ದೇವಸ್ಥಾನ, ಐತಿಹಾಸಿಕ ಜುಮ್ಮಾ ಮಸೀದಿ, ಲಕ್ಕುಂಡಿಯ ಜೈನ ಬಸದಿಗಳು, ಶತಮಾನಗಳಷ್ಟು ಹಳೆಯದಾದ ಚರ್ಚ್ ಆಫ್ ಸೌತ್ ಇಂಡಿಯಾ, ಭಾವೈಕ್ಯತೆಯನ್ನು ಮೂಲಮಂತ್ರವನ್ನಾಗಿಸಿಕೊಂಡಿರುವ ತೋಂಟದಾರ್ಯ ಮಠ, ಶಿರಹಟ್ಟಿಯ ಫಕ್ಕೀರೇಶ್ವರ ಮಠ - ಹೀಗೆ ಹತ್ತು ಹಲವು ಧಾರ್ಮಿಕ ಕೇಂದ್ರಗಳು ಗದುಗಿನಲ್ಲಿ ಶತಶತಮಾನಗಳಿಂದ ಭಾವೈಕ್ಯತಾ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದಿವೆ. ಇಲ್ಲಿಯ ಎಲ್ಲ ಜಾತ್ರೆಗಳನ್ನು, ಯುಗಾದಿ, ಮೊಹರಂ, ಕ್ರಿಸ್‌ಮಸ್‌ನಂತಹ ಹಬ್ಬಗಳನ್ನು ಯಾವ ಧಾರ್ಮಿಕ ಭೇದವೂ ಇಲ್ಲದಂತೆ ಜನ ಕೂಡಿ ಆಚರಿಸುವ ಸೌಹಾರ್ದ ಪರಂಪರೆಯನ್ನು ಇಂದಿಗೂ ಇಟ್ಟುಕೊಂಡಿದ್ದಾರೆ. ಇಂತಹ ಸೌಹಾರ್ದ ಮತ್ತು ಭಾವೈಕ್ಯತೆಗಳ ತಾಣವಾಗಿರುವ ಗದುಗಿನಲ್ಲಿ ಹಿಂದೂತ್ವದ ವಿಷವುಣಿಸಿ, ಕೋಮುದ್ವೇಷ ತುಂಬಿ ರಕ್ತ ಕಾರುವ ವೃತ್ತಾಂತವನ್ನು ಪ್ರಾರಂಭಿಸುವುದಕ್ಕೆ ಮುತಾಲಿಕ್‌ನ ಪಡೆ ಮೊದಲಿನಿಂದಲೂ ಹೆಣಗಾಡುತ್ತಿದೆ. ಆದರೆ ಪ್ರತೀಬಾರಿಯೂ ಇವರು ನಡೆಸುವ ಕೊಳ್ಳಿದೆವ್ವನಾಟಕ್ಕೆ ಗದುಗಿನ ಸೌಹಾರ್ದಪ್ರಿಯ ಜನ ಪ್ರತಿರೋಧ ಒಡ್ಡುತ್ತಲೇ ಬಂದಿದ್ದಾರೆ. ಮೊನ್ನೆ ನಡೆದದ್ದೂ ಇದೇ.





ಪ್ರಮೋದ ಮುತಾಲಿಕನ ಶನಿಸಂತಾನಗಳಾದ ಗಂಗಾಧರ ಕುಲಕರ್ಣಿ ಮತ್ತು ರವಿ ಶಿದ್ಲಿಂಗ ಸೇರಿದಂತೆ ಹಲವಾರು ಮಂಗಗಳು 'ತ್ರಿಶೂಲ ದೀಕ್ಷೆ' ಎಂಬ ಮಂಗಾಟವನ್ನು ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಸ್ಥಳೀಯ ನಂದಿವೇರಿ ಮಠದ ಶಿವಕುಮಾರ ಸ್ವಾಮಿಯ ಮನವೊಲಿಸುವಲ್ಲಿಯೂ ಯಶಸ್ವಿಯಾಗಿದ್ದರು. ಇದನ್ನರಿತ 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಯವರು ಶಿವಕುಮಾರ ಸ್ವಾಮಿಯನ್ನು ಭೇಟಿ ಮಾಡಿ ತ್ರಿಶೂಲ ದೀಕ್ಷೆಯ ಹಿಂದಿರುವ ಫ್ಯಾಸಿಸ್ಟ್ ಕುತಂತ್ರವನ್ನು ತಿಳಿಸಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಬಾರದೆಂದು ಮನವಿ ಮಾಡಿಕೊಂಡರು. ಶೈವ ಪರಂಪರೆಯನ್ನು ವೈಭವೀಕರಿಸಿ ಅಪವಿತ್ರಗೊಳಿಸುತ್ತಿರುವ ಮುತಾಲಿಕನ ನೈಜಬಣ್ಣವನ್ನು ಅರ್ಥಮಾಡಿಕೊಂಡ ಸ್ವಾಮೀಜಿ ತ್ರಿಶೂಲ ದೀಕ್ಷೆ ಕಾರ್ಯಕ್ರಮದಿಂದ ದೂರ ಉಳಿದು ತಮಗೂ ಮತ್ತು ಶ್ರೀರಾಮ ಸೇನೆಯ ಮಂಗಗಳಿಗೂ ವ್ಯತ್ಯಾಸವಿದೆ ಎಂಬುದನ್ನು ತೋರಿಸಿಕೊಟ್ಟರು. ಅದೇರೀತಿ, ಸಾರಂಗಮಠ ಮತ್ತು ನೀಲಮಠ ಎಂಬ ಹಿರಿಯ ವಕೀಲರುಗ ಈ ಕಾರ್ಯಕ್ರಮದಿಂದ ಹಿಂದೆ ಸರಿದರು.


ನಂತರ ವೇದಿಕೆಯ ಕಾರ್ಯಕರ್ತರು ಈ ಕಾರ್ಯಕ್ರಮಕ್ಕೆ ಅನುಮತಿ ಕೊಡಬಾರದೆಂದು ಜಿಲ್ಲಾಧಿಕಾರಿ ಕಚೇರಿಯೆದುರು ಧರಣಿ ಕುಳಿತರು. ಮೊದಮೊದಲು ಆರ್‌ಎಸ್‌ಎಸ್ ತುಂಡಿನಂತೆ ವರ್ತಿಸಿದ ಜಿಲ್ಲಾಧಿಕಾರಿ ಶ್ರೀರಾಮನ್ ಕೊನೆಗೂ ವೇದಿಕೆಯ ವಿರೋಧಕ್ಕೆ ಮಣಿದು, ಈ ಹಿಂದೆ ಬಾಗಲಕೋಟೆಯಲ್ಲಿ ತ್ರಿಶೂಲ ದೀಕ್ಷೆ ನಿಷೇಧಿಸಿದ್ದನ್ನು ಜ್ಞಾಪಿಸಿಕೊಂಡು ಗದುಗಿನಲ್ಲೂ ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು 144 ಸೆಕ್ಷನ್‌ನನ್ನು ಜಾರಿಗೊಳಿಸಿದರು. ಆದರೆ ಕಾನೂನುಗಳನ್ನು ಮುರಿಯುವುದನ್ನೇ ತಮ್ಮ ಮುಖ್ಯ ಕಾಯಕ ಮಾಡಿಕೊಂಡಿರುವ ಮುತಾಲಿಕನ ಕಪಿ ಸೈನ್ಯ "ನಾವು ಕೇವಲ ಹಿಂದೂ ಸಮಾವೇಶ ಮಾಡ್ತೀವಿ" ಎಂದು ಸುಳ್ಳು ಹೇಳಿ, ಶ್ರೀರಾಮನ್‌ರವರ ಕೈಕಾಲು ಹಿಡಿದು ಪರ್ಮಿಶನ್ ಪಡೆದುಬಿಟ್ಟರು.

ಅವರ ಆ ಕಾರ್ಯಕ್ರಮ ಯಾವ ನಿಟ್ಟಿನಿಂದಲೂ ಹಿಂದೂ ಸಮಾವೇಶವಾಗಿರಲಿಲ್ಲ. ಸಭೆಯಲ್ಲಿ ತ್ರಿಶೂಲಗಳು ಕೈಯಿಂದ ಕೈಗೆ ವರ್ಗಾವಣೆಗೊಂಡವು. ಇದನ್ನೆಲ್ಲಾ ಪೊಲೀಸರು ಮೂಕಪ್ರೇಕ್ಷಕರಂತೆ ನೋಡುತ್ತಿದ್ದರೆ ಹೊರತು ಅದನ್ನು ತಡೆಯುವ ಪ್ರಯತ್ನಕ್ಕೆ ಕೈಹಾಕಲಿಲ್ಲ.

ಈ ಕಾರ್ಯಕ್ರಮದಲ್ಲಿ ಆಂದೋಲಮಠದ ಕಮಂಗಿ ಸಿದ್ಧಲಿಂಗಸ್ವಾಮಿ ತಾನೊಬ್ಬ ಸ್ವಾಮಿಯೆಂಬುದನ್ನೇ ಮರೆತು ಭಾವೈಕ್ಯತೆಯನ್ನೇ ಮೂಲಮಂತ್ರವನ್ನಾಗಿಸಿಕೊಂಡಿರುವ ತೋಂಟದಾರ್ಯ ಶ್ರೀಗಳ ವಿರುದ್ಧ, ಶರಣ ಪರಂಪರೆಯ ವಿರುದ್ಧ ಹೀನಾಮಾನವಾಗಿ ಬೈಯ್ದು ವಿಷಕಾರಿಕೊಂಡ. ಮುತಾಲಿಕ್ ಕೂಡ ಎಂದಿನಂತೆ

ಮುಧೋಳ ಮಾರಿ ನಾಗಠಾಣ ಖರೀದಿ!


ಗೋವಿಂದ ಕಾರಜೋಳನ ತಂತ್ರ



ಕಾರಜೋಳ

ಮುಧೋಳಕ್ಕೆ ಅಂಟಿಕೊಂಡಿದ್ದ ಚಿಡ್ಡಿ ಶನಿ ಗೋವಿಂದ ಕಾರಜೋಳ ಈಗ ಅಲ್ಲಿಂದ ತೊಲಗುವ ಲಕ್ಷಣಗಳು ಕಾಣಿಸುತ್ತಿರುವುದೇ ಈ ಕ್ಷೇತ್ರದ ಜನತೆಗೆ ಸಮಾಧಾನ ತಂದಿರುವ ವಿಚಾರ. ಬಿಜಾಪುರದಲ್ಲಿ ಪಿಡಬ್ಲೂಡಿ ಸ್ಟೋರ್ ಕೀಪರ್ ಆಗಿದ್ದ ಈ ಕಾರಜೋಳನನ್ನು ಬಾಗಲಕೋಟೆಯ ಮೀಸಲು ಕ್ಷೇತ್ರಕ್ಕೆ ತಗಲು ಹಾಕಿದ ಕೀರ್ತಿ ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ರಮೇಶ್ ಜಿಗಜಿಣಗಿ ಸೇರಬೇಕು.

1994 ರಲ್ಲಿ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಕಾರಜೋಳ ಯಾವ ಪರಿ ಸಿಕ್ಕಿದ್ದನ್ನೆಲ್ಲ ನೆಕ್ಕಿದ್ದನೆಂದರೆ ಈತನಿಗಿಂತ ಕಾಂಗ್ರೆಸ್‌ನ ತಿಮ್ಮಾಪುರನೇ ವಾಸಿ ಎಂದು ಮುಂದಿನ ಬಾರಿ ಆತನನ್ನೇ ಆಯ್ಕೆ ಮಾಡಿದ್ದರು. ಆದರೆ ತಿಮ್ಮಾಪುರ ಕೂಡ ತನ್ನ ಕ್ಷೇತ್ರವ ಕಾಳಜಿಗಿಂತ ರೆಡ್ಡಿಗಳ ಕೆಲಸದ ಆಳಿನಂತೆ ವರ್ತಿಸಿದ್ದನ್ನು ನೋಡಿ ಮತ್ತೆ ಕಾರಜೋಳನನ್ನೇ ಗೆಲ್ಲಿಸಿದ್ದರು. ಈತನ ಅದೃಷ್ಟ ಚೆನ್ನಾಗಿತ್ತು, ಕೋ-ಜಾ ಸರ್ಕಾರದ ಅಡಿಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಿರಿ ಜೊತೆ ಜಿಲ್ಲಾ ಉಸ್ತುವಾರಿಯನ್ನೂ ಗಿಟ್ಟಿಸಿಕೊಂಡ.



ಮಂತ್ರಿಯಾಗಿ ಈತ ಮಾಡಿದ ಬಾನಗಡಿಗಳು ಒಂದೆರಡಲ್ಲ. ಪೆಟ್ರೋಲ್ ಕಲಬೆರಕೆ ತಡೆಯುತ್ತೇನೆಂದು ಪ್ರಚಾರ ಮಾಡಿ ಬಂಕ್‌ಗಳ ಮಾಲಿಕರೊಂದಿಗೆ ಮಾಮೂಲಿ ಫಿಕ್ಸ್ ಮಾಡಿಕೊಂಡ. ದಲಿತಪರ, ದಲಿತೋದ್ಧಾರಕ ಎನ್ನುತ್ತಲೇ ತನ್ನ ಗೆಲುವಿಗೆ ಹಗಲಿರುಳು ಶ್ರಮಿಸಿದ್ದ ಲಕ್ಷ್ಮಣ್ ಮಳಲೀಕರ್ ಎಂಬ ದಲಿತ ಆಕ್ಸಿಡೆಂಟ್‌ನಲ್ಲಿ ಸತ್ತು ಆತನ ಮಕ್ಕಳು ಇಂದು ಭಿಕ್ಷೆ ಎತ್ತುವ ಪರಿಸ್ಥಿತಿಗೆ ಬಂದರೂ ಅವರತ್ತ ತಿರುಗಿಯೂ ನೋಡಲಿಲ್ಲ. ಪಡಿತರ ಚೀಟಿ ಗುತ್ತಿಗೆಯಲ್ಲಿ ಒಂದು ಕೋಟಿಗೂ ಹೆಚ್ಚು ಕಮೀಷನ್ ತಿಂದ. ತನ್ನ ತುಘಲಕ್ ದರ್ಬಾರ್‌ಗೆ ಇದಿರಾದವರನ್ನು ತನ್ನ ಪುಂಡ ಮಗ ಅರುಣ್ ಮೂಲಕ ಅಟ್ಯಾಕ್ ಮಾಡಿಸಿದ - ಹೀಗೆ ಬೆಳೆಯುತ್ತಾ ಹೋಗುತ್ತದೆ ಕಾರಜೋಳನ ಕಾರಬಾರ್ ಪಟ್ಟಿ.

ಒಂದೆಡೆ ಜನರ ವಿರೋಧ, ಇನ್ನೊಂದೆಡೆ ತನ್ನ ಪಕ್ಷದವರಿಂದಲೇ ಭಿನ್ನಮತ, ಇವೆರಡನ್ನೂ ಎದುರಿಸುತ್ತಿರುವ ಕಾರಜೋಳನಿಗೆ ಈ ಬಾರಿ ತಾನು ಮುಧೋಳದಿಂದ ಗೆಲ್ಲುವುದಿಲ್ಲ ಎಂಬುದು ಖಾತರಿಯಾಗಿದೆ. ಇದೆಲ್ಲದರ ಮಧ್ಯೆ ಪಕ್ಕದ ಕ್ಷೇತ್ರದಿಂದ ಶಾಸಕನಾಗಿದ್ದ ಬಿಜೆಪಿಯ ಮುರುಗೇಶ್ ನಿರಾಣಿ ತಾನು ಮಂತ್ರಿಯಾಗದಿದ್ದದ್ದಕ್ಕೆ ಕಾರಜೋಳನೇ ಕಾರಣ ಎಂದು ಅರಿತುಕೊಂಡು ಈ ಬಾರಿ ಮುಧೋಳದ ಪಂಚಮಸಾಲಿಗಳನ್ನು ಕಾರಜೋಳನ ವಿರುದ್ಧ ಎತ್ತಿಕಟ್ಟುವ ಕಾಯಕದಲ್ಲಿ ನಿರತನಾಗಿದ್ದಾನೆ. ಈ ಎಲ್ಲ ಕಾರಣಗಳಿಂದಾಗಿ ಈಗ ಕಾರಜೋಳ ಹೊಸ ತಂತ್ರವನ್ನು ರೂಪಿಸಿದ್ದಾನೆ.

ಅದರಂತೆ, ಕಳೆದ ಬಾರಿಯ ಚುನಾವಣೆಯಲ್ಲಿ ತನಗಾಗಿ ಅಪಾರ ದುಡ್ಡು ಚೆಲ್ಲಿದ ತನ್ನ ಸಂಬಂಧಿ ಎಸ್.ಎಮ್. ಪೂಜಾರ್ ಎಂಬ ಎಂಜಿನಿಯರ್‌ನನ್ನು ಮುಧೋಳದಲ್ಲಿ ನಿಲ್ಲಿಸುವುದು. ಮತ್ತು ಪೂಜಾರ್‌ನಿಂದ ಪಡೆದ ಹಣವನ್ನೇ ಬಿಜಾಪುರ ಜಿಲ್ಲೆಯ ನಾಗಠಾಣದಲ್ಲಿ ಸುರಿದು ತಾನು ಗೆಲ್ಲುವುದು. ಅಕಸ್ಮಾತ್ ಈ ತಂತ್ರ ವರ್ಕ್‌ಔಟ್ ಆಗದಿದ್ದರೆ ಮುಧೋಳದಲ್ಲಿ ತನ್ನ ಗೂಂಡಾ ಮಗ ಅರುಣ್‌ನನ್ನೇ ನಿಲ್ಲಿಸುವುದು ಕಾರಜೋಳನ ಚಿಂತನೆಯಾಗಿದೆ.

ಮುಧೋಳದಲ್ಲಿ ಕಾರಜೋಳನಿಗೆ ಪ್ರಬಲ ಪ್ರತಿರೋಧ ಒಡ್ಡುವುದು ಕಾಂಗ್ರೆಸ್‌ನ ಆರ್.ಬಿ. ತಿಮ್ಮಾಪೂರ್‌ನಿಂದ ಸಾಧ್ಯವಿಲ್ಲ. ಅಷ್ಟೇ ಅಲ್ಲದೆ, ಕಳೆದ ಚುನಾವಣೆಯಲ್ಲಿ ಈ ತಿಮ್ಮಾಪೂರ ಅತೀ ಹೆಚ್ಚು ಮತಗಳ ಅಂತರದಿಂದ ಹೀನಾಯ ಸೋಲುಂಡಿದ್ದ. ಈ ಬಾರಿಯೂ ತಿಮ್ಮಾಪುರನನ್ನೇ ನಂಬಿಕೊಂಡರೆ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಅಂತಿಮ ಯಾತ್ರೆಗೆ ಸಿದ್ಧಗೊಂಡಂತೆಯೇ ಸರಿ.

ಇನ್ನು ಹೊಸ ಮುಖಗಳಲ್ಲಿ ಎರಡು ಬಾರಿ ಟಿಕೆಟ್‌ಗಾಗಿ ಪ್ರಯತ್ನಿಸಿ ಹಿಂದೆ ಸರಿದ ಸತೀಶ್ ಬಂಡಿವಡ್ಡರ್ ಕೂಡ ಒಬ್ಬರು. ಸತತ ನಾಲ್ಕು ಬಾರಿ ಅರ್ಬನ್ ಬ್ಯಾಂಕಿನ ಉಪಾಧ್ಯಕ್ಷ ಹಾಗೂ ಕಳೆದ 15 ವರ್ಷದಿಂದ ಬ್ಲಾಕ್ ಕಾಂಗ್ರೆಸ್‌ನ ಜನರಲ್ ಸೆಕ್ರೆಟರಿ ಕೂಡ ಆಗಿರುವ ಬಂಡಿವಡ್ಡರ್‌ರಿಂದ ಕಾರಜೋಳನ ಚಿಡ್ಡಿ ಕಳಚುವುದು ಸಾಧ್ಯ.

ಹಾಗೆಯೇ, ಜೆಡಿಎಸ್‌ನಿಂದ ಮಾರುತಿ ಸತ್ತಿಗೇರಿ, ಮತ್ತಣ್ಣ ಬೆಣ್ಣೂರ್ ಮತ್ತು ಮಲ್ಲಪ್ಪ ದೊಡಮನಿ ಹೆಸರುಗಳು ಕೇಳಿಬರುತ್ತಿವೆ. ಇದ್ದುದರಲ್ಲಿ ಬೆಣ್ಣೂರ್ ಸೂಕ್ತ ವ್ಯಕ್ತಿಯಾಗಬಲ್ಲ. ಕಾರಜೋಳನನ್ನು ಮನೆಗೆ ಕಳಿಸಬೇಕೆಂದು ಪಣ ತೊಟ್ಟಿರುವವರಲ್ಲಿ ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ನಿಂಗಣ್ಣನವರ್ ಕೂಡ ಒಬ್ಬರು. ಈತ ಬಿಎಸ್‌ಪಿಯಿಂದ ಸ್ಪರ್ಧಿಸುವ ಚಾನ್ಸ್ ಇದೆ.

ಏನೇ ಆದರೂ ಈ ಬಾರಿ ಗೋವಿಂದ ಕಾರಜೋಳ "ಗೋವಿಂದ.... ಗೋವಿಂದಾ...." ಅನ್ನೋದು ಹೆಚ್ಚೂ ಕಡಿಮೆ ಗ್ಯಾರಂಟಿ. ಇದನ್ನರಿತೇ ಅಲ್ಲವೇ ಆತ ಮುಧೋಳದಿಂದ ಕಾಲ್ತೆಗೆದು ನಾಗಠಾಣಕ್ಕೆ ಹಾರುತ್ತಿರುವುದು. ಯಾವುದಕ್ಕೂ ನಾಗಠಾಣದ ಜನ ಹುಶಾರಾಗಿರುವುದು ಒಳ್ಳೆಯದು.

■ ಮೇಘರಾಜ

...ಶ್ವನಾಥ ವಿರುದ್ಧ ಟಿಪ್ಪುಸುಲ್ತಾನ ವಿರುದ್ಧ ...ಮತ್ತು ಮಹಾತ್ಮಾ ಗಾಂಧಿಯನ್ನು ಕೊಂದ ...ನ್ನೆಯನ್ನು ಹಾಡಿಹಾಡಿ ಹೊಗಳಿದ. ಅಷ್ಟೇ ...ರಾಷ್ಟ್ರಪಿತ ಗಾಂಧಿಯನ್ನು 'ದೇಶದ್ರೋಹಿ' ...ದು ದೂಷಿಸಿದ. ಪೊಲೀಸರು ಮನಸ್ಸು ...ದ್ದಿದ್ದರೆ ಇಷ್ಟಕ್ಕೇ ಇಟ್ಟುಕೊಂಡು ಮುತಾಲಿಕ್ ...ತ್ತು ಕಮಂಗಿ ಸಿದ್ಧಲಿಂಗ ಸ್ವಾಮಿಯನ್ನು ಒದ್ದು ...ಗೆ ಹಾಕಬಹುದಿತ್ತು. ಆದರೆ, ಈ ಜಾತ್ಯತೀತ ...ದ ದುರಂತ ಎಂತಹದ್ದು ನೋಡಿ. ಅಂದು ...ಎಸ್‌ಪಿ ಚವ್ಹಾಣ್, ಸಿಪಿಐ ಬಿ.ಬಿ. ಪಾಟೀಲ್, ...ಕಾಂತ್, ಪಿಎಸ್‌ಐ ಅಶೋಕ್, ಸಂತೋಷ್ ...ರ್‌ರಂತಹ ಪೊಲೀಸರು ಅಲ್ಲಿದ್ದರೂ ಇವರ್‍ಯಾರ ...ದ್ದವೂ ಕ್ರಮ ತೆಗೆದುಕೊಳ್ಳದೆ ಅವರೆಲ್ಲರ ...ರಿಟಿ ಗಾರ್ಡ್‌ಗಳಂತೆ ನಿಂತಿದ್ದರು!

...ಸಾಕ್ಷಾತ್ ಗಾಂಧಿಯನ್ನೇ ತಲೆಕೆಟ್ಟ ಮುತಾಲಿಕ್ ...ಶದ್ರೋಹಿ' ಎಂದೆಲ್ಲಾ ಹೀನಾಮಾನವಾಗಿ ...ದೂಷಿಸಿದ್ದರೂ ಇಲ್ಲಿನ ಕಾಂಗ್ರೆಸ್‌ನವರು ಇನ್ನೂ ...ಭಕರ್ಣ ನಿದ್ರೆಯಿಂದ ಮೇಲೆದ್ದಿಲ್ಲವೆಂದರೆ ಆ ... ಇಲ್ಲಿ ಎಷ್ಟು ಹಡಾಲೆದ್ದು ಹೋಗಿದೆ ...ಬುದನ್ನು ಊಹಿಸಿ.

ಆದರೆ ಕರ್ನಾಟಕ ಕೋಮು ಸೌಹಾರ್ದ ...ಕೆ ಮತ್ತು ಜೆಡಿಎಸ್‌ನವರು ಮುತಾಲಿಕ್‌ನನ್ನು ...ಧಿಸುವಂತೆ ಪ್ರತಿಭಟಿಸಿದ ನಂತರವೇ ...ಲೀಸರು ಕಾಟಾಚಾರಕ್ಕೆ 21 ಜನರನ್ನು ಬಂಧಿಸಿ ...ರೆಲ್ಲರ ವಿರುದ್ಧ ನಿಷೇಧಾಜ್ಞೆ ಉಲ್ಲಂಘಿಸಿದ ಕೇಸು ...ಕಿದ್ದಾರೆ. ಆದರೆ ಪೊಲೀಸರ ...ಗಾವಲಿನಲ್ಲಿಯೇ ಮುತಾಲಿಕ್ ಗದುಗಿನಿಂದ ...ಪ್ ಆಗಿದ್ದಾನೆ.

...ಸಾರಾಂಶದಲ್ಲಿ, ಮುತಾಲಿಕ್‌ನ ಮಂಗಾಟ ...ನು ನಿರೀಕ್ಷಿಸಿದಷ್ಟು ಫಲ ನೀಡಲಿಲ್ಲ. ಆತ ...ಲೀಸರ ಎಸ್ಕಾರ್ಟ್‌ನಲ್ಲಿ ಕದ್ದುಮುಚ್ಚಿ ...ಹೋಗಬೇಕಾದ ಸನ್ನಿವೇಶ ...ರ್ಮಾಣವಾಗಿತ್ತೆಂದರೆ ಅದು ಗದುಗಿನ ಸೌಹಾರ್ದ ...ಂಪರೆಗೆ, ಭಾವೈಕ್ಯತೆಗೆ, ಜನರ ಹೋರಾಟಕ್ಕೆ ಸಿಕ್ಕ ...ಕ ಜಯವಂತೂ ಖಂಡಿತಾ ಹೌದು.

■ ಹುರುಳಿಕುಪ್ಪಿ ವಿನಯ್

ವಿನಾಶಕಾಲಕ್ಕೆ ರಾಯರೆಡ್ಡಿಗೆ ವಿಪರೀತ ಬುದ್ಧಿ!


ಕೊಪ್ಪಳ

ಮೈ ತುಂಬಾ ವಿನಾಶಕಾರಿ ಬುದ್ಧಿ ತುಂಬಿಕೊಂಡಿರುವ ಬಸವರಾಜ ರಾಯರೆಡ್ಡಿ ಎಂಬ ಮುಠ್ಠಾಳನ ಇತ್ತೀಚೆಗೆ ಕೆಪಿಸಿಸಿ ವರಿಷ್ಠರ ಮುಂದೆ ಪಂಚಮಸಾಲಿ ಲಿಂಗಾಯತರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವುದೇ ಈಗ ಜಿಲ್ಲೆಯಲ್ಲಿ ಚರ್ಚಾ ವಿಷಯವಾಗಿದೆ.

ಕಳೆದ ಮಾರ್ಚ್ 17ರಂದು ಕೊಪ್ಪಳ ಜಿಲ್ಲಾ ಕಾಂಗ್ರೆಸ್‌ಗೆ ಅಧ್ಯಕ್ಷರನ್ನು ನೇಮಿಸುವ ಕುರಿತಾಗಿ ಬೆಂಗಳೂರಿನಲ್ಲಿ ಕೆಪಿಸಿಸಿ ಸಭೆ ಕರೆದಿತ್ತು. ಆ ಸಭೆಯಲ್ಲಿ ಮಾಜಿ ಸಂಸದ ರಾಮುಲು ಅಲ್ಪಸಂಖ್ಯಾತರ ಕೋಟಾದಲ್ಲಿ ಆಸೀಫ್ ಅಲಿ ಮತ್ತು ಲಿಂಗಾಯತರ ಕೋಟಾದಲ್ಲಿ ಡಾ. ರಾಂಪುರರ ಹೆಸರುಗಳನ್ನು ಸೂಚಿಸಿದ್ದರು.

ಆದರೆ ರಾಯರೆಡ್ಡಿ ತಕರಾರೆತ್ತಿ ಡಾ. ರಾಂಪುರ ಅಧ್ಯಕ್ಷರಾಗುವುದನ್ನು ವಿರೋಧಿಸಿದ. ಮಾತ್ರವಲ್ಲ "ಪಂಚಮಸಾಲಿ ಜನಾಂಗಕ್ಕೆ ರಾಜಕೀಯವಾಗಿ ನಿಯತ್ತೇ ಇಲ್ಲ. ಕಳೆದಬಾರಿ ಪಂಚಮಸಾಲಿಗರು ಬಿಜೆಪಿಯನ್ನು ಬೆಂಬಲಿಸಿದ್ದರು. ಈಗ ನಾವು ಅದೇ ಜನಾಂಗದ ಡಾ. ರಾಂಪುರ ಅವರನ್ನು ಡಿಸಿಸಿ ಅಧ್ಯಕ್ಷರನ್ನಾಗಿ ಮಾಡಿದರೆ ಕಾಂಗ್ರೆಸ್ ಹಳ್ಳ ಹಿಡಿಯುವುದು ಗ್ಯಾರಂಟಿ" ಎಂದೆಲ್ಲಾ ಕೂಗಾಡಿದ.

ಆತ ಹೀಗೆ ಮಾತನಾಡಿದ್ದರ ವಿಷಯ ಗೊತ್ತಾದದ್ದೇ ತಡ ರಾಂಪುರರ ಬೆಂಬಲಿಗರು, ಪಂಚಮಸಾಲಿ ಜನಾಂಗದ ಕಾಂಗ್ರೆಸ್ ಮುಖಂಡರು ರಾಯರೆಡ್ಡಿಗೆ ಅಮರಿಕೊಂಡರು. ಅವರೆಲ್ಲರ ಪ್ರತಿಕ್ರಿಯೆಯನ್ನು ಕಂಡು ಗಾಬರಿಯಾದ ರಾಯರೆಡ್ಡಿ ತಾನು ಹಾಗೇ ಮಾತಾಡಿಲ್ಲ ಎಂದು ಆಣೆ, ಪ್ರಮಾಣ ಮಾಡಿದ್ದಾನೆ.


ರಾಂಪುರ

ಇಲ್ಲಿ ಬಹುಮುಖ್ಯ ವಿಚಾರವೇನೆಂದರೆ, ಯಲಬುರ್ಗಾ ತಾಲ್ಲೂಕಿನಲ್ಲಿ 30-35 ಸಾವಿರದಷ್ಟಿರುವ ಪಂಚಮಸಾಲಿ ಜನಾಂಗಕ್ಕೆ ಸೂಕ್ತ ನಾಯಕತ್ವ ದೊರಕಿಲ್ಲ. ಹೀಗಾಗಿ ಅಲ್ಲಿನ ರಾಜಕೀಯದಲ್ಲಿ ಇವರಿಗೆ ಧ್ವನಿಯೇ ಇಲ್ಲದಂತಾಗಿದೆ. ಆದ್ದರಿಂದ ಯಲಬುರ್ಗಾ ಮೂಲದ ಡಾ. ರಾಂಪುರ ಈ ಬಾರಿ ಕೊಪ್ಪಳ ಜಿಲ್ಲೆಯಿಂದ ಸ್ಪರ್ಧಿಸಲು ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಆದರೆ ರಾಂಪುರಗೆ ಟಿಕೆಟ್ ಸಿಕ್ಕು ಅವರು ಗೆದ್ದುಬಿಟ್ಟರೆ ತನ್ನ ತಾಲ್ಲೂಕಿನಲ್ಲಿ ಪಂಚಮಸಾಲಿಗಳು ತನ್ನಿಂದ ದೂರ ಸರಿಯುತ್ತಾರೆಂಬ ದೂ(ದು)ರಾಲೋಚನೆ ರಾಯರೆಡ್ಡಿಯದು.

ಡಾ. ರಾಂಪುರ ವಿರುದ್ಧ ಕಿಡಿಕಾರಿದ್ದಕ್ಕೆ ರಾಯರೆಡ್ಡಿಯ ವಿರುದ್ಧ ಪಂಚಮಸಾಲಿಗಳು



ಹಲ್ಲು ಕಡಿಯುತ್ತಿದ್ದಾರೆ. ಆದರೆ ಅದೇ ಜನಾಂಗದ ಸಂಘಟನೆಯ ಅಧ್ಯಕ್ಷ ಶ್ರೀಪಾದಪ್ಪ ಅಧಿಕಾರಿ ಹಾಗೂ ಕಾರ್ಯದರ್ಶಿ ವೀರಣ್ಣ ಹುಬ್ಬಳ್ಳಿ ಒಳಗೊಳಗೇ ರಾಯರೆಡ್ಡಿ ಪರ ಬಾಲಬಡಿಯುತ್ತಿದ್ದಾರೆ. ಈ ಮಧ್ಯೆ ರಾಮುಲು ಮೌನ ವಹಿಸಿದ್ದಾರೆ. ಇದೆಲ್ಲದರಿಂದ ಕಾಂಗ್ರೆಸ್ ಕಾರ್ಯಕರ್ತರು ಕಂಗಾಲಾಗಿದ್ದಾರೆ.

ಎಲೆಕ್ಷನ್ ಸದ್ಯದಲ್ಲೇ ನಡೆಯಲಿದೆ. ಒಂದೆಡೆ ಬಿಜೆಪಿ ತನ್ನ ಪ್ರಚಾರಾಂದೋಲನವನ್ನು ಪ್ರಾರಂಭಿಸಿದೆ. ಇನ್ನೊಂದೆಡೆ ಜೆಡಿಎಸ್ ಕೂಡ ತನ್ನ ಲೆಕ್ಕಗಳನ್ನು ಮಾಡುತ್ತಿದೆ. ಆದರೆ ಕಾಂಗ್ರೆಸ್ ಮಾತ್ರ ಬಸವರಾಜ ರಾಯರೆಡ್ಡಿ ಎಂಬ ಹುಂಬನ ಕಾರಣದಿಂದಾಗಿ ಇವತ್ತಿಗೂ ದಿಕ್ಕು ತೋಚದಂತೆ ಕೂತಿದೆ. ಇನ್ನು ಇಲ್ಲಿನ ಕಾಂಗ್ರೆಸ್ ಪಕ್ಷವನ್ನು ಉಳಿಸುವವರು ಯಾರು?

■ ಕಡೇನಂದಿಹಳ್ಳಿ ಕುಮಾರ್



...ರಾಷ್ಟ್ರ ಧ್ವಜದ ಸಂಕೇತವನ್ನು ಅಳಿಸಿದ ಚೆಡ್ಡಿಗಳು!

ದಾವಣಗೆರೆ

...ಚೆಡ್ಡಿ ಬಿಜೆಪಿಗಳಿಗೆ ದೇಶಭಕ್ತಿ ಎಂಬುದೂ ...ಪ್ರಜಾತಂತ್ರ ಏನೆಂಬುದೂ ಗೊತ್ತಿಲ್ಲ ಎಂಬುದಕ್ಕೆ ...ಕ್ಕಾದು ತಾಜಾ ಉದಾಹರಣೆ ಇದೆ. ಈ ...ಗಳಲ್ಲಿ ತಾವು ಅಧಿಕಾರ ಪಡೆಯುವುದೇ ...ಕ್ಕೆ ದೋಚುವುದಕ್ಕೆ, ಮತ್ತು ತಮ್ಮ ಪಿತೃ... [illegible] ...ಸಂಘಪರಿವಾರದ ಅಜೆಂಡಾವನ್ನು ಬಿತ್ತುವುದಕ್ಕೆ ...ಕೆ ಕುರುಹಾಗಿ ಎಂಬುದನ್ನು ದಾವಣಗೆರೆಯ ಈ ಪ್ರಕರಣ ಮತ್ತೊಮ್ಮೆ ಸಾಬೀತುಪಡಿಸುತ್ತದೆ.

ತ್ರಿವರ್ಣದ ಸಂಕೇತದ ಸರ್ಕಲ್.

ಇಲ್ಲಿನ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪಕ್ಕೆ ಅಂಟಿಕೊಂಡಂತಿರುವ ವೃತ್ತಕ್ಕೆ ಜನರೆಲ್ಲ 'ಗುಂಡಿ ಸರ್ಕಲ್' ಎಂದು ಕರೆಯುತ್ತಾರೆ. (ವಾಸ್ತವವಾಗಿ ಇದರ ನಿಜವಾದ ಹೆಸರು ಡಾ.ಎಂ.ಸಿ.ಮೋದಿ ಸರ್ಕಲ್). ಎಸ್.ಎಸ್.ಮಲ್ಲಿಕಾರ್ಜುನ ಕ್ರೀಡಾ ಮಂತ್ರಿಯಾಗಿದ್ದಾಗ ಈ ಸರ್ಕಲ್‌ನ ಮಧ್ಯಭಾಗದಲ್ಲಿ ವೃತ್ತಾಕಾರದ ಪುಟ್ಟ ಕಟ್ಟಡವೊಂದನ್ನು ನಿರ್ಮಿಸಿ ಅದರ ನಡುವೆ ಕಲಾತ್ಮಕವಾಗಿ ಮೂರು ಸಿಮೆಂಟಿನ ಕಂಬಗಳನ್ನು, ಈ ಕಂಬಗಳ ಮೇಲೆ ಒಂದು ಗೋಳವನ್ನು ನಿರ್ಮಿಸಿ ಮೂರೂ ಕಂಬಗಳಿಗೆ ಪ್ರತ್ಯೇಕವಾಗಿ ಕೇಸರಿ, ಬಿಳಿ, ಹಸಿರು (ಭಾರತದ ತ್ರಿವರ್ಣ ಧ್ವಜದ) ಬಣ್ಣವನ್ನು ಹಚ್ಚಿ ಕಂಬಗಳ ಮೇಲಿನ ಗೋಳಕ್ಕೆ ಕಪ್ಪು-ಬಿಳುಪಿನ ಫುಟ್‌ಬಾಲ್ ಬಣ್ಣವನ್ನು ಹಚ್ಚಲಾಗಿತ್ತು -ನೋಡುವುದಕ್ಕೆ ಇದು ಅಂದವಾಗಿಯೂ ಕಾಣುತ್ತಿತ್ತು.

ಇದಾಗಿ ನಾಲ್ಕೈದು ವರ್ಷಗಳ ನಂತರ, ಈಗ ನಗರಪಾಲಿಕೆಯ ಅಧಿಕಾರವನ್ನು ಹಿಡಿದಿರುವ ಬಿ.ಜೆ.ಪಿ. ಚೆಡ್ಡಿಗಳು ಈ ವೃತ್ತವನ್ನು ಸಂಪೂರ್ಣವಾಗಿ ಕೇಸರೀಕರಣಗೊಳಿಸಿದ್ದಾರೆ. ಗೋಳಕ್ಕೆ ಹಸಿರು ಚುಕ್ಕೆಗಳನ್ನೊಳಗೊಂಡ ಕೇಸರಿ [illegible] ಸಂಕೇತವನ್ನಾಗಿಸಿದ್ದಾರೆ. ಈ ಗೋಳವನ್ನು ಹೊತ್ತಿರುವ ಆಧಾರಸ್ತಂಭಗಳಿಗೆ ಈ ಹಿಂದೆ ಇದ್ದ ಕೇಸರಿ ಬಿಳಿ ಹಸಿರು ಬಣ್ಣವನ್ನು ಅಳಿಸಿ ಸಂಪೂರ್ಣ ಕೇಸರಿ ಬಣ್ಣವನ್ನು ಬಳಿಯುವುದರ ಮೂಲಕ ಆರೆಸ್ಸೆಸ್ ಎಂಬ ಭಯೋತ್ಪಾದಕ ಸಂಘಟನೆಯ ಮೇಲೆಯೇ ಬಿಜೆಪಿ ನಿಂತಿರುವುದನ್ನು ಸಂಕೇತಿಸಿದ್ದಾರೆ.

ಬಿಜೆಪಿಯವರು ಮೊದಲಿಗೆ ಗೋಳ ಮತ್ತು ಕಂಬಗಳಿಗೆ ಸಂಪೂರ್ಣ ಕೇಸರಿ ಬಣ್ಣವನ್ನು ಹಚ್ಚಿದ್ದರು. ಯಾರೂ ಆಕ್ಷೇಪಣೆ ಮಾಡದಿದ್ದರೆ ಗೋಳದ ಮೇಲೆ ಓಂ ಚಿಹ್ನೆಯನ್ನೂ ಬರೆಯಲು ಸಂಘಪರಿವಾರಿಗಳು ಸಿದ್ಧರಿದ್ದರೇನೋ. ಆದರೆ ದಾವಣಗೆರೆಯ ಫುಟ್‌ಬಾಲ್ ಅಸೋಸಿಯೇಷನ್‌ನವರು ಹಾಗೂ ಕಾಂಗ್ರೆಸ್ ಪಕ್ಷದ ದಿನೇಶ್ ಶೆಟ್ಟಿ ಹಾಗೂ ಶಿವನಳ್ಳಿ ರಮೇಶ್ ಮುಂತಾದವರು ತಮ್ಮ ಬೆಂಬಲಿಗರೊಂದಿಗೆ ಗುಂಡಿ ಸರ್ಕಲ್‌ಗೆ ಹೋಗಿ ಚೆಡ್ಡಿಗಳ ಕುತಂತ್ರದ ವಿರುದ್ಧ ತೀವ್ರವಾಗಿ ಪ್ರತಿಭಟಿಸಿದಾಗ ಸಂಘಪರಿವಾರಿಗಳು ಗೋಳದ ಮೇಲಿದ್ದ ಕೇಸರಿ ಬಣ್ಣದ ನಡುವೆ ಕಪ್ಪು ಚುಕ್ಕೆಗಳನ್ನು ಹಚ್ಚಿ ಅವರನ್ನು ಸಮಾಧಾನಗೊಳಿಸಿದರು. ಆದರೆ ಮರುದಿನವೇ ಈ ಕಪ್ಪುಚುಕ್ಕೆಗಳನ್ನು ಅಳಿಸಿ, ಅವಕ್ಕೆ ಹಸಿರು ಬಣ್ಣವನ್ನು ತುಂಬಿ ತಮ್ಮ ಚೆಡ್ಡಿ ಬುದ್ಧಿಯನ್ನು ಮೆರೆದಿದ್ದಾರೆ.

ದಾವಣಗೆರೆಯ ಅತಿಮುಖ್ಯ ವೃತ್ತಗಳಲ್ಲೊಂದಾದ ಗುಂಡಿ ವೃತ್ತಕ್ಕೇ ಈ ಗತಿಯಾಗುವುದಾದರೆ ಉಳಿದವುಗಳ ಮೇಲಾಗಲಿರುವ ಚೆಡ್ಡಿ ಪರಿಣಾಮಗಳನ್ನು ಕಾಂಗ್ರೆಸ್, ಜನತಾದಳ ಪಕ್ಷಗಳನ್ನೊಳಗೊಂಡು ಸಾರ್ವಜನಿಕರು ಮತ್ತು ಪ್ರಗತಿಪರರು ಗಂಭೀರವಾಗಿ ಅರ್ಥಮಾಡಿಕೊಂಡು ಸಂಘಪರಿವಾರದ ಇಂತಹ ದೇಶದ್ರೋಹಿ ಪ್ರವೃತ್ತಿಯ ವಿರುದ್ಧ ಸಿಡಿದೇಳಬೇಕಾಗಿದೆ. ಇದು ಕೇವಲ ಬಣ್ಣಗಳನ್ನು ಬದಲಾಯಿಸುವ ಉದ್ದೇಶವಲ್ಲ, ಸಂಘಪರಿವಾರದ ಸಾಮ್ರಾಜ್ಯ ವಿಸ್ತರಣೆಯ ಕುತಂತ್ರವೆನ್ನುವುದನ್ನೂ ಅರಿಯಬೇಕಿದೆ. ಹಾಗಾದಾಗ ಮಾತ್ರ ದಾವಣಗೆರೆಯನ್ನು ಕೋಮುವಾದೀಕರಿಸುವ ಚೆಡ್ಡಿಗಳ ಕುತಂತ್ರವನ್ನು ತಡೆಯಬಹುದಾಗಿದೆ.

■ ಚಂದ್ರಶೇಖರ ತೋರಣಘಟ್ಟ



ಭ್ರಮಾಲೋಕ ಮತ್ತು ವಾಸ್ತವ ಲೋಕವನ್ನು ಒಂದಾಗಿಸಿದವಳು

ಇವಳು ಕ್ಯಾಥರೀನ್ ಆನ್‌ಪೋರ್ಟರ್. ಇವಳು ಹುಟ್ಟಿದಾಗಿನಿಂದ ಎಂಥ ಸುಳ್ಳಿ, ಭ್ರಮೆಯವಳು ಅಂದರೆ ಹದಿಹರೆಯ ಮುಟ್ಟಿ ಬರೆಯಲು ಯತ್ನಿಸಿದೊಡನೆ ತನಗೆ ಹೆತ್ತವರು ಇಟ್ಟ 'ನೆಲ್ಲಿ' ಎಂಬ ಬಡವರ ಹೆಸರನ್ನು ಕಿತ್ತೊಗೆದು ಕ್ಯಾಥರೀನ್ ಆನ್‌ಪೋರ್ಟರ್ ಎಂದು ಕರೆದುಕೊಂಡಳು. ಯಾರಾದರೂ ಇವಳ ಹಿನ್ನೆಲೆಯ ಬಗ್ಗೆ ಕೇಳಿದರೆ ತಾನು ಇಂಗ್ಲೆಂಡಿನ ಪ್ರತಿಷ್ಠಿತ ಕುಟುಂಬದಿಂದ ಬಂದವಳು ಎಂದು ಹೇಳುತ್ತಿದ್ದಳು; ತನ್ನ ತಂದೆ ಆಗರ್ಭ ಶ್ರೀಮಂತನೆಂದು ಹೇಳುತ್ತಿದ್ದಳು.

ಈಕೆ ಒಂದು ದೃಷ್ಟಿಯಲ್ಲಿ ಮಹಾ ಬಜಾರಿ. ಅಮೆರಿಕಾದ ದಕ್ಷಿಣಕ್ಕೆ ನೀಗ್ರೋ ಜನಸಮೂಹ ಬದುಕುವಲ್ಲಿ ಕಡುಬಡವರ ಕುಟುಂಬದಲ್ಲಿ ಹುಟ್ಟಿದಳು; ಲಿಂಕನ್ ತರಹವೇ ಈಕೆ ಮಗುವಾಗಿ ಕಣ್ಣುಬಿಟ್ಟದ್ದು ಕ್ಯಾಬಿನ್‌ನಲ್ಲಿ. ಅನೇಕ ಮಕ್ಕಳ ಈಕೆಯ ತಂದೆ ಇವಳಿಗೆ ಶಿಕ್ಷಣ ಕೊಡಲು ಕೂಡ ಒದ್ದಾಡಿದ, ಹೇಗೋ ಅಷ್ಟಿಷ್ಟು ಕಲಿತ ಈಕೆ ಎಳೆವಯಸ್ಸಿನಲ್ಲಿಯೇ ಮನೆಯಿಂದ ತಪ್ಪಿಸಿಕೊಂಡು ಹೋಗುತ್ತಿದ್ದಳು. ಅಪ್ಪ ಮತ್ತೆ ಮತ್ತೆ ಸ್ಥಳೀಯ ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟು, ಪೊಲೀಸರಿಗೆ ತಿಳಿಸಿ ಇವಳಿಗಾಗಿ ಹುಡುಕ ಬೇಕಾಗುತ್ತಿತ್ತು. ಇವಳು ಸಿಕ್ಕರೂ ಸಿಕ್ಕುತ್ತಿರಲಿಲ್ಲ. ಒಬ್ಬೊಬ್ಬರಿಗೆ ಒಂದು ತರಹ ತನ್ನ ಹೆಸರು, ವಿಳಾಸ ಹೇಳಿ ತಪ್ಪಿಸಿಕೊಳ್ಳುತ್ತಿದ್ದಳು. ಎಲ್ಲೆಲ್ಲೋ ಮಲಗುತ್ತಾ ಅಪರಿಚಿತರ ಆಶ್ರಯ ಬೇಡಿಕೊಂಡು ಬದುಕಿ ಕೊನೆಗೆ ತಂದೆಯ ಆತಂಕವನ್ನು ಕಡಿಮೆ ಮಾಡುವುದಕ್ಕಾಗಿಯೇ ಎನ್ನುವಂತೆ ಹುಡುಕುವವರಿಗೆ ಎಟುಕುತ್ತಿದ್ದಳು.

ಇವಳು ಕ್ಯಾಥರೀನ್ ಆನ್‌ಪೋರ್ಟರ್. ಇವಳು ಹುಟ್ಟಿದಾಗಿನಿಂದ ಎಂಥ ಸುಳ್ಳಿ, ಭ್ರಮೆಯವಳು ಅಂದರೆ ಹದಿಹರೆಯ ಮುಟ್ಟಿ ಬರೆಯಲು ಯತ್ನಿಸಿದೊಡನೆ ತನಗೆ ಹೆತ್ತವರು ಇಟ್ಟ 'ನೆಲ್ಲಿ' ಎಂಬ ಬಡವರ ಹೆಸರನ್ನು ಕಿತ್ತೊಗೆದು ಕ್ಯಾಥರೀನ್ ಆನ್‌ಪೋರ್ಟರ್ ಎಂದು ಕರೆದುಕೊಂಡಳು. ಯಾರಾದರೂ ಇವಳ ಹಿನ್ನೆಲೆಯ ಬಗ್ಗೆ ಕೇಳಿದರೆ ತಾನು ಇಂಗ್ಲೆಂಡಿನ ಪ್ರತಿಷ್ಠಿತ ಕುಟುಂಬದಿಂದ ಬಂದವಳು ಎಂದು ಹೇಳುತ್ತಿದ್ದಳು; ತನ್ನ ತಂದೆ ಆಗರ್ಭ ಶ್ರೀಮಂತನೆಂದು ಹೇಳುತ್ತಿದ್ದಳು.

ಇದನ್ನೆಲ್ಲ ಕ್ಯಾಥರೀನ್ ಆನ್ ಪೋರ್ಟರ್‌ಳ ಸುಳ್ಳುಜೀವನ, ಕಲ್ಪಿತ ಜೀವನ ಎಂದು ಬೇಕಾದರೆ ಕರೆಯಬಹುದು; ಅವಳ ಕತೆಗಳನ್ನು ನೋಡಿದರೆ, ಈಕೆ ಅನೇಕ ಸ್ತರದಲ್ಲಿ ಬದುಕಿದ ವ್ಯಕ್ತಿ ಎಂದು ವಿಸ್ಮಯ ಪಡಬಹುದು; ಹಾಗೆಯೇ ತನ್ನ ಬೇರುಗಳನ್ನು ಕಿತ್ತೊಗೆದು ಅಮೆರಿಕಾದ ಉತ್ತರ, ದಕ್ಷಿಣ, ಮೆಕ್ಸಿಕೋ, ದಕ್ಷಿಣ ಅಮೆರಿಕಾ, ಫ್ರಾನ್ಸ್ ಮುಂತಾದ ಕಡೆ ಬದುಕಿದವಳು ಎಂದು ಮೆಚ್ಚಬಹುದು. ಚಿಕ್ಕಂದಿನಲ್ಲಿ ಪಡ್ಡೆ ಹುಡುಗಿಯಂತಿದ್ದ ಈಕೆಗೆ ತಿನ್ನಲು ಆಹಾರವಿರಲಿಲ್ಲ. ಆಗ ಆಕೆ "ಮರಿಯಾ ಕನ್‌ಸೆಪ್ಸಿಯಾ" ಎಂಬ ಒಂದು ಕತೆ ಬರೆದು 'ಸೆಂಚುರಿ ಮ್ಯಾಗಜೀನ್' ಎಂಬ ಪತ್ರಿಕೆಯ ಸಂಪಾದಕನಾಗಿದ್ದ ಕಾರ್ಲ್ ವಾನ್ ಡೊರೆನ್ ಎಂಬ ಪ್ರಸಿದ್ಧ ಪತ್ರಕರ್ತ ಮತ್ತು ಸಾಹಿತಿಗೆ ತೋರಿಸಿದಳು. ಅದನ್ನು ಓದಿ ನಿಬ್ಬೆರಗಾದ ವಾನ್ ಡೊರೆನ್ ಆಕೆಯನ್ನು ಕರೆದು, "ನೀನು ನಿಜಕ್ಕೂ ಬರಹಗಾರ್ತಿ!" ಎಂದು ಹೇಳಿದ. ಆ ಮಾತು ಅವಳ ಕಿವಿಯಲ್ಲಿ ಅನೇಕ ತಿಂಗಳು ನಿನದಿಸುತ್ತಿತ್ತು. ಮಹಾ ಆತ್ಮವಿಶ್ವಾಸ ಮತ್ತು ಅಹಂಕಾರದ

ಎಷ್ಟು ರಾಮಾಯಣಗಳಿವೆ? ಎ.ಕೆ. ರಾಮಾನುಜನ್ ಅವರು ಬರೆದಿದ್ದೇನು?

ಈ ದೇಶದ 'ಭವ್ಯ', 'ದಿವ್ಯ' ಸಂಸ್ಕೃತಿ ಮತ್ತು ಪರಂಪರೆಯ ಸ್ವಯಂ-ಘೋಷಿತ ಕಾವಲುಗಾರರಾಗಿರುವ ಚೆಡ್ಡಿ ಸಂಘಪರಿವಾರಕ್ಕೆ ವಾಸ್ತವದಲ್ಲಿ ಈ ದೇಶದ ಇತಿಹಾಸದ ಬಗ್ಗೆಯಾಗಲೀ, ಸಂಸ್ಕೃತಿಯ ಬಗ್ಗೆಯಾಗಲೀ ಅಥವಾ ಪರಂಪರೆಯ ಬಗ್ಗೆಯಾಗಲೀ ರವೆಯಷ್ಟೂ ಗೊತ್ತಿಲ್ಲ ಎಂಬುದನ್ನು ಅವರು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ. ಅವರಿಗೆ ಭಾರತದ ಚರಿತ್ರೆಯ ಬಗ್ಗೆ ಒಂದಿಷ್ಟಾದರೂ ಅರಿವಿದ್ದಿದ್ದರೆ ಹೀಗಾಡುತ್ತಿರಲಿಲ್ಲ.

ಭಾರತ ಮತ್ತು ಶ್ರೀಲಂಕಾಗಳ ನಡುವೆ ಸೇತುವೆಯ ಪಳಯುಳಿಕೆಯಂತೆ ಕಾಣುತ್ತಿರುವ ರಚನೆ ಮಾನವ ನಿರ್ಮಿತವಲ್ಲ, ಅದು ಪ್ರಕೃತಿಯ ಸಹಜ ಪ್ರಕ್ರಿಯೆಯಲ್ಲಿ ನಿರ್ಮಾಣಗೊಂಡದ್ದು ಎಂದು ಖುದ್ದು ನಾಸಾವೇ ಹೇಳಿದ್ದರೂ ಅದನ್ನವರು ಗೌರವಿಸುವುದಿಲ್ಲ, ಅದು ಶ್ರೀರಾಮನೇ ತನ್ನ ಕಪಿಸೈನ್ಯದೊಂದಿಗೆ ಸೇರಿ ನಿರ್ಮಿಸಿದ್ದು ಎಂದು ಮೊಂಡುವಾದಕ್ಕಿಳಿಯುತ್ತಾರೆ. ಈಗ ಇಂತಹ ವಿತಂಡವಾದಕ್ಕೆ ಮತ್ತೊಂದು ಉದಾಹರಣೆಯಾಗಿ ಅವರು ಎ.ಕೆ. ರಾಮಾನುಜನ್ ಅವರ "ಥ್ರಿ ಹಂಡ್ರೆಡ್ ರಾಮಾಯಣಾಸ್: ಫೈವ್ ಎಕ್ಸಾಂಪಲ್ಸ್ ಅಂಡ್ ಥ್ರೀ ಥಾಟ್ಸ್ ಆನ್ ಟ್ರಾನ್ಸ್‌ಲೇಶನ್" ಎಂಬ ಪ್ರಬಂಧವನ್ನು ದೆಹಲಿ ವಿಶ್ವ ವಿದ್ಯಾಲಯದ ಎರಡನೇ ಬಿ.ಎ. ಪದವಿಗೆ ರೆಫರೆನ್ಸ್ ಪಠ್ಯವಾಗಿ ನಿಗದಿಗೊಳಿಸಿರುವುದರ ವಿರುದ್ಧ ದಾಂಧಲೆ ಎಬ್ಬಿಸಿದ್ದಾರೆ. ಇಷ್ಟಕ್ಕೂ, ರಾಮಾನುಜನ್ ಅವರು ವಸ್ತುನಿಷ್ಠತೆಗೆ ವಿರುದ್ಧವಾಗಿ ಈ ಪ್ರಬಂಧದಲ್ಲಿ ಏನೂ ಹೇಳಿಲ್ಲ, ಹೇಗೆ ಭಾರತದ, ಅಷ್ಟೇ ಏಕೆ, ಇಡೀ ಏಶಿಯಾದ ಬಹುತೇಕ ಭಾಗಗಳ ಹಲವಾರು ಭಾಷೆಗಳಲ್ಲಿ ಬೇರೆ ಬೇರೆ ರೀತಿಯ ರಾಮಾಯಣ ಕಥೆ ಪ್ರಚಲಿತದಲ್ಲಿದೆ ಎಂಬುದರ ಬಗ್ಗೆಯೇ ವಿವರಿಸಿದ್ದಾರೆ.



ಈ ಪಠ್ಯವನ್ನು ವಿರೋಧಿಸುತ್ತಿರುವ ಸಂಘಪರಿವಾರದ ಪರಿಯನ್ನು ನೋಡಿದರೆ ಅದನ್ನು ಮೊದಲು ಓದಿದ್ದಾರೆಯೇ ಎಂಬ ಅನುಮಾನ ಮಾತ್ರ ಹುಟ್ಟದಿರದು.

ಮೂಲಭೂತ ಪ್ರಶ್ನೆಗೇ ಬರೋಣ. ಈ ಭರತ ಖಂಡದಲ್ಲಿ ಅಥವಾ ದಕ್ಷಿಣ ಮತ್ತು ಪೂರ್ವ ಏಶಿಯಾದಲ್ಲಿ ಒಟ್ಟಾರೆಯಾಗಿ ಎಷ್ಟು ರಾಮಾಯಣಗಳಿವೆ ಎಂಬ ಪ್ರಶ್ನೆಗೆ ಖಚಿತವಾಗಿ ಯಾರಲ್ಲೂ ಉತ್ತರವಿಲ್ಲ, ಇಲ್ಲಿರುವ ಒಂದು ಕಥೆಯನ್ನೇ ನೋಡಿ: ಒಮ್ಮೆ ಶ್ರೀರಾಮ ತನ್ನ ಸಿಂಹಾಸನದಲ್ಲಿ ಕುಳಿತಿದ್ದಾಗ ಅವನ ಕೈಯಲ್ಲಿದ್ದ ಉಂಗುರ ಜಾರಿ ಬಿತ್ತು. ಬಿದ್ದಿದ್ದೇ ತಕ್ಷಣ ಭೂಮಿಯಲ್ಲಿ ಒಂದು ರಂಧ್ರವನ್ನು ಕೊರೆದುಕೊಂಡು ಒಳಗೆ ಹೋಗಿಬಿಟ್ಟಿತು. ಆಗ ಪಕ್ಕದಲ್ಲೇ ಇದ್ದ ತನ್ನ ಸೇವಕ ಹನುಮಂತನನ್ನು ಕರೆದು 'ನೋಡು ನನ್ನ ಉಂಗುರ ಕೆಳಗೆ ಬಿದ್ದು ರಂಧ್ರ ಕೊರೆದುಕೊಂಡು ಪಾತಾಳ ಸೇರಿಬಿಟ್ಟಿದೆ. ಅದನ್ನು ಹುಡುಕಿ ತಂದು ಕೊಡು' ಎಂದು ಕೇಳುತ್ತಾನೆ. ಹನುಮಂತನಿಗೆ ತನ್ನ ದೇಹವನ್ನು ತೀರಾ ದೊಡ್ಡದಾಗಿ ಅಥವಾ ತೀರಾ ಚಿಕ್ಕದಾಗಿ ಮಾರ್ಪಡಿಸಿಕೊಳ್ಳುವ ಶಕ್ತಿಯಿರುತ್ತದೆ. ರಾಮ ಹೇಳಿದ್ದೇ ತಡ, ಹನುಮಂತ ತನ್ನ ದೇಹವನ್ನು ತುಂಬಾ ಚಿಕ್ಕದಾಗಿ ಮಾಡಿಕೊಂಡು ಉಂಗುರವನ್ನು ಹುಡುಕಿ ತರುವ ಸಲುವಾಗಿ ಅದು ಬಿದ್ದ ರಂಧ್ರದೊಳಗೆ ನುಸುಳಿ ಪಾತಾಳ ಸೇರಿಬಿಡುತ್ತಾನೆ. ಆ ಪಾತಾಳ ಲೋಕದಲ್ಲಿರುವ ಮಹಿಳೆಯರು ಮೇಲಿನಿಂದ ಬಿದ್ದ ಈ ಪುಟ್ಟ ಮಂಗನನ್ನು ನೋಡಿ ನಗಲಾರಂಭಿಸಿ ಬಿಡುತ್ತಾರೆ. ಅಲ್ಲಿ ಪ್ರಾಣಿಗಳನ್ನು ತಿನ್ನುವ ಒಂದು ಭೂತವಿರುತ್ತದೆ. ಭೂತದ ಭೋಜನಕ್ಕೆ ಒಳ್ಳೆಯ ಆಹಾರ ಸಿಕ್ಕಿತು ಎಂದುಕೊಂಡು ಈ ಪುಟ್ಟ ಕೋತಿಯನ್ನು ದೊಡ್ಡದಾದ ಒಂದು ತಟ್ಟೆಯಲ್ಲಿಟ್ಟು ಭೂತದೆದುರು ತಿನ್ನುವುದಕ್ಕಾಗಿ ತಂದಿಡುತ್ತಾರೆ. ಈ ಕೋತಿಗೆ ಏನು ಮಾಡಬೇಕೆಂದು ತೋಚದೇ ಕಣ್ಣು ಪಿಳುಕಿಸುತ್ತಾ ಕುಳಿತಿರುತ್ತದೆ.

ಕೆಳಗೆ ಪಾತಾಳ ಲೋಕದಲ್ಲಿ ಇದೆಲ್ಲಾ ನಡೆದು ತನ್ನ ಶಿಷ್ಯಸೇವಕ ಫಜೀತಿ ಅನುಭವಿಸುತ್ತಿರುವ ಸಂದರ್ಭದಲ್ಲಿ ಇತ್ತ ಭೂಲೋಕದಲ್ಲಿ ರಾಮ ಸಿಂಹಾಸನದ ಮೇಲೆ ಆರಾಮಾಗಿ ಕುಳಿತುಕೊಂಡಿರುತ್ತಾನೆ. ಆಗ ವಸಿಷ್ಠ ಮಹರ್ಷಿ ಮತ್ತು ಬ್ರಹ್ಮ ಇಬ್ಬರೂ ರಾಮನಲ್ಲಿಗೆ ಬಂದು "ನೀನು ಮಾನವನಾಗಿ ಮಾಡಬೇಕಾದ ಕೆಲಸ ಮುಗಿದುಹೋಗಿರುವುದರಿಂದ ಇಲ್ಲಿ ಮಾನವನಾಗಿ ಇರಬೇಕಾದ ಅವಶ್ಯಕತೆಯಿಲ್ಲ, ನೀನು ರಾಮನ ಅವತಾರವನ್ನು ಇಲ್ಲಿಗೆ ಕೊನೆಗೊಳಿಸಿ ಈ ದೇಹವನ್ನು ತೊರೆದು ದೇವತೆಗಳೊಂದಿಗೆ ಸೇರಿಕೋ" ಎಂದು ಹೇಳುತ್ತಾರೆ. ಅಂತೆಯೇ ರಾಮ ತನ್ನ ಅನುಯಾಯಿಗಳೆಲ್ಲರನ್ನೂ ಕರೆಸಿ ತನ್ನ ಅವತಾರವನ್ನು ಕೊನೆಗೊಳಿಸುವ ಬಗ್ಗೆ ಚರ್ಚಿಸುತ್ತಾನೆ. ನಂತರ ಹರಿಯುವ ಸರಯೂ ನದಿಯಲ್ಲಿ ಮುಳುಗಿ ಮಾಯವಾಗುತ್ತಾನೆ.

ಇದೆಲ್ಲಾ ನಡೆಯುವಾಗ ಹನುಮಂತ ಪಾತಾಳದಲ್ಲಿಯೇ ಇರುತ್ತಾನೆ. ಕೊನೆಗೆ ಇವನನ್ನು ತಟ್ಟೆಯಲ್ಲಿಟ್ಟು ಭೂತರಾಯನ ಭೋಜನಕ್ಕೆ ತೆಗೆದುಕೊಂಡು ಬರಲಾಗುತ್ತದೆ. ಆಗ ಭೂತರಾಯ "ನೀನೇಕೆ ಇಲ್ಲಿಗೆ ಬಂದೆ?" ಎಂದು ಹನುಮಂತನನ್ನು ಪ್ರಶ್ನಿಸುತ್ತಾನೆ. ಆಗ ಹನುಮಂತ ರಾಮನ ಉಂಗುರ ಬಿದ್ದಿದ್ದನ್ನೂ, ಅದನ್ನು ಹುಡುಕಿಕೊಂಡು ತಾನು ಬಂದಿದ್ದನ್ನೂ ವಿವರಿಸುತ್ತಾನೆ. ಆಗ ಭೂತ ಸಾವಿರಾರು ಉಂಗುರಗಳಿರುವ ಒಂದು ದೊಡ್ಡದಾದ ಹರಿವಾಣವೊಂದನ್ನು ಹನುಮಂತನಿಗೆ ತೋರಿಸಿ "ನೀನು ಹುಡುಕಿಕೊಂಡು ಬಂದಿರುವ ಉಂಗುರವನ್ನು ನೀನೇ ಆರಿಸಿಕೊ" ಎಂದು ಹೇಳುತ್ತಾನೆ. ಆ ಎಲ್ಲಾ ಉಂಗುರಗಳೂ ಸಾದೃಶ್ಯವಾಗಿ ರೀತಿಯಲ್ಲಿದ್ದುದರಿಂದ ಹನುಮಂತನಿಗೆ ರಾಮನ ಉಂಗುರವನ್ನು ಹುಡುಕಲು ಸಾಧ್ಯವಾಗುವುದಿಲ್ಲ, ಆಗ ಭೂತನೆ ಎದ್ದುಬಂದು "ನೋಡು ಇಲ್ಲಿ ಎಷ್ಟೊಂದು ಉಂಗುರಗಳಿವೆಯೋ ಅಷ್ಟೇ ರಾಮರು ಇದ್ದಾರೆ. ನೀನು ಮತ್ತೆ ಭೂಲೋಕಕ್ಕೆ



ಹೋದರೆ ಅಲ್ಲಿ ನಿನ್ನ ರಾಮ ಇರುವುದಿಲ್ಲ, ರಾಮನ ಈ ಅವತಾರ ಮುಕ್ತಾಯಗೊಂಡಿರುವುದರಿಂದ ಆತ ದೇಹತ್ಯಾಗ ಮಾಡಿ ಹೊರಟಿರುತ್ತಾನೆ. ಹೀಗೆ ಆತನ ಒಂದೊಂದು ಅವತಾರವೂ ಕೊನೆಗೊಳ್ಳುವಾಗ ಒಂದೊಂದು ಉಂಗುರ ಕೆಳಗೆ ಬೀಳುತ್ತದೆ. ನಾನು ಅವುಗಳನ್ನು ಒಟ್ಟುಗೂಡಿಸಿ ಇಟ್ಟಿದ್ದೇನೆ. ನೀನಿನ್ನು ಹೋಗಬಹುದು" ಎಂದು ಹೇಳುತ್ತಾನೆ. ಹನುಮಂತ ಅಲ್ಲಿಂದ ಭೂಲೋಕಕ್ಕೆ ಬಂದರೆ ಭೂತ ಹೇಳಿದಂತೆ ಅಲ್ಲಿ ರಾಮ ಇರುವುದಿಲ್ಲ.

...ಯೋಗಿಯಾಗಿದ್ದರೂ ಅವಳಿಗೆ ಆ ಮಾತಿನಿಂದ ವಿಶ್ವಾಸ ...ತ್ತು.

...ಕತೆ ಕೂಡ ಹೀಗಿತ್ತು! ಮರಿಯಾ ಕನ್‌ಸೆಪ್ಸಿಯಾ ಎಂಬ ...ಡುಗಿ ಜೂಲಿಯನ್‌ನನ್ನು ಮೆಚ್ಚಿ ಮದುವೆಯಾಗಿದ್ದಳು. ಅವನು ...ಮದುವೆಯಾದ ಸ್ವಲ್ಪ ಕಾಲದಲ್ಲಿ ಸೈನ್ಯ ಸೇರಿ ಹತ್ತಿರದಲ್ಲಿ ...ರಿಯಾಳನ್ನು ಇರಿಸಿದ್ದ. ಅವರ ನಿಜವಾದ ಸುಖ ಅವರ ...ಭೋಗ, ಪ್ರೇಮ. ಆದರೆ ಜೂಲಿಯನ್ ಸೈನ್ಯದಲ್ಲಿ ...ರವಾಗಿ ಮರಿಯಾಳನ್ನು ಕರೆದುಕೊಂಡು ಊರಿಗೆ ...ದು ಬಿಟ್ಟ. ಅಷ್ಟೇ ಅಲ್ಲ ಜೂಲಿಯನ್ ರೋಸಾ ಎಂಬ ...ಡುಗಿಯನ್ನು ಗುಟ್ಟಾಗಿ ಪ್ರೀತಿಸತೊಡಗಿದ. ಮರಿಯಾ ...ದು ದಿನ ಸಂತೆಯಲ್ಲಿ ತನ್ನ ಕೋಳಿ ...ನ್ನು ಮಾರಿ ರೋಸಾಳನ್ನು ಹುಡುಕಿ ...ಂದು ಹೋಗಿ ಚಾಕುವಿನಿಂದ ಕೋಳಿ ...ನ್ನು ಕೊಯ್ದಂತೆ ಕೊಯ್ದುಬಿಟ್ಟಳು. ...ರೆ ಎಲ್ಲರೂ ಮರಿಯಾ ಪರವಾಗಿ ...ಲೀಸರಿಗೆ ಹೇಳಿದರು: ರೋಸಾ ...ದರಗಿತ್ತಿ, ಮರಿಯಾ ಒಳ್ಳೆಯವಳು. ...ರಿಯಾ ಕೊಲ್ಲಲು ಸಾಧ್ಯವೆ? ಇಲ್ಲ. ...ವನ್ನು ಜೂಲಿಯನ್ ಕೂಡ ಒಪ್ಪಿ ...ಗುಡದಲ್ಲಿ ಮುಳುಗಿದ.




...ಇದೇರೀತಿ ಆನ್ ಪೋರ್ಟರ್ ...ತ್ತು 26 ಕತೆ ಬರೆದಳು. 'ಶಿಪ್ ಆಫ್ ...ಲ್ಸ್' ಎಂಬ ಬೃಹತ್ ಕಾದಂಬರಿ ...ರೆದಳು. ಆದರೆ ಅವಳ ನಿಜವಾದ ...ಪ್ರತಿಭೆ ಕತೆಗಳಲ್ಲಿ. ಚಿತ್ರವತ್ತಾಗಿ, ಸಾವ ಬದುಕನ್ನು ಎದುರಿಸಿ, ...ಪಾತ್ರಗಳ ನರನಾಡಿಗಳನ್ನು ಪ್ರವೇಶಿಸಿ ಬರೆಯುತ್ತಿದ್ದ ...ಪೋರ್ಟರ್ 'ನೂನ್ ವೈನ್'ನಲ್ಲಿ ವಿಚಿತ್ರ ಕೊಲೆ, ಮುಗ್ಧತೆ, ...ಕತೆ ಸೃಷ್ಟಿಸಿದಳು; ಕೊಲೆಗಾರ ಕೇಡಿ ಅನ್ನಿಸದೆ ಇರುವಷ್ಟು ...ಪ್ರಿವಾಗಿದ್ದ ಈ ಕತೆ ಪೋರ್ಟರ್‌ಳ ಕಿರುಕಾದಂಬರಿಗಳಲ್ಲಿ ...ಸಿಕ್. ಇನ್ನೊಂದು ಕತೆ 'ಫ್ಲವರಿಂಗ್ ಜೂಡಾಸ್'. ...ಜೂಡಾಸ್ ಎನ್ನುವುದು ಮರ; ಅದು ಮೋಹಕ ಹೂ ...ಬಿಡುತ್ತದೆ. ಆದರೆ ಲಾರಾ ಎಂಬ ಈ ಕತೆಯ ನಾಯಕಿಗೆ ...ಹೂ ಬಿಡುವ, ಫಲ ಕೊಡುವ ಅವಕಾಶವೇ ಇಲ್ಲ. ಸ್ಪ್ಯಾನಿಶ್ ...ವಾತಾವರಣದ ಈ ಕತೆ ಮೆಕ್ಸಿಕೋದಲ್ಲಿ ನಡೆಯುತ್ತದೆ. ...ಸರ್ಕಾರದ ವಿರುದ್ಧ ದಂಗೆಯೆದ್ದ ಕ್ರಾಂತಿಕಾರರು, ಕ್ರಾಂತಿಕಾರರ ...ಪ್ರತಿನಿಧಿಯಾದ ಬ್ರಾಗ್ಗಿಯೋನಿ ಎಂಬ ತಿಕ್ಕಲ ಮತ್ತು ಅವಳ ...ಮಕ್ಕಳು ಈ ಕತೆಯ ಇತರ ಪಾತ್ರಗಳು. ಜೈಲಲ್ಲಿ ಇರುವವರಿಗೆ ...ಊಟ ಸರಬರಾಜು ಮಾಡುವ ಲಾರಾ ಮನೆಗೆ ಬಂದರೆ ...ಬ್ರಾಗ್ಗಿಯೋನಿ ಎಂಬ ಮಧ್ಯವಯಸ್ಸಿನ ಕೊಣಪ ಇವಳೊಂದಿಗಿನ ಸುಖಕ್ಕಾಗಿ ಕಾಯುತ್ತಿರುತ್ತಾನೆ. ಆಗುವುದಿಲ್ಲ ಎಂದು ಖಡಾ ಖಂಡಿತವಾಗಿ ಹೇಳದೆ ಆ ಬ್ರಾಗ್ಗಿಯೋನಿಯ ಕೆಟ್ಟ ಗಿಟಾರ್ ಸಂಗೀತವನ್ನು ಕೇಳಿ ಅಪ್ರಾಮಾಣಿಕವಾಗಿ ಮೆಚ್ಚಿ ಅವನನ್ನು ನಿತ್ಯ ಸಾಗಹಾಕ ಬೇಕಾಗುತ್ತದೆ. ಕ್ರಾಂತಿ, ಸರ್ಕಾರ ಬಂಡಾಯಗಾರರು, ಪೊಲೀಸರು ಈ ನಡುವೆ ಸಿಕ್ಕು ಖಿನ್ನಳಾಗಿರುವ ಲಾರಾಳನ್ನು ಪ್ರೀತಿಸುವ ಒಬ್ಬ ಹುಡುಗ ಪ್ರೇಮ ಕಾಣಿಕೆಗಳನ್ನು ಅವಳ ಮನೆಯೆದುರು ಇಟ್ಟುಹೋಗಿರುತ್ತಾನೆ. ಆದರೆ ಇವನಿಗೆ ಅವಳು ನಿಶ್ಚಿತವಾಗಿ ಉತ್ತರ ಹೇಳಲಾರದೆ ಕೊನೆಗೆ 'ಬೇಡ' ಎಂದು ತಿಳಿಸಿಬಿಡುತ್ತಾಳೆ.

ತೊಂಭತ್ತು ವರ್ಷ ಬದುಕಿದ ಕ್ಯಾಥರೀನ್ ಆನ್ ಪೋರ್ಟರ್ "ಅಮೆರಿಕಾದ ಅತ್ಯುತ್ತಮ ಸಾಹಿತಿ" ಆಗಬೇಕೆಂದು ಹೊರಟು ಯಶಸ್ವಿಯಾದವಳು. ಅದಕ್ಕಾಗಿ ಜೀವನದ ಎಲ್ಲ ದ್ವಂದ್ವಗಳನ್ನು, ಆತಂಕಗಳನ್ನು, ವ್ಯಾಮೋಹಗಳನ್ನು ಅನುಭವಿಸಿದವಳು. ಹಣ, ಖ್ಯಾತಿ, ವೈಭವ, ಪ್ರಶಸ್ತಿಗಳೆಲ್ಲ ಅವಳನ್ನು ಹುಡುಕಿಕೊಂಡು ಬಂದವು. ನಾಲ್ಕು ಸಲ ಮದುವೆಯಾದ ಆನ್‌ಪೋರ್ಟರ್ ಮೂವತ್ತೇಳು ಜನ ಪ್ರೇಮಿಗಳನ್ನು ಪಡೆದಿದ್ದಳು; ಇದನ್ನ ಅವಳೇ ಹೇಳಿದ್ದು. ಹಾಗೆಯೇ ಹಣ, ಪ್ರಶಸ್ತಿಗಳಲ್ಲಿ ಎಂದೂ ಸಾರ್ಥಕ್ಯ ಕಾಣದ ಈಕೆ ತನ್ನ ಎಪ್ಪತ್ತನೇ ವಯಸ್ಸಿನಲ್ಲಿ ಮೂವತ್ತೆಂಟನೇ ಪ್ರೇಮಿಗಾಗಿ ಪ್ರಯತ್ನಿಸಿದಳು. ಅದು ಆಕೆಯ ಪ್ರೇಮ ಎಂದು ಗೊತ್ತಾದೊಡನೆ ಪ್ರೇಮಿಯಾದವನು ಹಿಂಜರಿದು ಹೊರಟು ಹೋದ. ಆದರೂ ಆಕೆ ತನ್ನ ಪ್ರಯತ್ನವನ್ನು ನಿಲ್ಲಿಸಲಿಲ್ಲ. ಪ್ರಚಂಡ ಭಾಷಣಗಾರ್ತಿ ಮತ್ತು ಹರಟೆ ಎನ್ನಿಸಿಕೊಂಡಿದ್ದ ಈಕೆ ತನ್ನ ಆಕರ್ಷಕ ಧ್ವನಿಯಲ್ಲಿ, ಭಾವನೆಗಳನ್ನು ತುಂಬಿ, ತನ್ನ ಅನುಭವಗಳನ್ನು ಸೇರಿಸಿ ಮಾತಾಡತೊಡಗಿ ದಳೆಂದರೆ ಎಲ್ಲರೂ ಮೂಕವಿಸ್ಮಿತರಾಗಿ ನೋಡುತ್ತಿದ್ದರು. ಆಕೆ ತನ್ನ ಮಾತಿನಲ್ಲಿ ತನ್ನ ಕತೆಗಳಲ್ಲಿ ನೀಡಿದಂತೆಯೇ ಚಿತ್ರ, ವ್ಯಕ್ತಿ, ಬಣ್ಣ, ವೈಶಿಷ್ಟ್ಯ-ಎಲ್ಲವನ್ನೂ ಕೊಡುತ್ತಿದ್ದಳು. ಅವಳ ಒಂದೊಂದು ಮಾತು ಒಂದೊಂದು ಕತೆಯಂತೆ ಇರುತ್ತಿತ್ತು.

ಜಗತ್ತಿನ ಶ್ರೇಷ್ಠ ಕತೆಗಾರರಿಗೆ ಹೋಲಿಸಲ್ಪಡುವ ಆನ್ ಪೋರ್ಟರ್ ಕತೆಗಾಗಿ, ಭ್ರಮೆಗಾಗಿ, ಅನುಭವದ ಹೊಸ ಸರಕಿಗಾಗಿ ಬದುಕಿದಳು. ವೃದ್ಧಾಪ್ಯದಲ್ಲಿ ಆಕೆ, "ನನ್ನ ಬದುಕನ್ನು ನಾನೇ ನಂಬಲಾಗುತ್ತಿಲ್ಲ. ಅದರಲ್ಲಿನ ಒಂದು ಘಟನೆಯನ್ನೂ ನಾನು ನಿಜ ಅನ್ನುವುದಿಲ್ಲ!" ಎಂದು ಫ್ರೆಂಚ್ ವೇಶ್ಯೆಯೊಬ್ಬಳ ಶೈಲಿಯಲ್ಲಿ ಹೇಳುತ್ತಿದ್ದಳು. ■

"...ಮತ್ತೆ ಹಿಂದಕ್ಕೆ"



ಉದ್ಯಾನದಿಂದ [illegible] ದಾರಿ [illegible] ಗಾಬರಿಯಿಂದ [illegible] ಅದಾಗ್ಲೇ [illegible] ... "ಅಲ್ಲಿ ನೋಡಿ... ಟೆರರಿಸ್ಟ್" [illegible] ಕಣ್ಣು ಹಾಯಿಸಿದ. [illegible] ಗಡ್ಡದಾರಿ [illegible] ರುತ್ತಿದರು...

ಅವರನ್ನು ನೋಡಿದೊಡನೆ ನನ್ನೊಳಗಿನ ನೋವು, ರೇಜಿಗೆ ಬೆರೆತವು. ಆದರೂ ಅದೆಲ್ಲ ನಗುಮುಖದಲ್ಲೇ ವ್ಯಕ್ತವಾದವು. ನನ್ನ ನಗುಮುಖವನ್ನು ಕಂಡು ನನ್ನ ಪಕ್ಕದಲ್ಲಿ ಕೂತಿದ್ದವನಿಗೆ ಏನನ್ನಿಸಿತೋ. ಆತ ತದೇಕಚಿತ್ತನಾಗಿ ನನ್ನನ್ನೇ ನೋಡತೊಡಗಿದ. ಆತನ ಮುಖ ಯಾಕೋ ಇನ್ನಷ್ಟು ವಿವರ್ಣವಾಗತೊಡಗಿತು. ಕಣ್ಣುಗಳು ಕಂಡಗ [illegible] ದಹಿಸತೊಡಗಿದವು. ಉಸಿರಾಟ ತೀವ್ರವಾಗತೊಡಗಿತು. ಮೂಗಿನ ಹೊಳ್ಳೆಗಳು ಮತ್ತೆಮತ್ತೆ ಅರಳಿಮುದುಡಿ ಕಂಪಿಸತೊಡಗಿದವು. ಇಡೀ ದೇಹವೇ ಸೆಟೆಯತೊಡಗಿತು.

ಕಿರುಗತೆ

ತಕ್ಷಣ ಕುಳಿತಲ್ಲಿಂದ ನೆಗೆದದ್ದು ಬಸ್ಸಿನ [illegible] ಅರಚಲಾರಂಭಿಸಿದ. "ಅಯ್ಯೋ ನಕ್ಸಲೈಟ್ [illegible] ನಾನು ಇಳೀತೇನೆ. ಹಿಂದಕ್ಕೆ [illegible] ಹೋಗುತ್ತೇನೆ!"

ಈ ಅನಿರೀಕ್ಷಿತ ಘಟನೆಯಿಂದ [illegible] ಯಾವುದೋ ತಮಾಷೆಯ ಸಂಗತಿಯನ್ನು [illegible] ಆದರೆ ಮರುಕ್ಷಣವೇ ಅವರೆಲ್ಲ ನನ್ನೆಡೆಗೆ [illegible] ಕಡುನೀಲಿ ಮಡು.....

■ ಎಂ.ಆರ್ ವಿದ್ಯಾಧರ, ಮಡಿಕೇರಿ


ಕಿರುಗತೆಗಳಿಗೆ ಆಹ್ವಾನ

ಬರೆಯುವ ಹವ್ಯಾಸ ಹೊಂದಿರುವ ಓದುಗರಿಗೆ ಇಲ್ಲೊಂದು ಆಹ್ವಾನ. ಚಿಕ್ಕದಾದ, ಚೊಕ್ಕದಾದ, ನಾನೂರು ಪದಗಳನ್ನು ಮೀರದ ಕಿರುಗತೆಗಳನ್ನು ನೀವು ಕಳುಹಿಸಿದರೆ, ಅವು ಚೆನ್ನಾಗಿದ್ದರೆ ನಾವು ಪ್ರಕಟಿಸುತ್ತೇವೆ. ಅದನ್ನು ಬರಹ ಅಥವಾ ನುಡಿಯಲ್ಲೂ lankesh70@rediffmail.comಗೆ ಕಳುಹಿಸಬಹುದು.

ವಾಸ್ತವದಲ್ಲಿ ಈ ಕಥೆ ಹಲವಾರು ಸಂಖ್ಯೆಯಲ್ಲಿರುವ ರಾಮರನ್ನು, ರಾಮಾಯಣವನ್ನು ಸೂಚ್ಯವಾಗಿ ತಿಳಿಸುತ್ತದೆ. ಕಳೆದ 2500 ವರ್ಷಗಳಲ್ಲಿ ದಕ್ಷಿಣ ಮತ್ತು ಪೂರ್ವ ಏಶಿಯಾದಲ್ಲಿ ಎಷ್ಟೊಂದು ರಾಮರು ಇದ್ದರು, ಎಷ್ಟೊಂದು ರಾಮಾಯಣಗಳು ಹುಟ್ಟಿಬಂದವು ಎಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅನ್ನಾಮೀಸ್, ಬಾಲಿನಿಸ್, ಬಂಗಾಳಿ, ಕಾಂಬೋಡಿಯನ್, ಚೀನಿ, ಗುಜರಾತಿ, ಜಾವನೀಸ್, ಕನ್ನಡ, ಕಾಶ್ಮೀರಿ, ಖೋಟಾನೀಸ್, ಲಾವೋಟಿಯನ್, ಮಲೇಶಿಯನ್, ಮರಾಠಿ, ಒರಿಯಾ, ಪ್ರಾಕೃತ, ಸಂಸ್ಕೃತ, ಸಂತಾಲಿ, ಸಿಂಹಳೀಯ, ತಮಿಳು, ತೆಲುಗು, ಥಾಯಿ, ಟಿಬೇಟಿಯನ್ - ಹೀಗೆ ರಾಮಾಯಣಗಳು ಇರುವ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಈ ಒಂದೊಂದು ಭಾಷೆಯಲ್ಲೂ ಹಲವು ರೀತಿಯ ರಾಮಾಯಣಗಳು ಅಸ್ತಿತ್ವದಲ್ಲಿವೆ.

ಉದಾಹರಣೆಗೆ, ಸಂಸ್ಕೃತವೊಂದರಲ್ಲಿಯೇ ಸುಮಾರು 25ಕ್ಕಿಂತ ಹೆಚ್ಚು ರಾಮಾಯಣಗಳಿದ್ದು ಕಥೆಯ ವಿವರಗಳಲ್ಲಿ ಒಂದಕ್ಕಿಂತ ಒಂದು ಭಿನ್ನವಾಗಿದೆ. ಈ ಎಲ್ಲಾ ಭಾಷೆಗಳಲ್ಲಿರುವ ರಾಮಾಯಣ ಕಥೆಗಳ ಜೊತೆಗೆ ಇದೇ ಕಥೆಯನ್ನು ಒಳಗೊಂಡಿರುವ [illegible] ಜನಪದ ಕಥೆಗಳನ್ನು, ನಾಟಕಗಳನ್ನು, [illegible] ಸೇರಿಸಿದರೆ ಅದೆಷ್ಟು ರಾಮಾಯಣಗಳಿವೆ ಎಂಬುದನ್ನು ಲೆಕ್ಕ ಹಾಕುವುದೂ ಕಷ್ಟವಾಗುತ್ತದೆ.

[illegible] ಒಂದೊಂದು ರಾಮಾಯಣ ಕಥೆಯೂ ವಿವರಗಳಲ್ಲಿ ಮತ್ತೊಂದಕ್ಕಿಂತ ಭಿನ್ನವಾಗಿದೆ. ವಾಲ್ಮೀಕಿ ಬರೆದ ರಾಮಾಯಣ [illegible] ಪುರಾತನವಾದದ್ದು ಮತ್ತು [illegible] ಆಗಿದೆಯಾದರೂ ಬೇರೆ ಬೇರೆ ಭಾಷೆಗಳಲ್ಲಿರುವ ರಾಮಾಯಣ ಕಥೆಗಳು ವಾಲ್ಮೀಕಿ ರಾಮಾಯಣದ ವಿವರಗಳನ್ನೇ ಹೊಂದಿಲ್ಲ, ಅಲ್ಲದೆ ಒಂದಕ್ಕಿಂತ ಒಂದು ಮೂಲಭೂತವಾಗಿಯೇ ಭಿನ್ನವಾಗಿವೆ. ಉದಾಹರಣೆಗಾಗಿ ಹೇಳಬೇಕೆಂದರೆ, ವಾಲ್ಮೀಕಿ ರಾಮಾಯಣದಲ್ಲಿ ಸೀತೆ ರಾಮನ ಹೆಂಡತಿಯಾದರೆ ಜೈನ ಪರಂಪರೆಯ ಕಥೆಗಳಲ್ಲಿ ಉದಾಹರಣೆಗೆ ವಾಸುದೇವಹಿಂದಿ ಹಾಗೂ ಕನ್ನಡ ಮತ್ತು ತೆಲುಗು ಜನಪದ ಕಥೆಗಳಲ್ಲಿ ಆಕೆ ರಾವಣನ ತಂಗಿಯಾಗಿದ್ದಾಳೆ. ಇನ್ನು ಕೆಲವು ಕಥೆಗಳಲ್ಲಿ ರಾವಣ ತನ್ನ ಯೌವನದ ಭರಾಟೆಯಲ್ಲಿ ಒಬ್ಬ ಹೆಣ್ಣಿನ ಮೇಲೆ ಅಂಗಚೇಷ್ಟೆ ಮಾಡುತ್ತಾನೆ. ಆಕೆ ಅವನ ವಿರುದ್ಧ ಸೇಡು ತೀರಿಸಿಕೊಳ್ಳುವುದಕ್ಕೊಸ್ಕರ ಮುಂದಿನ ಜನ್ಮದಲ್ಲಿ ರಾವಣನ ಮಗಳಾಗಿ ಹುಟ್ಟುತ್ತಾಳೆ. ಅವಳೇ ಸೀತೆ.



ಇನ್ನು ಥಾಯಿಲೆಂಡಿನ ಥಾಯಿ ರಾಮಕೀರ್ತಿ ರಾಮಾಯಣದಲ್ಲಿ ಅಥವಾ ರಾಮಕೆಯಿನ್‌ಗಳಲ್ಲಿ (ರಾಮಕಥೆ) ವಾಲ್ಮೀಕಿ ರಾಮಾಯಣವನ್ನು ಹೋಲುವ ಹಲವು ಘಟನೆಗಳಿದ್ದರೂ ಅದಕ್ಕಿಂತ ಮೂಲಭೂತವಾಗಿ ಭಿನ್ನವಾದ ಘಟನೆಗಳೇ ಜಾಸ್ತಿಯಿವೆ. ಇಂತಹ ಭಿನ್ನತೆಗಳನ್ನು ನಾವು ದಕ್ಷಿಣ ಭಾರತದ ಹಲವು ರಾಮಾಯಣಗಳಲ್ಲೂ ಕಾಣಬಹುದು. ಉದಾಹರಣೆಗೆ, ಸೀತಾಪರಿತ್ಯಾಗ ಘಟನೆಯನ್ನೇ ತೆಗೆದುಕೊಳ್ಳಿ. ರಾಮ-ಲಕ್ಷ್ಮಣರು ವನವಾಸದಲ್ಲಿದ್ದಾಗ ಶೂರ್ಪಣಖಿಯ ಮೂಗನ್ನು ಕತ್ತರಿಸಿರುತ್ತಾರೆ. ಇದಕ್ಕೆ ಮೂಲ ಕಾರಣ ಸೀತೆಯೆ ಎಂದು ಭಾವಿಸಿದ್ದ ಶೂರ್ಪ[illegible] ಸೀತೆಯ ಬಳಿ ಸಖಿಯಾಗಿ ಸೇರಿಕೊಳ್ಳುತ್ತಾಳೆ. ಕೆಲವು ದಿನಗಳಾದ ನಂತರ ಸೀತೆಗೆ ಆತ್ಮೀಯಳಾಗಿ ರಾವಣನ ಚಿತ್ರವನ್ನು ಬರೆಯುವಂತೆ ಸೀತೆಯನ್ನು ಪ್ರಚೋದಿಸುತ್ತಾಳೆ. ಸೀತೆ ರಾವಣನ ಚಿತ್ರವನ್ನು ಬರೆದದ್ದು (ಕೆಲವು ನಾಟಕಗಳಲ್ಲಿ ಈ ರಾವಣನ ಚಿತ್ರಕ್ಕೆ ಜೀವವೂ ಬಂದುಬಿಡುತ್ತದೆ) ರಾಮನಿಗೆ ಗೊತ್ತಾಗಿ ಆತ ಸೀತೆಯನ್ನು ಕೊಲ್ಲುವಂತೆ ಲಕ್ಷ್ಮಣನಿಗೆ ಆಜ್ಞಾಪಿಸುತ್ತಾನೆ. ಆದರೆ, ಲಕ್ಷ್ಮಣ ಸೀತೆಯನ್ನು ಕಾಡಿಗೆ ಕರೆದೊಯ್ದು ಏಕಾಂಗಿಯಾಗಿ ಆಕೆಯನ್ನು ಅಲ್ಲಿ ಬಿಟ್ಟು, ಒಂದು ಜಿಂಕೆಯನ್ನು ಕೊಂದು ಅದರ ಹೃದಯವನ್ನು ಕಿತ್ತುಕೊಂಡು ರಾಮನಲ್ಲಿಗೆ ಬಂದು ಇದು ಸೀತೆಯ ಹೃದಯ ಎಂದು ಹೇಳುವ ಮೂಲಕ ಸೀತೆಯನ್ನು ಕೊಲ್ಲಲಾಗಿದೆ ಎಂಬುದನ್ನು ರಾಮನಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಾನೆ. ಇದು ವಾಲ್ಮೀಕಿ ರಾಮಾಯಣಕ್ಕಿಂತ ಮೂಲಭೂತವಾಗಿ ಭಿನ್ನವಾಗಿರುವ ಕಥೆ.

ಥೈಲೆಂಡಿನಲ್ಲಿರುವ ರಾಮಾಯಣ ಕಥೆಗಳಲ್ಲಿ ರಾಮನಿಗಿಂತ ಹನುಮಂತನನ್ನೇ ವಿಶಿಷ್ಟವಾಗಿ, ನಾಯಕನನ್ನಾಗಿ ಚಿತ್ರಿಸಲಾಗಿದೆ. ಇಲ್ಲಿ ಹನುಮಂತ ದೈವಭಕ್ತನೂ ಅಲ್ಲ, ಬ್ರಹ್ಮಚಾರಿಯೂ ಅಲ್ಲ. ಅವನನ್ನು ಹುಡುಗಿಯರ ಹಿಂದೆ ಸುತ್ತುವ ಪಡ್ಡೆಹುಡುಗನಂತೆ ಚಿತ್ರಿಸಲಾಗಿದೆ. ಲಂಕೆಯ [illegible] ಆತನಿಗೆ ಎಂದೂ ಅನ್ನಿಸುವುದಿಲ್ಲ. ಆದರೆ, ವಾಲ್ಮೀಕಿಯ ರಾಮಾಯಣದಲ್ಲಿ ಅಥವಾ ಕಂಪನನ ತಮಿಳು ರಾಮಾಯಣದಲ್ಲಿ ಇರುವ ಹನುಮಂತನ ಚಿತ್ರಣವೇ ಬೇರೆ.

ಇಲ್ಲಿ ರಾವಣನ ಚಿತ್ರಣ ಕೂಡ ಭಿನ್ನವಾಗಿದೆ. ರಾಮಕೀರ್ತಿ ರಾಮಾಯಣದಲ್ಲಿ ರಾವಣನೇ ನಿಜವಾದ ಹೀರೋ. ರಾವಣನ ಅಗಾಧ ವಿದ್ವತ್ಸಂಪತ್ತು ಮತ್ತು ಕಲಿಕೆಯನ್ನು ಹಾಡಿ ಹಾಡಿ ಹೊಗಳಲಾಗಿದೆ. ಇಲ್ಲಿ ರಾವಣನ ಸೀತಾಪಹರಣವನ್ನು ಪ್ರೀತಿ ಸಂಕೇತವಾಗಿ ಸಹಾನುಭೂತಿಯಿಂದ ನೋಡಲಾಗಿದೆ. ಒಬ್ಬ ಮಹಿಳೆಗಾಗಿ ತನ್ನ ಸ್ವಂತ ಕುಟುಂಬ, ಸಾಮ್ರಾಜ್ಯ ಎಲ್ಲವನ್ನು ತ್ಯಾಗ ಮಾಡಿದ ರಾವಣನನ್ನು ನಿಜಕ್ಕೂ ಥಾಯಿ ಜನರು ಮೆಚ್ಚಿಕೊಳ್ಳುತ್ತಾರೆ. ಇಲ್ಲಿ ರಾವಣನ ಅಂತ್ಯ ನಿಜಕ್ಕೂ ಜನರಲ್ಲಿ ದುಃಖವನ್ನುಂಟುಮಾಡುತ್ತದೆ.

ನಮ್ಮ ಕುವೆಂಪು ರಾಮಾಯಣವನ್ನೇ ತೆಗೆದುಕೊಳ್ಳಿ. ಬಹುತೇಕ ರಾಮಾಯಣದಲ್ಲಿ ಮಂಥರೆಯನ್ನು ಕುಬ್ಜ, ಕುರೂಪಿ, ಕಟುಕಿ ಎಂದೆಲ್ಲಾ ಚಿತ್ರಿಸಿದ್ದರೆ ಕುವೆಂಪು ಅವಳಿಗೆ 'ಮಮತೆಯ ಸುಳಿ ಮಂಥರೆ' ಎಂದು ಹೊಸ ಜೀವವನ್ನೇ ಕೊಡುತ್ತಾರೆ.

ಇವು ಕೆಲವು ಉದಾಹರಣೆಗಳಷ್ಟೆ. ರಾಮಾಯಣಗಳ ಸಂಖ್ಯೆ ಭಾಷೆ, ದೇಶಗಳಾಚೆ ಹುಲುಸಾಗಿ ಬೆಳೆದು ನಿಂತಿವೆ ಇದನ್ನೇ ಎ.ಕೆ. ರಾಮಾನುಜನ್ ತಮ್ಮ ಪ್ರಬಂಧದಲ್ಲಿ ಬರೆದಿದ್ದಾರೆ. ಇದರ ವಾಸ್ತವಿಕ ಅರಿವು ಸಂಘಪರಿವಾರಿಗಳಿಗೆ ಇದ್ದಿದ್ದರೆ ಈ ಮಂಗಾಟಗಳನ್ನು ಅವರು ಮಾಡುತ್ತಿರಲಿಲ್ಲ. ಅದಕ್ಕಾಗಿಯೇ ಹೇಳಿದ್ದು ಅವರಿಗೆ ಈ ದೇಶದ ಚರಿತ್ರೆ, ಸಂಸ್ಕೃತಿ, ಪರಂಪರೆಗಳ ಬಗ್ಗೆ ರವಷ್ಟು ಅರಿವಿಲ್ಲ. ಅಂತ ಆದರೂ ಲಾಠಿ ಹಿಡಿದು ಸಂಸ್ಕೃತಿ ಮತ್ತು [illegible]

■ ಕುಮಾರ್ ಬುರಡಿಕಟ್ಟಿ

ಯಾರಾರ ಬರ್ಲಿ ಸರಾಪು ಮಾರೋ ಪಾರ್ಟಿ ಬರದು ಬ್ಯಾಡ ಕಂಡ್ಯ

ಕಾದು ಕೂತಿದ್ದ ನೆಲಕ್ಕೆ ಒಂದು ಅದ್ದ ಮಳೆ ಬಂದು ಹೊಡೆದು ಹೋದ ಪ್ರಯುಕ್ತ ಊರು ತಂಪಾಗುವುದರ ಬದಲು ಭೂಮಿ ಮತ್ತೂ ಮಳೆ ಕೇಳುತ್ತ ಗವುಗರಿಯುತ್ತಿತ್ತು. ಅಕಾಲದ ಮಳೆಗೆ ಬೇಸರಗೊಂಡ ಕಾಳಮಾವ,

"ಮಳೆ ಹೂದೇಟಗೆ ಆರು ಕಟ್ಟದೊ ಅರ್ತೆ ವದಿಯದೊ ಅಂತ ಯೇಚನೆ ಮಾಡಂಗೇಯಿಲ್ಲ ನೋಡು, ಅಂತ ಟೇಮಲ್ಲಿ ಬತ್ತು ಈ ಹಾಳುಮಳೆ" ಎಂದ.

ಬಯಲುಸೀಮೆಯ ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ದನಕರಿಗೆ ನೀರು ಸಿಗತವೆ ಬುಡು ಕುಡಿಯಕ್ಕೆ" ಎಂದ ಸೀರ.

"ಇನ್ನ ಮ್ಯಾಲೆ ಹಿಂಗೆ ಕಣಮಾವ. ಮಳೆ ಯಾವಾಗ್ಲೊ ಬಂದು ಚಚ್ಚಬುಟ್ಟೊಯ್ತದೆ. ಕ್ಯರೆ ಕಟ್ಟೆ ಸುದ್ದ ಮಾಡಿಕಂಡಿದ್ರೆ ಸರಿ, ಇಲ್ದಿದ್ರೆ ಭಾಳ ಕಷ್ಟ" ಎಂದ ಉಗ್ರಿ.

"ದೇಸಕಾದುದ್ದು ನಮಿಗೂ ಆಯ್ತದೆ ಬುಧ್ಯ" ಎಂದ ಸೀರ.

"ಯಲ್ಲ ಅಂಗನ್ನಕಂಡೆ ಹಿಂಗಾಗಿರದು."

"ಇಸಿಸಿ, ಇನ್ನೇನು ಮಾಡಕ್ಕಾದತ್ಲ? ಹುಟ್ಟಸಿದೋನು ಹುಲ್ಲು ಮೇಸ್ಯನೆ. ಯಂಗೆ ಕಾಲಾಯ್ತದೆ ಯಸಿ. ಅತ್ತಗೆ."

"ವಾಟಸ್ಸೆಯಂಗೆ ಮಾತಾಡ್ತಿಯಲ್ಲೊ ಸೀರಮಾವ" ಎಂದಳು ಜುಮ್ಮಿ.

"ಅವುನೆಲ್ಲಿ ಕಾಣ್ತಾಯಿಲವಲ್ಲಾ?"

"ಅವುನಿನ್ನ ಕೈಗೆ ಸಿಗದಿಲ್ಲ ಬುಡು."

"ಯಾಕ ಸಿಗದಿಲ್ಲಾ?"

"ಮೇ ತಿಂಗಳಿಗೆ ಯಲಕ್ಷನ್ ಮುಗುದು ವಸ ಸರಕಾರ ಬತ್ತದೆ. ಅಲ್ಲಿಗಂಟ ಅವುನು ಯಾರಿಗೂ ಸಿಗದಿಲ್ಲ."

"ಒಹೊಹೊ, ಅಂಗರೆ ಯಲಕ್ಷನ್ ಬಂದೇ ಬುಡ್ತೆ?" ಎಂದ ಕಾಳಮಾವ.

"ಊ ಕಣಮಾವ. ಕಾಂಗ್ರೆಸ್ಸಿನೋರು ಮುಂದುಕಾಕಕ್ಕೆ ಓಡಾಡಿದರಂತೆ. ಆದ್ರೆ ಯಲಕ್ಷನ್ ಮಾಡೋ ಪೈಕಿ ಯಾವನೊ ವಬ್ಬ ಮೇಲುಕೋಟೆ ನಾಮ ಹಚಗಂಡು ಬಂದಿದ್ದನಂತೆ. ಅವುನು ಈಗ್ಲೆ ಮಾಡಿಬುಟ್ರೆ ಬಿಜೆಪಿ ಅಧಿಕಾರಕ್ಕೆ ಬತ್ತದೆ ಅಂತ ಪ್ಲಾನ್ ಮಾಡಿ ಮೇ ತಿಂಗಳಿಗೆ ಆಗಂಗೆ ಮಾಡ್ತಯಿದ್ದನಂತೆ."

"ಅಂಗರಿನ್ನ ಯರಡು ತಿಂಗಳುಳಿತು ಯಲಕ್ಷನ್ನೂ?"

"ಊ. ಇನ್ನರಡು ತಿಂಗಳಿಗೆ ಯಲ್ಲಾರಣೆ ಬರನೂ ಗೊತ್ತಾಯ್ತದೆ."

"ರೆಡ್ಡಿ ರಾಮನಗರಕ್ಕೆ ಬಂದನಂತೆ ನಿಜವೇನ್ನ?" ಎಂದಳು ಜುಮ್ಮಿ.

"ಅವುನ್ಯಾಕ್ ಬಂದನೆ ಅಲ್ಲಿ? ಸುಮ್ಮನೆ ಕುಮಾರಸ್ವಾಮಿ ಹೆದರಸಕ್ಕೆ ಅಂಗಂದಿರತನೆ."

"ಅಂಗಂತಿಯಾ?"


"ಊ. ರಾಮನಗರವೇ ಬ್ಯಾರೆ, ಬಳ್ಳಾರಿನೆ ಬ್ಯಾರೆ. ಅಕಸ್ಮಾತ್ ಜನಾರ್ದನ್ ರೆಡ್ಡಿ ಬಂದ್ರೆ ಕಾಸು ಕಿತ್ತಗಂಡು ಕಳುಸ್ತವೆ, ಓಟಂತೂ ಹಾಕದಿಲ್ಲ."

"ಅಂಗನ್ನಕೊಬ್ಯಾಡ ಕಣೊ ಉಗ್ರೀ. ರೆಡ್ಡಿ ತಾನು ಗೆಲ್ದೆಯಿದ್ರೂ ಯಾರನ್ನಾರ ಗೆಲ್ಸಿ ಬುಟ್ಕೊಯ್ತನೆ" ಎಂದುಕೊಂಡು ವಾಟಸ್ಸೆ ಬಂದ.

"ಯಲಕ್ಷನ್ನು ಯಾವಾಗ ಬತ್ತದೊ ಅಂತ ಕುಣಿತಿದ್ದಲ್ಲ ಬಂದೇ ಬುಡ್ತಲ್ಲಾ" ಎಂದಳು ಜುಮ್ಮಿ.

"ಊ ಕಣಕ್ಕ ಬಂದೇಬುಡ್ತು. ರಾಜ್ಯಪಾಲನ ಆಡಳಿತ ಯಾಕೊ ಬೋರ್ವಡಿತಾಯಿತ್ತು. ಅಂತೂ ಬತ್ತಲ್ಲ ಬುಡು."

"ಯಾವ ಪಾರ್ಟಿಗೋಡಾದ್ತಿ?"



"ಇನ್ನಾರ ಪಾರ್ಟಿಗೋಡಾದ್ಯಕ್ಕ? ನಮ್ಮ ಗುರು ಬಂಗಾರಿ ಪಾರ್ಟಿಗೆ ಕ್ಯಲಸ ಮಾಡ್ತಿನಿ."

"ಅವುನೆ ಮುಲುಕ್ತ ಅವುನೆ, ಅವುನ ಪಾರ್ಟಿ ಬಂದತೇನೊ?"

"ಬರ್ಲಿ ಬುಡ್ಡಿ ಕಣೊ ಉಗ್ರಿ. ನಮ್ಮ ಗುರು ಕೊಟ್ಟರೊ ಸ್ಟೇಟ್‌ಮೆಂಟ್ ನೋಡಿದ್ರೆ ನಾವೆಲ್ಲ ಅವುರಿಗೇ ವರಕು ಮಾಡಬೇಕು ಅನ್ನುಸ್ತಾ ಅದೆ."

"ಏನು ಸ್ಟೇಟ್‌ಮೆಂಟ್ಬ್ರಾ ಅದು?"

"ಅವುರು ಪವರ್ರಿಗೆ ಬಂದ್ರೆ ಶರಾಪು ಸುರು ಮಾಡ್ತರಂತೆ."

"ಅಂಗಾದ್ರವುನು ಬರದಿಲ್ಲ ಬುಧ್ಯ".

"ಬರೆದಿಯಿದ್ರು ಬಂದೋರ ಕೈಲಿ ಜಾರಿ ಮಾಡಸೋ ಪವರ್ರದೆ ಕಣಕ್ಕ. ಶರಾಪನೇನೊ ನಿಲ್ಲಿಸಿದ್ರು ಆದ್ರೆ ಜನ ರಾಜಾ ವಿಸ್ಕಿಗೆ ಸಿಪ್ಪಾದ್ರು."

"ಕೆಲುವುರು ಸಿಪಿಎಂ ತಗತಾ ಅವುರಲ್ಲೊ?" ಎಂದ ಉಗ್ರಿ.

"ಸಿಪಿಎಂ ಅಂದ್ರೇನ್ನ?" ಎಂದಳು ಜುಮ್ಮಿ.

"ಕಮ್ಯುನಿಸ್ಟ್ ಪಾರ್ಟಿ ಮಾರ್ಕು ಕಣಕ್ಕ ಅಂದ್ರೆ, ಆ ಯಣ್ಣೆ ವಡದೋರಿಗ್ಯಲ್ಲ ಸಮಾನರು, ಸಮಾನ ಮನಸ್ಕರು ಅನ್ನೊ ಭಾವನೆ ಬತ್ತದಂತೆ. ಅದ್ಕೆ ಸಿಪಿಎಂ ತಗತ್ತರೆ."

"ಏನಾರ ತಗಂಡು ಹಾಳಾಗೋಗ್ಲಿ. ನೀನು, ನಿನ್ನ ಬಂಗಾರಪ್ಪನ ಪಾರ್ಟಿ ಬರ್ದೆವೋದ್ರೆ ಸಾಕು."

"ಇನ್ಯಾರು ಬರಬೇಕಕ್ಕಾ?"

"ಯಾರಾರ ಬರ್ಲಿ, ಯಲ್ಲಾ ಸೂಳೆ ಮಕ್ಕಳು ಅವುರೆಯ. ಸರಾಪು ಮಾರೋರು ಬರ್ದೆವೋದ್ರು ಸಾಕು ಕಂಡ್ಯ."

"ಇದೇ ಕಣಕ್ಕ ನೀನು ತಪ್ಪು ತಿಳಕಂಡಿರೋದು. ಸರಾಪು ಕುಡಿಯೋರು ಬ್ಯಾರೆ ಡ್ರಿಂಕ್ಸ್ ತಗತಾ ಅವುರೆ ಅನ್ನಾದಾದ್ರೆ ಸರಾಪು ಮಾರೋರು ಬಂದ್ರೆ ಕಾಸುಳಿಯ ದಿಲವೆ?"

"ಉಳಿಸಿ ಏನು ಮಾಡ್ತಿರ್ಲ ನೀವು? ಮಕ್ಕಳಿಗೆ ಬಟ್ಟೆ ತಂದಿರಾ, ಮನಿಗೆ ಉಪ್ಪು ಮೆಣಸು ತಂದಿರಾ ಇಲ್ಲ ಬ್ಯಣ್ಣೆ ತಂದಿರಾ?"

ಇಲಿಯ ಹುಲಿಯಾಗ್ ಮಾಡುದ್ನಂತೆ ಆ ಹುಲಿ-ಅವ್ನನ್ನೇ ತಿನ್ನಾಕ್ ಬಂತಂತೆ

'ಪುರುಷನ ಪುಣ್ಯ ನಾರೀಭಾಗ್ಯ' ಅನ್ನೋದು ಜನಪದದಲ್ಲಿ ಬಳಕೆಯಲ್ಲಿರುವ ಗಾದೆಗಳ ಹಿಂದೆ ಹುದುಗಿರುವ ಕತೆಗಳನ್ನ ಸೊಗಸಾಗಿ ಸಂಗ್ರಹಿಸಿರುವ ಡಾ. ಪಿ.ಕೆ. ರಾಜಶೇಖರ್ ಅವರ ಪುಸ್ತಕ. ಅದರಲ್ಲಿ ಒಂದು ಗಾದೆ ಇದು. ಅದರ ಸಾರಾಂಶ ಹೀಗಿದೆ:

ಒಂದು ಕಾಡು. ಅದರಲ್ಲಿ ಒಬ್ಬ ಋಷಿ. ತಪಸ್ಸು ಮಾಡುತ್ತ ಕುಳಿತಿದ್ದ. ಒಂದು ಕಾಗೆ ತನ್ನ ಹೊಟ್ಟೆ ತುಂಬಿಸಿಕೊಳ್ಳೋಕೆ ಅಂತ ಒಂದು ಇಲಿಯನ್ನ ಕೊಕ್ಕಿನಲ್ಲಿಡಿದುಕೊಂಡು ಹಾರಿಹೋಗುತ್ತಿತ್ತು. ಆಕಸ್ಮಿಕ ಇರಬೇಕು. ಇಲಿ ಕಾಗೆಯ ಕೊಕ್ಕಿನಿಂದ ಜಾರಿ ಋಷಿ ಮುಂದೆ ಬಿತ್ತು. ಅವನು ಕಣ್ತೆರೆದು ನೋಡಿದ. ಇಲಿ ವಿಲಿವಿಲಿ ಅಂತ ಒದ್ದಾಡ್ತಿತ್ತು. ಋಷಿ ಅಲ್ಲವಾ ಅದಕ್ಕೇ ಕರುಣಾಳು. ಕನಿಕರ ಬಂತು. ಅದಕ್ಕೆ ಇಲಾಜು ಮಾಡಿ ತನ್ನ ಆಶ್ರಯದಲ್ಲೇ ಸಾಕಿದ.

ಆಶ್ರಮದ ಊಟ ಅಲ್ಲವಾ. ಪುಷ್ಕಳವಾಗೇ ಇತ್ತು, ಬಡಕಲ ಇಲಿ ಮೈಕೈ ತುಂಬಿಕೊಂಡಿತು. ನೋಡೋರ ಕಣ್ಣಿಗೆ ಚಂದ ಕಾಣಿಸುತ್ತಿತ್ತು. ಆಹಾ ಇಂತಹ ಇಲೀನ ತಿಂದರೆ ಏನು ಸೊಗಸಾಗಿರುತ್ತೆ ಅಂತ ಒಂದು ಕಾಡು ಕೊತ್ತಿ ಮನಸ್ಸಿನಲ್ಲೇ ಮಂಡಿಗೆ ತಿಂತಾ ಅದನ್ನು ತಿನ್ನಕ್ಕೆ ಹೊಂಚು ಹಾಕುತ್ತಿತ್ತು. ಕಂಡಕಂಡ ಕಡೆ ಎಲ್ಲಾ ಕಾಟ ಕೊಡ್ತಿತ್ತು. ಪಾಪ ಇಲಿ ಅದರ ಬಾಯಿಗೆ ಯಾವಾಗ ಬೀಳ್ತೇನೋ ಅಂತ ಹೆದರಿ ನಡುಗ್ತಿತ್ತು. ಋಷಿ ಇದನ್ನ ನೋಡ್ದ. ಇಲಿ ಹೆದರಿಕೆ ನೋಡಿ ಅಯ್ಯೋ ಅನ್ನಿಸ್ತು. ಅದಕ್ಕೇನು ಮಾಡಿದ ಅವನು.... ಇಲಿಯ ಕೊತ್ತಿ ಮಾಡ್ಬುಟ್ಟ. ಊರು ಕೊತ್ತಿಗೇನು ಕಾಡು ಕೊತ್ತಿ ಅಂಜಬೇಕಾಗಿರಲ್ವಲ್ಲಾ... ಮೈಕೈತುಂಬಿಕೊಂಡು ಮೆರೆದಾಡ್ತಿತ್ತು... ಯಾವುದೂ ಈ ಊರ ಕೊತ್ತಿ.

ಈ ಊರ ಕೊತ್ತಿ ಹಿಂಗೆ ಓಡಾಡ್ತಿರೋದ ಒಂದು ನಾಯಿ ನೋಡ್ತು. ಅದು ಬ್ಯಾಟೆ ನಾಯಿ. ಕೊತ್ತಿ ಅಟ್ಟಾಡಿಸಿಕೊಂಡು ಬಂತು. ಕೊತ್ತಿ ಪ್ರಾಣಾಪಾಯದಿಂದ ತಪ್ಪಿಸಿಕೊಳ್ಳಲು ಋಷಿಗಳ ಹತ್ತಿರ ಹಾರಿಬಂತು. ಋಷಿ ನೋಡಿದ. ಓಹೋ ಇದು ಸರಿಯಾಗ್ಲಿಲ್ಲ ಅಂತಾವ ಏನು ಮಾಡಿದ.... ಊರ ಕೊತ್ತಿಯ ನಾಯಿ ಮಾಡ್ಬುಟ್ಟ. ಈಗ ಕೊತ್ತಿಗೆ ನಾಯಿ ಕಾಟ ತಪ್ಪಿತು.

ಹಿಂಗೇ ವಸಿದಿನ ಕಳೀತು. ಒಂದು ದಿನ ಹುಲಿ ಈ ನಾಯಿಯ ನೋಡಿತು. ಅದನ್ನ ತಿನ್ನೋಕೆ ಅಂತ ಅಟ್ಟಾಡಿಸಿಕೊಂಡು ಬಂತು. ಯಾವುದು.... ಈ ಹುಲಿ. ತನ್ನ ನಾಯಿಯ ದುಸ್ಥಿತಿ ನೋಡಿದ ಋಷಿ. ಅದನ್ನ ಪ್ರಾಣಾಪಾಯದಿಂದ ದೂರ ಮಾಡಬೇಕು ಅಂತ ಏನು ಮಾಡಿದ. ಈ ನಾಯಿ ಇತ್ತಲ್ಲ ಅದ ಹುಲಿ ಮಾಡ್ಬಿಟ್ಟ. ಮಂತ್ರ ಶಕ್ತಿ ಇತ್ತಲ್ವ. ಅದೇನೋ ಹುಲಿ ಆಯ್ತು. ಅಟ್ಟಿಸಿಕೊಂಡು ಬಂದ ಹುಲಿ ಓಹೋ ಇದೂ ನಮ್ಜಾತೀದೇ ಅಂತಾವ ಬಾಲ ಮುದುರಿಕೊಂಡು ಹೋಯ್ತು. ಆದರೆ ಈ ಹುಲಿಯಾದ ನಾಯಿ ಇತ್ತಲ್ಲ, ಅದೇನು ಮಾಡಿತಪ್ಪ ಅಂದ್ರೆ, ಕೆಂಗಣ್ಣಿನಿಂದ ಋಷಿ ನೋಡ್ತು. ಹಲ್ಲ ಕರಕರ ಅಂತ ಮಸೀತು. ಋಷೀನೆ ಮುಗಿಸಬೇಕು ಅಂತ ಅವನ ಮೇಲೆ ಹಾರಲು ತಯಾರಾಯ್ತು. ಏನಿಂಗಾಗೋಯ್ತಲ್ಲ ಅಂತ ಆಗ ಅವನು ಏನು ಮಾಡಿದ ಅಂದ್ರೆ, ಮಂತ್ರ ಶಕ್ತಿ ಇತ್ತಲ್ವ, ಹುಲಿಯ ಮೊದಲಿನಂಗೆ ಇಲಿ ಮಾಡ್ಬುಟ್ಟ.

ಮರದ ಮೇಲೆ ಕುಂತಿದ್ದ ಒಂದು ಕಾಗೆ ಇದನ್ನೆಲ್ಲ ನೋಡ್ತ ಇತ್ತು, ಇಲಿ ಕಂಡತಕ್ಷಣ ಹಾರಿ ಬಂದು ಎಗರಿಸಿಕೊಂಡೋಯ್ತು.

ಈ ಕತೆ ಓದಿದ ಮೇಲೆ ನನಗನ್ನಿಸಿದ್ದೂ ಅಂದರೆ..... ಪಾಪ ನಮ್ಮ ರಾಜಕೀಯ ನಾಯಕರದ್ದು ಯಾವ ಅಪರಾಧಾನೂ ಇಲ್ಲ, ಕಷ್ಟದಲ್ಲಿದಾನೆ, ತೊಂದರೇಲಿ ಒದ್ದಾಡ್ತ ಇದಾನೆ ಅಂತ ಯಾವುದೋ ಬೇವರ್ಸಿಗೆ ಸಹಾಯ ಮಾಡಿ ರಾಜಕೀಯದಲ್ಲಿ ಮುಂದೆ ತಂದರೆ ಇಲಿಯಂಗಿದ್ದೋನು ಹುಲಿಯಂಗಾಗ್ಬಿಟ್ರೇನು ಗತಿ ಅಂತ ಯೋಚಿಸಿಯೋ ಏನೋ ಅವರು ಅಂತಹವರ ತಂಟೇಗೇ ಹೋಗಲ್ಲ. ಎಲ್ಲಿಡಬೇಕೋ ಅಲ್ಲೇ ಇಟ್ಟಿರುತ್ತಾರೆ. ತಮ್ಮ ಮಕ್ಕಳನ್ನು ಮಾತ್ರ ಮುಂದೆ ತರ್ತಾರೆ. ಇದು ನ್ಯಾಯವೇ ಅಲ್ಲವೇನ್ರಿ!



* * * * * *

ಖುಷ್ಬೂ ಇಡ್ಲಿ!

ಖೈದಿಗಳಲ್ಲಿ ಸುಧಾರಣೆ ತರಬೇಕು ಅಂತ ಸರ್ಕಾರ ಅನ್ನೋದು ಪಡಬಾರದ ಪಾಡುಪಡುತ್ತೆ. ಇದರ ಅಂಗವಾಗಿ ಈಗ ಮಾನಸಿಕವಾಗಿ ಅಸ್ವಸ್ಥರಾದ ಖೈದಿಗಳ ಪತ್ತೆಹಚ್ಚಿ ಅವರನ್ನ ಸರಿ ಮಾಡೋ ಕೆಲಸಕ್ಕೆ ಕೈಹಾಕಿದೆ. ನಿಮ್ಹಾನ್ಸ್‌ನವರು ಇದರಲ್ಲಿ ಸೆರೆಮನೆ ಅಧಿಕಾರಿಗಳ ಜೊತೆ ಕೈ ಜೋಡಿಸುತ್ತಿದ್ದಾರಂತೆ. ಇದರ ಉದ್ಘಾಟನೆಯೂ ಇತ್ತೀಚೆಗೆ ನೆರವೇರಿತು. ರಾಜ್ಯಪಾಲರು, ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಇಂತಹ ಘಟಾನುಘಟಿ ಕುಳಗಳೆಲ್ಲ ಇದರಲ್ಲಿ ಭಾಗಿಯಾಗಿದ್ದರಂತೆ. ಮುಖ್ಯ ನ್ಯಾಯಾಧೀಶರಿಗೆ ಏನೋ ಒಂದು ಸಂಶಯ ಬಂದಿರಬೇಕು. 'ಹೌದು ನೀವು ಮಾನಸಿಕ ಅಸ್ವಸ್ಥತೆಯ ವಿವಿಧ ಹಂತಗಳನ್ನು ಹೇಗೆ ಕಂಡುಹಿಡೀತೀರಿ' ಅಂತ ನ್ಯಾಯಾಧೀಶ ಸಿರಿಯಾಕ್ ಜೋಸೆಫ್ ಅವರು ನಿಮ್ಹಾನ್ಸ್ ವೈದ್ಯರನ್ನು ಕೇಳಿದರಂತೆ. ಅದಕ್ಕೆ ಆ ವೈದ್ಯರು 'ವಿನಾಕಾರಣ ಕೋಪಗೊಂಡು ಸಾರ್ವಜನಿಕ ಸ್ಥಳಗಳಲ್ಲಿ ಅರಚಾಡುತ್ತಿದ್ದರೆ ಆತ ಮಾನಸಿಕ ಅಸ್ವಸ್ಥ ಅಂತ. ಆದರೆ ಅದೇ ವ್ಯಕ್ತಿ ತನ್ನ ವಿಪರೀತ ನಡವಳಿಕೆಯಿಂದ ನಾಚಿ ಕ್ಷಮಾಪಣೆ ಕೋರಿದರೆ ಆತನ ಸ್ಥಿತಿ ಉತ್ತಮ. ಒಂದು ವೇಳೆ ಇದಕ್ಕೆ ಕ್ಷಮೆ ಯಾಚಿಸದೇ ಇದ್ದರೆ, ತಾನು ಮಾಡಿದ್ದೇ ಸರಿ ಎಂದು ಸಾಧಿಸಲು ಸಿದ್ಧನಿದ್ದರೆ ಆತನ ಸ್ಥಿತಿ ಉಲ್ಬಣಗೊಂಡಿದೆ ಎಂದು ಅರ್ಥ' ಎಂದು ಹೇಳಿದರಂತೆ.

ಇದನ್ನೆಲ್ಲ ಕುತೂಹಲದಿಂದ ಕೇಳಿಸಿಕೊಂಡರಂತೆ ಸಿರಿಯಾಕ್ ಜೋಸೆಫ್. 'ಹಾಗಾದರೆ ಖುಷ್ಬೂಗೆ ತೊಂದರೆ ಇಲ್ಲ' ಅಂದರಂತೆ. ವಿವರಣೆನೂ ನೀಡಿದರಂತೆ. 'ಖುಷ್ಬೂ ದಂಪತಿಗಳು ಜಗಳ ಆಡ್ತಾರಂತೆ. ರಂಪ ಅನ್ನುವ ಮಟ್ಟಕ್ಕೂ ಹೋಗುತ್ತಂತೆ. ಆಮೇಲೆ ಉಂಡು ಮಲಗೋತನಕಾನೂ ಕಾಯೋದಿಲ್ವಂತೆ. ಒಬ್ಬರಿಗೊಬ್ಬರು ಕ್ಷಮೆ ಯಾಚಿಸುತ್ತಾರಂತೆ. ಅಂದರೆ ಅವರಿಬ್ಬರ ಮಾನಸಿಕ ಸ್ಥಿತಿ ಉತ್ತಮವಾಗಿದೆ ಅಂದ ಹಾಗಾಯಿತು. ಇನ್ನು ಆಕೆಯ ದೈಹಿಕ ಸ್ಥಿತಿ-ಆಕೆಯನ್ನು ನೋಡಿದರೇ ತಿಳಿಯುತ್ತೆ. ದುಂಡುದುಂಡಗಿರೋ ಆಕೆಯನ್ನು ನೋಡಿ ತಮಿಳುನಾಡಿನಲ್ಲಿ ಕೆಲವು ಕಡೆ ಇಡ್ಲಿಗೆ ಖುಷ್ಬೂ ಇಡ್ಲಿ ಅಂತಾರೆ' ಅಂತಾನೂ ಹೇಳಿದರಂತೆ.

ಅಲ್ಲ ಈ ಸಿರಿಯಾಕ್ ಜೋಸೆಫ್ ಸಾಹೇಬರು ಮಹಿಳೆಯರ ಮೇಲೆ ಅತ್ಯಾಚಾರ ನಡೆಯೋಕೆ ಅವರ ವೇಷಭೂಷಣ ಕಾರಣ ಅಂದಿದ್ದರು. ಈಗ ನೋಡಿದರೆ ಅವರ ಮೈಮಾಟದ ಮೇಲೇ ಕಣ್ಣು ಬಿದ್ದಿರುವಂತಿದೆ. ಇವರೂ ಏನಾದರೂ ಮಾನಸಿಕ ಅಸ್ವಸ್ಥರಾ ಅಂತ!

ಅಣಕ

■ ಎಚ್.ಎಲ್. ಕೇಶವಮೂರ್ತಿ

ರಾಜಕಾರಣಿಗಳ ವಿಷಯಕ್ಕೆ ಬರೋಣವಂತೆ. ಚುನಾವಣೆ ಬಂತಲ್ಲ. ಬಹಿರಂಗ ಸಭೆ. ಈ ಮಹಾತ್ಮರು ಅಲ್ಲಿ ಮಾಡುವುದೇನು? ಬಹಿರಂಗವಾಗಿ ವಿರೋಧಿಗಳ ಕುರಿತು ಅರಚಾಟ, ಕಿರುಚಾಟ. ಆಮೇಲೆ ಕ್ಷಮಾಪಣೆ ಯಾಚಿಸುವ ಉಸಾಬರೀನೂ ಇಲ್ಲ. ಇವರೆಲ್ಲ ಮಾನಸಿಕ ಅಸ್ವಸ್ಥರು ಅಂತಾನ!

ಇರಬಹುದೋ ಏನೋ!

ಪಾಪ ತಸ್ಲಿಮಾ ನಸ್ರಿನ್ ಕತೆ ನೋಡಿ.

ಸೂಕ್ಷ್ಮ ಮನಸ್ಸಿನ ಹೆಣ್ಣುಮಗಳು, ತಾನು ಕಂಡದ್ದನ್ನ, ಅನುಭವಿಸಿದ್ದನ್ನ, ಸರಿ ಅನ್ನಿಸಿದ್ದನ್ನ ತನ್ನ ಸಾಹಿತ್ಯದಲ್ಲಿ ಬಳಸಿಕೊಂಡಳು. ಮುಸ್ಲಿಂ ಮೂಲಭೂತವಾದಿಗಳು ಎಗರಿಬಿದ್ದರು. ಬಂಗ್ಲಾದೇಶದಿಂದ ಪಶ್ಚಿಮ ಬಂಗಾಳಕ್ಕೆ ಬಂದಳು. ಕಮ್ಯುನಿಸ್ಟ್ ಸರ್ಕಾರ ಅಲ್ಲವೆ ಅಲ್ಲಿರುವುದು. ತನಗೆ ಆಶ್ರಯ ನೀಡುವುದು ಖಂಡಿತ ಅಂತ ನಂಬಿದ್ದಳು.

ಆದರೆ ಆದದ್ದೇನು?

ಅಲ್ಲಿಂದಲೂ ಎತ್ತಂಗಡಿಗೆ ಒತ್ತಾಯ. ಮೂಲಭೂತವಾದಿ ಮುಸ್ಲಿಮರಿಂದ.

ತಸ್ಲೀಮಾಳ ವಿರುದ್ಧ ಗಲಭೆ, ದೊಂಬಿ. ಸರ್ಕಾರ

"ಅಷ್ಟಲ್ಲ ನಮ್ಮ ಡಿಪಾರ್ಟ್‌ಮೆಂಟಲ್ಲಿ ಕಣಕ್ಕ, ನಮಿಗೆ
ನ್ಗಿದೆ ಅದ ಜವಾಬ್ದಾರಿ ಅದೆ. ಅವುಸ್ನ
ಯುಟಿಗಂಡೋಯ್ತುವಿ."

"ಪೋಗು ಮತ್ತೆ."

"ಹೋಯ್ತುನಿ ಕಣಕ್ಕ, ನಾನೇನು ದೇವೇಗೌಡನಂಗೆ
ನಿಗೂ ಭಾರಾಗಿದ್ದಿನ?"

"ಅವುನೇನು ಬಾರಾಗಿದ್ದನ್ನ? ಅವುಂದೊಂದು
ನ್ನಿಗೆ ಜಮಾವ್ನೋಟಾದಿಯು ನೀನು?" ಎಂದ
ಮಾವ.

"ಇದ್ಯಾಕ್ ದ್ವಡಪ್ಪ ರಾಂಗಾಗಿ ಮಾತಾಡ್ತಿ? ಜನ
ಬಂದು ತವ್ಮ ಕ್ಯಲಸ ಮುಗಿಸಿಗಂಡು
ೀಗಬೇಕು, ಇಲ್ಲಿದ್ರೆ ದ್ಯಾವೇಗೌಡರಂಗಾಯ್ತರೆ ಅಂತ
ೇಳಿದ್ನು."

"ಅವುನೇನಾಗಿದ್ದನ್ನ?"

"ಅವುನೇನು ಆಗಿಲ್ಲ, ಕೆಟ್ಟು ಕ್ವರ ಹಿಡದೋರು
ಮೋ ಕ್ಯಲಸ ಮಾಡ್ತ ಅವುನೆ. ಅಲ್ಲಾ ದ್ವಡಪ್ಪ
ಹೇಳು, ಜಾತ್ಯತೀತ ಪಾರ್ಟಿ ಅಂತ ಹೇಳಿಕೊಂಡು
ಪಾರ್ಟಿ ಆಫೀಸಲ್ಲಿ ಮೃತ್ಯುಂಜಯ ಹೋಮ
ಡಿಸಿದನಲ್ಲಾ, ಇದು ಸರಿಯೆ ಹೇಳು?"

"ನೋಡೋ ವಾಟಸ್ಸೆ, ಜೆಡಿಎಸ್ಸು ಅವುನ ಪಾರ್ಟಿ,
ಳು ಅವುನ ಕಾರ್ಯಕರ್ತರು, ಪಾರ್ಟಿ ಆಫೀಸೆ
ನ ಮನೆ. ಅವುನ ಮನೆಲಿ ಅವುನೇನಾರ ಮಾಡಿಕತ್ತನೆ.
ಕಟಿಗಂಡು ನಿಮಗೇನೂ ಅಂತ?" ಎಂದ ಉಗ್ರಿ.

"ಅಂಗನ್ನದಾದ್ರೆ ನೋ ಕಾಮೆಂಟ್."

"ಮತ್ತೆ ಅವುನ ಪಾಡಿಗವುನು ಪೂಜೆನೊ,
ೋಮನೊ, ಮಾಟನೊ ಮಾಡಿಕಂಡೋಯ್ತನಪ್ಪ,
ತ ಕ್ಯಲಸಗಳಿಂದ ಅವುನಿಗೆ ವಳ್ಳೆದ್ ಆಗಿದ್ದತಂತೆ.
ತದ್ರಲ್ಲಿ ಅದ್ಯಾಕಾಡಿಕಬೇಕೂ?"

"ಸಾರಿ ಉಗ್ರಿ, ಇನ್ನ್ಯಾವಾಗ್ಲೂ ದ್ಯಾವೇಗೌಡ್ರ ಪೂಜೆ
ನಸ್ಕಾರದ ಬಗ್ಗೆ ಕಾಮೆಂಟ್ ಮಾಡದಿಲ್ಲ, ಇನ್ನೆನಿದ್ರು
ಲಿಟಿಕ್ಸ್ ಮಾತಾಡ್ತಿನಿ." ■

ಚೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕಿತ್ತು.

ಆದರೆ ಮಾಡಿದ್ದೇನು?

ನೊಂದವಳಿಗೆ ಶಿಕ್ಷೆ; ಅಪರಾಧಿಗಳಿಗೆ ರಕ್ಷೆ!

ಅವರಿಗೇ ಮಣಿಯಿತು ಸರ್ಕಾರ. ಮುಂದೆ ಅವರು
ತ ನೀಡಬೇಕಲ್ಲ!

ರಾಜಸ್ಥಾನಕ್ಕೆ ಹೋದಳು ತಸ್ಲೀಮಾ. ಅಲ್ಲಿದ್ದದ್ದು
ಹಿಳಾ ಮುಖ್ಯಮಂತ್ರಿ. ಆದರೆ ಭಾರತೀಯ ಜನತಾಪಕ್ಷ
ಯದ್ದು! ಅಲ್ಲಿಯೂ ಇರಗೊಡಲಿಲ್ಲ.

ದೆಹಲಿಗೆ ಹೋದಳು.

ಕೇಂದ್ರದಲ್ಲಿರುವವರೂ ರಾಜಕಾರಣಿಗಳೇ!

ಅಜ್ಞಾತ ಸ್ಥಳದಲ್ಲಿಟ್ಟರು, ರಕ್ಷಣೆಯ ನೆಪದಲ್ಲಿ!

ಎಂತಹ ಜಾಗ ಅದು?

ಐಸೊಲೇಷನ್ ಸೆಲ್! ಆಕೆಯೇ ಹೇಳಿದಂತೆ-
ರ್ಚರ್ ಚೇಂಬರ್!'

ಬದುಕು ಅಸಹನೀಯ ಆಗಿತ್ತು. ಯಾರೊಡನೆಯೂ
ಪರ್ಕ ಅಸಾಧ್ಯವಾಗಿತ್ತು. ಆರೋಗ್ಯ ಹದಗೆಡುತ್ತಿತ್ತು.
ದ್ಯರ ನೆರವೂ ಇರಲಿಲ್ಲ.

ಏನು ಮಾಡಬೇಕು ಆಕೆ?

'ನಾನಿಲ್ಲಿರಲಾರೆ. ಬೇರೆ ದೇಶಕ್ಕೆ ಹೋಗುತ್ತೇನೆ.'

ಈ ಅಸಹಾಯ ಅಳಲು ದಿಲ್ಲಿಯ ದೊರೆಗಳಿಗೆ
ದ್ದೇ ಬೇರೆ ರೀತಿಯೇನೋ?

'ಹೋಗು' ಎಂದಿತು ಸರ್ಕಾರ!

ಲಂಡನ್ನಿನ ಹೀಥ್ರೂ ವಿಮಾನ ನಿಲ್ದಾಣದಲ್ಲಿ ಆಕೆ
ರತ ಸರ್ಕಾರ ಕುರಿತು ಹೇಳಿದ್ದು 'ಅದು ಯಾವುದೇ
ರ್ಮಿಕ ಮೂಲಭೂತವಾದಿಗಳಿಗೆ ಕಡಿಮೆ ಇಲ್ಲ.'

ನಾಯಿ ಬೊಗಳಿತು. ಆದರೆ ದಿಲ್ಲಿಯ ದೇವಲೋಕ
ಳಾಗಲಿಲ್ಲ!

ಬ್ರಿಟಿಷ್ ಸರ್ಕಾರಕ್ಕೂ ಇಂತಹದ್ದೇ ಪರಿಸ್ಥಿತಿ ಕಾದಿತ್ತು.
ಲ್ಮಾನ್ ರಷ್ದಿ ವಿರುದ್ಧ ಮುಸ್ಲಿಂ ಮೂಲಭೂತವಾದಿಗಳು
ಹೊರಡಿಸಿದ್ದರು. ಲಕ್ಷಾಂತರ ಪೌಂಡು ಖರ್ಚು
ಡಿ ರಷ್ದಿಗೆ ರಕ್ಷಣೆ ನೀಡಿತು ಬ್ರಿಟಿಷ್ ಸರ್ಕಾರ.

ನಮ್ಮ ಸರ್ಕಾರ?

ಆಕೆ ತಪ್ಪದಾಗೆ ರಕ್ಷಣೆ ನೀಡುತ್ತಿತ್ತೇನೋ. ಆದರೆ
ಬಂದು ಹೊಸಲಿಗೆ ನಿಂತಿದೆಯಲ್ಲಾ...
ಸಲ್ಮಾನರ ಮನ ನೋಯಿಸಬಾರದಲ್ಲಾ.....! ಅದಕ್ಕೆ
ಗೊತ್ತಿಲ್ಲ ಮೂಲಭೂತವಾದಿ ಎಂಬ ಇಲೀನ
ಸಾಕಿದ್ದೇವಿ, ಒಂದಲ್ಲ ಒಂದು ದಿನ ಅದು
ನುಂಗುತ್ತೆ ಅಂತ! ■

ಮರೆಯುವ ಮುನ್ನ

■ ಪಿ. ಲಂಕೇಶ್

ಜೂನ್ 17, 1990



ಕೆಂಪು ಮತ್ತು ಅಪಾಯ



ಎಲ್ಲ ಕಡೆ ರೆಡ್, ಕೆಂಪು ತಾತ್ಸಾರಕ್ಕೆ ತುತ್ತಾಗುತ್ತಿದೆ. ಅಪಾಯವನ್ನು ಹೇಳುವ ಈ ಬಣ್ಣ ಅತ್ಯಂತ ತೀವ್ರ, ಮನಮುಟ್ಟುವ ಬಣ್ಣ, ಕಮ್ಯುನಿಸ್ಟ್ ಬಣ್ಣ, ಯುರೋಪಿನಲ್ಲಿ ಕಮ್ಯೂನಿಸಂ ಮಣ್ಣುಮುಕ್ಕುತ್ತಿದ್ದಂತೆಯೇ ಕ್ಯೂಬಾ ಕೂಡ ಕೆಂಪಿನ ಅಪಾಯ ಗ್ರಹಿಸತೊಡಗಿದೆ. ಭಾರತದ ಕಮ್ಯುನಿಸ್ಟ್‌ರು ತಮ್ಮ ದ್ವೈತ, ಅದ್ವೈತದ ವಾದ ಕೂಡ ಮಾಡಲು ಅಂಜತೊಡಗಿದ್ದಾರೆ.

ಆದರೆ ಕಮ್ಯುನಿಸಂ ಅನ್ನು ದ್ವೇಷಿಸುವ ಭರದಲ್ಲಿ ಕಮ್ಯುನಿಸಂನ ಒಳ್ಳೆಯ ಗುಣಗಳನ್ನು ಮರೆಯಬಾರದು. ಈ ಬಗ್ಗೆ ಒಮ್ಮೆ ಹೇಳಿರುವುದರಿಂದ ಇಲ್ಲಿ ಒಂದೇ ಅಂಶ ಕಾಣಿಸುತ್ತೇನೆ. ಅದು ಬಂಡವಾಳಶಾಹಿ, ಕಮ್ಯುನಿಸಂ ಬೇರೆಬೇರೆ ರೀತಿಯಲ್ಲಿ ಪ್ರಕೃತಿಯನ್ನು ನೋಡುವುದಕ್ಕೆ ಸಂಬಂಧಿಸಿದ್ದು. ವರ್ಣನೀತಿಯ ದಕ್ಷಿಣ ಆಫ್ರಿಕಾದಲ್ಲಿ ಪ್ರಕೃತಿ ನಾಶವಾಗುತ್ತಿದೆ; ಮನುಷ್ಯರ ಬಣ್ಣವನ್ನೇ ಕುರಿತು ಚಿಂತಿಸುವ ಜನಕ್ಕೆ ಪ್ರಕೃತಿಯ ಹಸಿರು ನಾಶವಾಗುತ್ತಿರುವುದು ಕಾಣಿಸುತ್ತಿಲ್ಲ. ಹಾಗೆಯೇ ಇಸ್ರೇಲ್. ಇಲ್ಲಿಯ ಅರೆಮರುಭೂಮಿ ಪೂರ್ತಿ ಮರುಭೂಮಿಯಾಗುವ ಅಪಾಯವಿದೆ. ಮನಸ್ಸಿಗೆ ಬಂದಂತೆ ಜಾಗ ಆಕ್ರಮಿಸಿಕೊಂಡು ಯಹೂದ್ಯರು ದಬ್ಬಾಳಿಕೆ ನಡೆಸುತ್ತಿದ್ದರೆ ದಮನಕ್ಕೊಳಗಾದ ಮುಸ್ಲಿಮರು ಪ್ರಕೃತಿಯನ್ನು ಪ್ರೇಮಿಸುವುದು ಸಾಧ್ಯವಿಲ್ಲ. ಇದೆಲ್ಲಕ್ಕಿಂತ, ಕೆಂಪು ಅತ್ಯಂತ ಸುಂದರ ಹಸಿರಾಗಿ ಪರಿವರ್ತಿತವಾದದ್ದು ಮಾವ್ರೋ ಕಾಲದಲ್ಲಿ; ಬೋಳು ಬೆಟ್ಟಗಳು ಹಸಿರು ವೃಕ್ಷಗಳಿಂದ ಸಂಭ್ರಮಿಸತೊಡಗಿದ್ದು, ರೈಲುರಸ್ತೆಗಳು ಮರಗಳ ಚಾಮರ ಪಡೆದದ್ದು ಮಾವ್ರೋ ಕಾಲದಲ್ಲಿ; ಕಮ್ಯುನಿಸ್ಟ್ ಆಡಳಿತದಲ್ಲಿ, ಕೆಂಪು ಬರೀ ಅಪಾಯದ ಸಂಕೇತವೆಂದು ಯಾರು ಹೇಳಬಲ್ಲರು?

ಯೌವ್ವನದ ಕಷ್ಟ



ಯೌವನದ ಮನಸ್ಸುಗಳು ಎಷ್ಟು ಕ್ಲಿಷ್ಟವಾಗುತ್ತಿವೆ. ಈ ಹುಡುಗಿ ತನ್ನ ಜೀವನದಲ್ಲಿ ಇಂಥ ಗಳಿಗೆ ಬರಬಹುದೆಂದು ತಿಳಿದಿರಲಿಲ್ಲ. ವಿಚಾರವಂತೆ, ಧೈರ್ಯವಂತೆ, ಸಮಾನತೆಗಾಗಿ ಹೋರಾಡುವವಳು; ಈಕೆಗೆ ಇಪ್ಪತ್ತೇಳು ವರ್ಷವಾದರೂ ಮದುವೆಯಾಗಿಲ್ಲ, ತಂದೆ ಕರೆತಂದ ಹುಡುಗರನ್ನೆಲ್ಲ ಈತ ಮೂಢ, ಇನ್ನೊಬ್ಬ ಮೂಢ ನಂಬಿಕೆಯವ, ಈತನಿಗೆ ಸಾಹಿತ್ಯದಲ್ಲಿ ಆಸಕ್ತಿ ಇಲ್ಲ... ಎಂದು ತಿರಸ್ಕರಿಸಿದ್ದಾಳೆ. ಈಗ ದಿಗ್ಭ್ರಮೆಗೊಂಡು ನಿಂತಿದ್ದಾಳೆ. ಹೀಗೇ ಮುಂದುವರಿದರೆ? ಮದುವೆಯೇ ಆಗದಿದ್ದರೆ?

"ಅದೇನು ಕಷ್ಟ? ಇಷ್ಟವಿಲ್ಲದಿದ್ದರೆ ಮದುವೆಯಾಗದೆ ಹಾಗೇ ಇರಬಹುದು" ಅಂದೆ. ಆದರೆ ಆಕೆಗೆ ನಾನು ಹೇಳುವಷ್ಟು ಅದು ಸುಲಭವಲ್ಲ (ಇಂಥ ಸಾವಿರಾರು ಹೆಣ್ಣುಮಕ್ಕಳಿರುವುದರಿಂದ ಹೇಳುತ್ತಿದ್ದೇನೆ).

"ನೀವು ಆರಿಸಿದವರನ್ನು ಮದುವೆಯಾಗ್ತೇನೆ" ಅಂದಳು.

"ನಾನು ಅಂಥ ಕೆಲಸಕ್ಕೆ ಕೈಹಾಕುವುದಿಲ್ಲ" ಎಂದು ನಕ್ಕೆ.

ಆಕೆಗೆ ಪರ್ಯಾಯ ನೆನಪುಗಳು. ತನ್ನ ಊರಿನ ಹರೆಯದ ಹೆಣ್ಣುಮಕ್ಕಳು ವಯಸ್ಸಿಗೆ ಬಂದೊಡನೆ ಮದುವೆಯಾಗುವುದು; ಕಷ್ಟ ಸಂಕಷ್ಟಗಳೆಷ್ಟೇ ಇದ್ದರೂ ಯಾವುದೋ ರಕ್ಷಣೆಯಲ್ಲಿ ನೆಮ್ಮದಿಯಾಗಿರುವುದು; ಊಟ, ಮಕ್ಕಳು, ಗದ್ದೆ, ಮನೆ ನೋಡಿಕೊಂಡು ವಿಚಿತ್ರ ಸುಖದಲ್ಲಿರುವುದು.....

"ಅದೆಲ್ಲ ಯೋಚಿಸಬಾರದು" ಅಂದೆ; "ಶಿಕ್ಷಣಕ್ಕೂ ತಕ್ಕ ನೆಮ್ಮದಿ ಕೂಡ ಸಾಧ್ಯ. ಈ ವೇದನೆಗಳೆಲ್ಲ ಹಳ್ಳಿಯ ಹೆಣ್ಣುಮಕ್ಕಳು ನೆಮ್ಮದಿಯಿಂದ ಭಿನ್ನವಾಗಿದ್ದರೂ ವಿಚಿತ್ರ ಅರ್ಥ ಪಡೆದಿರುತ್ತವೆ. ಇದು ನಿನಗೆ ಯಾವಾಗ ಗೊತ್ತಾಗುತ್ತೆ ಗೊತ್ತ? ಹಳ್ಳಿಯ ಹುಡುಗಿ ಕೂಡ ಲಕ್ಷಾಂತರ ವರ್ಷದ ಹಿಂದಿನ ಸರಳತೆ, ಸುಖವನ್ನು ಕಲ್ಪಿಸಿಕೊಂಡು ಆಳುವುದನ್ನು ನೋಡಿದಾಗ..." ಅಂದೆ.

ಸುತ್ತೆಲ್ಲ ಮೊಳಗಲಿ ಶಾಂತಿ ಮಂತ್ರ

■ ಅನಸೂಯ ಕಾಂಬಳೆ



ಮಕ್ಕಳ ಮಾರ್‍ಯಾರು ಮಳೆರಾಜ!
ಮುಂಗಾರು ಮಳೆಯಾಗ ಬೆರಗಿನ ಮಾಡಿಲ್ಲ
ಸೋರುವ ಗುಡಿಸಲದಾಗ ಸೆರಗಲಿ ಮರೆಮಾಡಿ
ಮಕ್ಕಳ ಸಾಕ್ಯಾರೊ ಮಳೆರಾಜ

ಗಿಡಗಂಟಿ ಕೊರಳಲಿ ಹಸುಗೂಸನು ಕಟ್ಟಿ
ಕಾಣದ ದೈವಕ್ಕೆ ಕೈಮುಗಿದು ದುಡಿದವರು

ಹಬ್ಬ-ಹುಣ್ಣಿವ್ಯಾಗ ಒಲೆಹೊತ್ತದಿದ್ದರು
ದಂಟಿನ ಗ್ವಾಡಿಗೆ ಮಣ್ಣವ ಬಳಿದು
ಸುಣ್ಣದ ಬೊಟ್ಟಿಟ್ಟು ನವಿಲಿನ ಕಣ್ಣ ಬರೆದವರು
ಹಸಿವಿನ ಹಬ್ಬಾ ಮಾಡುವರು

ಬಂದೂಕಿನ ಬಾಯಲ್ಲಿ ಗುಬ್ಬಿಗೂಡು ಕಟ್ಟುವ ಕನಸು
ಕಾಣುತ್ತ ಕುಳಿತವರ ಮುಂದೆ
ಮರಿಗುಬ್ಬಿ ನುಂಗಿ ನಕ್ಕಾವು ಬಂದೂಕು

ಸಣ್ಣ ಸಾಲಿ ಒಳಗೂ ಅಕ್ಷರ ನುಂಗಿದರು
ಬಣ್ಣದ ಕನಸುಗಳ ಕೊಂದವರು
ಹೊಳೆದಂಡೆಯ ಎಳೆಯ ಸವತೆಕಾಯಿ ಚಿವುಟಿದರು

ಐಟಿ-ಬಿಟಿಗಳ ಮುಚ್ಚಿದ ಬಾಗಿಲ ಮುಂದ
ಪದವಿ-ಪ್ರಶಸ್ತಿಗಳೆಲ್ಲ ಧರಣಿ ಕುಂತಾವು
ಹಕ್ಕಿಪಿಕ್ಕಿಗಳು ಹಾರಲು ಅಲ್ಲಿ ಸ್ಥಳವಿಲ್ಲ
ಕಾಡಿನ ಕತ್ತಲೆಯಲಿ ಕರಗ್ಯಾದ ಬದುಕು

ಬೆಳಕು ತರುವೆವು ಎಂದು ಬರಿಗಾಲಲಿ ಹೋದವರು
ಕೆಂಡದ ಮಳೆದಾಟ ಕೆಸರಲಿ ನಿಂದವರು
ಬಣ್ಣದ ಅಂಗಿ ತೊಟ್ಟು ಸಣ್ಣಗೆ ಸರಿದವರು
ಮತ್ತೊಮ್ಮೆ ಮರಳಿ ಧ್ವನಿ ಬರಲಿ ಮಳೆರಾಯ
ಸುತ್ತೇಳು ಕೋಟಿ-ಕಂದರ ಒಡೆಯಲಿ

ನೆಲಮುಗಿಲು ಒಂದಾಗಿ ಮಳೆಸುರಿದು ಭೂಮಿಯ
ಕೊಚ್ಚಿಕೊಂಡು ಹೋಗಲಿ ಕಸಕಡ್ಡಿ ಮಳೆರಾಯ
ಸುತ್ತೆಲ್ಲ ಮೊಳಗಲಿ ಶಾಂತಿಮಂತ್ರ.

ಎಸ್‌ಇಜೆಡ್‌ಗಳ ಲೂಟಿಯ ಮತ್ತೊಂದು ಸ್ಯಾಂಪಲ್ಲು!



ನಂದಿಗ್ರಾಮದ ಸ್ಫೂರ್ತಿಯಲ್ಲಿ ದೇಶಾದ್ಯಂತ ಎಸ್‌ಇಜೆಡ್‌ಗಳ ವಿರುದ್ಧ ಹೋರಾಟಗಳು ನಡೆಯುತ್ತಿರುವಾಗಲೇ ಅದರ ಬಗ್ಗೆ ಕಿಂಚಿತ್ತೂ ಪ್ರತಿಸ್ಪಂದನೆ ತೋರದ ಸರ್ಕಾರಗಳು ಒಂದಾದ ಮೇಲೊಂದರಂತೆ ಎಸ್‌ಇಜೆಡ್‌ಗಳಿಗೆ ಅನುಮತಿಯನ್ನು ನೀಡುತ್ತಲೇ ಇವೆ. ಒಂದು ಅಂದಾಜಿನ ಪ್ರಕಾರ ನಂದಿಗ್ರಾಮದ ಹೋರಾಟ ತಣ್ಣಗಾದ ನಂತರ ಮತ್ತೆ ಪ್ರಾರಂಭವಾದ ಎಸ್‌ಇಜೆಡ್ ಸ್ಥಾಪನಾ ಪ್ರಕ್ರಿಯೆಯಲ್ಲಿ ಕನಿಷ್ಠ 150ಕ್ಕೂ ಹೆಚ್ಚು ಹೊಸ ಎಸ್‌ಇಜೆಡ್‌ಗಳಿಗೆ ಅನುಮತಿ ನೀಡಲಾಗಿದೆ. ನಂದಿಗ್ರಾಮದ ಜನ ಬಂಡಾಯದ ನಂತರ ಎಸ್‌ಇಜೆಡ್ ಕುರಿತಾಗಿ ಸರ್ಕಾರ ಮಾಡಿಕೊಂಡ ಬದಲಾವಣೆಗಳು ಎರಡೇ. ಒಂದು ಎಸ್‌ಇಜೆಡ್‌ಗೆ ನೀಡುತ್ತಿದ್ದ ಗರಿಷ್ಠ ಭೂಮಿಯನ್ನು 14,000 ಎಕರೆಗೆ ಮಿತಿಗೊಳಿಸಿರುವುದು. ಎರಡು ಸಾಧ್ಯವಾದಷ್ಟು ದೊಡ್ಡ ಎಸ್‌ಇಜೆಡ್‌ಗಳಿಗೆ ಏಕಾಏಕಿ ಅನುಮತಿ ನೀಡದೇ ಹತ್ತು ಹಲವು ಸಣ್ಣಪ್ರಮಾಣದ ಎಸ್‌ಇಜೆಡ್‌ಗಳಿಗೆ ಅನುಮತಿ ಕೊಡುವುದು. ಈ ಮೂಲಕ ರೈತರ ಜಮೀನನ್ನು ಹೆಚ್ಚು ಕಬಳಿಸುತ್ತಿಲ್ಲ ಎಂಬ ಅಭಿಪ್ರಾಯ ಮೂಡಿಸುವುದು ಇದರ ಹಿಂದಿನ ಹುನ್ನಾರ.

ಇದಲ್ಲದೆ ಈ ಪ್ರಕ್ರಿಯೆಯಲ್ಲಿ ಎಸ್‌ಇಜೆಡ್ ವಿರೋಧಕ್ಕಿರುವ ಏಕೈಕ ಕಾರಣವೆಂದರೆ ಅದು ರೈತರ ಜಮೀನನ್ನು ಕಸಿಯುತ್ತದೆ ಎಂಬಂತೆ ಚಿತ್ರಿಸಲಾಗುತ್ತಿದೆ. ಎಸ್‌ಇಜೆಡ್ ವಿರುದ್ಧವಾಗಿ ನಡೆಯುತ್ತಿರುವ ಹೋರಾಟಗಳಲ್ಲಿ ಪ್ರಧಾನವಾಗಿ ರೈತರ ಜಮೀನಿನ ವಿಷಯವೇ ಪ್ರಸ್ತಾಪವಾಗುತ್ತಿರುವುದರಿಂದ ಅದನ್ನು ನಿಭಾಯಿಸಿಕೊಂಡರೆ ಈ ಯೋಜನೆಗಳಲ್ಲಿ ಬೇರೆ ಯಾವುದೇ ಸಮಸ್ಯೆ ಇಲ್ಲವೆಂಬಂತೆ ಚಿತ್ರಿಸಲಾಗುತ್ತಿದೆ. ಇದು ಎಸ್‌ಇಜೆಡ್ ಯೋಜನೆಗಳಿಂದುಂಟಾಗುವ ಇತರ ಪರಿಣಾಮಗಳನ್ನು ಅವಗಣನೆ ಮಾಡುವುದೇ ಆಗಿದೆ. ಎಸ್‌ಇಜೆಡ್ ಯೋಜನೆಯಿಂದ ರೈತಾಪಿ ಕೂಡಲೇ ಹಾನಿಗೊಳಗಾಗುವುದು ಸತ್ಯ. ಆದರೆ ಎಸ್‌ಇಜೆಡ್‌ನ ಪರಿಣಾಮ ಅಷ್ಟೆ ಅಲ್ಲ. ಅದು ದೇಶದ ಆರ್ಥಿಕತೆಯನ್ನೇ ಕಂಗೆಡಿಸುವಂತ ಪರಿಣಾಮಗಳನ್ನು ಉಂಟುಮಾಡುತ್ತದೆ.

ಎಸ್‌ಇಜೆಡ್ ಭಾರತದ ಆರ್ಥಿಕತೆಯ ಮೇಲೆ ಉಂಟು ಮಾಡುತ್ತಿರುವ ಅಂಥ ಒಂದು ಪರಿಣಾಮದ ಬಗ್ಗೆ ಸಾಕ್ಷಾತ್ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ನಂತ ಭಾರತ ಪ್ರಭುತ್ವದ ಸಾಂವಿಧಾನಿಕ ಸ್ಥಾನಮಾನ ಹೊಂದಿರುವ ಜವಾಬ್ದಾರಿಯುತ ವ್ಯಕ್ತಿಯೇ ಘೋಷಿಸಿದ್ದಾರೆ.

ಈ ಆಡಿಟರ್ ಜನರಲ್ ಎಂಬುದು ಭಾರತ ಸರ್ಕಾರವು ಭಾರತದ ಜನತೆಯ ಹಣವನ್ನು ಮತ್ತು ಸಂಪನ್ಮೂಲವನ್ನು ಸರಿಯಾಗಿ ಬಳಸುತ್ತಿದೆಯೇ ಇಲ್ಲವೇ? ಮತ್ತು ಅದನ್ನು ಇನ್ನು ಉತ್ತಮವಾಗಿ ಹೇಗೆ ಬಳಕೆ ಮಾಡಿಕೊಳ್ಳಬಹುದು ಎಂಬ ಬಗ್ಗೆ ದೇಶಕ್ಕೆ ಮತ್ತು ಸರ್ಕಾರಕ್ಕೆ ಕಾಲಕಾಲಕ್ಕೆ ವರದಿ ಕೊಡುವ ಸಾಂವಿಧಾನಿಕ ಅಧಿಕಾರವುಳ್ಳ ಸ್ಥಾನವಾಗಿದೆ. ಈ ವರ್ಷ ತನ್ನ ವರದಿಯಲ್ಲಿ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರು ಎಸ್‌ಇಜೆಡ್‌ಗಳಿಂದ ಹೇಗೆ ಭಾರತದ ಸಂಪನ್ಮೂಲ ಲೂಟಿಯಾಗುತ್ತಿದೆ ಅಥವಾ ಜನರಿಗೆ ದಕ್ಕಬೇಕಾದ ತೆರಿಗೆ ನಿಧಿ ಹೇಗೆ ಶ್ರೀಮಂತರ ಪಾಲಾಗುತ್ತಿದೆ ಎಂದು ವಿವರಿಸಿದೆ.

ಆ ವರದಿಯು; ಎಲ್ಲಾ ಎಸ್‌ಇಜೆಡ್‌ಗಳು ತಮಗೆ ಸರ್ಕಾರ ಕೊಡುತ್ತಿರುವ ರಿಯಾಯಿತಿಯನ್ನು ತಪ್ಪು ಲೆಕ್ಕ ತೋರಿಸಿ ಲೂಟಿ ಹೊಡೆಯುತ್ತಿವೆ ಎಂದು ಆಧಾರ ಸಮೇತ ಸಾಬೀತು ಮಾಡಿದೆ. ಎಸ್‌ಇಜೆಡ್‌ಗಳಿಗೆ ರಿಸರ್ವ್ ಬ್ಯಾಂಕಿನ ಪ್ರಕಾರವೇ 1,70,000 ಕೋಟಿ ರೂ.ಗಳಿಗೂ ಹೆಚ್ಚು ತೆರಿಗೆ ರಿಯಾಯಿತಿಯನ್ನು ಘೋಷಿಸಲಾಗಿದೆ. ಇಷ್ಟು ರಿಯಾಯಿತಿಗೆ ಅವು ಅರ್ಹವಾಗಬೇಕೆಂದರೆ ಅವು ಒಟ್ಟಾರೆ ತಮ್ಮ ವಹಿವಾಟಿನಲ್ಲಿ ರಫ್ತನ್ನು ಅರ್ಥಾತ್ ವಿದೇಶಿ ವಿನಿಮಯವನ್ನು ಹೆಚ್ಚು ಗಳಿಸುವಂತಾಗಿರಬೇಕು. ಅಂದರೆ ಅವು ತಮ್ಮ ಉದ್ಯಮಕ್ಕೆ ಬೇಕಾದ ಯಂತ್ರಗಳನ್ನು ಆಮದು ಮಾಡಿಕೊಂಡಾಗ ವೆಚ್ಚವಾಗುವುದಕ್ಕಿಂತ ಹೆಚ್ಚಿನ ವಿದೇಶಿ ವಿನಿಮಯವನ್ನು ತಮ್ಮ ಉತ್ಪಾದನೆಯನ್ನು ವಿದೇಶಗಳಿಗೆ ರಫ್ತು ಮಾಡುವ ಮೂಲಕ ಗಳಿಸುವಂತಿರಬೇಕು. ರಫ್ತಿನಿಂದ ಭಾರತದ ವಿದೇಶಿ ವಿನಿಯಮದ ಸಂಪತ್ತನ್ನು ಭರ್ತಿ ಮಾಡಬೇಕು. ಈ ರಫ್ತು ಪ್ರಕ್ರಿಯೆಯನ್ನು ಉತ್ತೇಜಿಸಲೆಂದೇ ಸರ್ಕಾರವು ಈ ಉದ್ಯಮಗಳಿಗೆ ರಫ್ತು ಸುಂಕವನ್ನು ರದ್ದುಪಡಿಸಿದೆ. ಆದರೆ ಕಂಟ್ರೋಲರ್ ಜನರಲ್ ವರದಿ ಹೇಳುವಂತೆ ಎಸ್‌ಇಜೆಡ್ ಆಕ್ಟ್‌ನಲ್ಲಿರುವ ಅವಕಾಶಗಳನ್ನು ಬಳಸಿಕೊಂಡು ಈ ಎಲ್ಲಾ ಎಸ್‌ಇಜೆಡ್‌ಗಳು ಹೊರದೇಶಕ್ಕೆ ರಫ್ತು ಮಾಡದೆಯೇ-ಅಂದರೆ ನಿವ್ವಳ ವಿದೇಶಿ ವಿನಿಮಯವನ್ನು ಗಳಿಸದೆಯೇ- ಸರ್ಕಾರದ ರಿಯಾಯತಿಯನ್ನು ಕಬಳಿಸುತ್ತಿವೆ.

ಎಸ್‌ಇಜೆಡ್ ಆಕ್ಟ್ ಪ್ರಕಾರ ಒಂದು ಎಸ್‌ಇಜೆಡ್ ವಲಯದಿಂದ ಸರಕೊಂದು ಹೊರ ಬಂದ ತಕ್ಷಣವೇ ಅದನ್ನು ರಫ್ತು ಎಂದು ಪರಿಗಣಿಸಲಾಗುತ್ತದೆ. ಏಕೆಂದರೆ ಪ್ರತಿ ಎಸ್‌ಇಜೆಡ್‌ಗಳನ್ನು ಒಂದು ವಿದೇಶಿ ಭೂಪ್ರದೇಶವೆಂದೇ ಲೆಕ್ಕ ಹಾಕಲಾಗುತ್ತದೆ. ಆದರಿಂದ ಹೊರಬರುವ ಎಲ್ಲಾ ಸರಕುಗಳನ್ನು ರಫ್ತೆಂದೇ ಲೆಕ್ಕ ಹಾಕಲಾಗುತ್ತದೆ. ಹೀಗೆ ಈ ಎಸ್‌ಇಜೆಡ್‌ಗಳು ಯಾವುದೇ ವಿದೇಶಕ್ಕೆ ರಫ್ತು ಮಾಡದೇ ನಮ್ಮ ದೇಶದಲ್ಲೇ ಉತ್ಪಾದಿಸಿ ನಮ್ಮ ದೇಶಕ್ಕೆ ಮಾರುತ್ತಿದ್ದರೂ ರಫ್ತು ಮಾಡಿದೆವೆಂಬ ಲೆಕ್ಕ ತೋರಿಸಿ ಕೋಟ್ಯಾಂತರ ರೂಪಾಯಿ ತೆರಿಗೆ ಹಣವನ್ನು ಲಪಟಾಯಿಸುತ್ತಿವೆ.

ಅವರ ವರದಿಯ ಪ್ರಕಾರ ಈ ಬಗೆಯ ಮೋಸವೊಂದರಿಂದಲೇ 2001-06ರ ನಡುವೆ ವಿವಿಧ ಕಂಪನಿಗಳು ಭಾರತದ ಬೊಕ್ಕಸಕ್ಕೆ 8,842 ಕೋಟಿ ರೂ. ವಂಚನೆ ಮಾಡಿವೆ. ಉದಾಹರಣೆಗೆ ಚೆನ್ನೈ ಬಳಿ ಇರುವ ಎಸ್‌ಇಜೆಡ್ ಒಂದರಲ್ಲಿ ಪ್ರಖ್ಯಾತ ಮೊಬೈಲ್ ಕಂಪನಿಯಾದ ನೋಕಿಯ ಕಂಪನಿ 2005-06ರ ಸಾಲಿನಲ್ಲಿ 4885 ಕೋಟಿ ರೂಪಾಯಿಗಳಷ್ಟು ಮೌಲ್ಯದ ಸೆಟ್‌ಗಳನ್ನು ಉತ್ಪಾದಿಸಿ ಒಂದು ಪೈಸೆ ತೆರಿಗೆ ಕಟ್ಟದೆ ಅಪಾರ ಪ್ರಮಾಣದ ಲಾಭ ಮಾಡಿತು. ಈ ಕಂಪನಿ ತನ್ನ ಮೊಬೈಲ್ ಸೆಟ್ ಅನ್ನು ವಿದೇಶಗಳಿಗೆ ರಫ್ತು ಮಾಡುತ್ತದೆಂದು ಅದಕ್ಕೆ ನೀಡಲಾಗಿದ ಉತ್ಪಾದನ ವಸ್ತು ತೆರಿಗೆ ರಿಯಾಯಿತಿಯೇ 681 ಕೋಟಿಗಳಷ್ಟಂತೆ! ಅದೇ ವರದಿ ಹೇಳುವಂತೆ 2006-07ರ ಸಾಲಿನಲ್ಲಿ ಈ ಎಲ್ಲಾ ಎಸ್‌ಇಜೆಡ್‌ಗಳಿಗೆ ಕೊಟ್ಟಿರುವ ಒಟ್ಟಾರೆ ರಫ್ತು ಉತ್ತೇಜನಾ ರಿಯಾಯತಿಗಳ ಮೊತ್ತ 66,368 ಕೋಟಿ ರೂ. ಗಳಂತೆ! ಅಂದರೆ ಅದು ಆ ಸಾಲಿನಲ್ಲಿ ನಮ್ಮ ದೇಶ ಕಸ್ಟಂ ತೆರಿಗೆ ಮೂಲದಿಂದ ಪಡೆದುಕೊಂಡ ತೆರಿಗೆ ನಿಧಿಯ ಶೇ.77 ರಷ್ಟಂತೆ.

ಈ 66,000 ಕೋಟಿ ರಿಯಾಯತಿ ಎಂದರೆ ಎಷ್ಟು? ಈ ದೇಶದ ಎಲ್ಲಾ ಬಿಪಿಎಲ್ ಮತ್ತು ಎಪಿಎಲ್ ಬಡವರಿಗೆ ಮೂರು ಹೊತ್ತೂ ಹೊಟ್ಟೆ ತುಂಬಾ ಊಟ ಮಾಡುವಂತೆ ಮಾಡಲು ಅಗತ್ಯವಿರುವ ಹಣದ ಎರಡು ಪಟ್ಟು! ಈ ದೇಶದ ಪಿಯುಸಿವರೆಗಿನ ಎಲ್ಲಾ ಮಕ್ಕಳಿಗೂ ಮಧ್ಯಾಹ್ನದ ಹೊತ್ತು ಪೌಷ್ಟಿಕ ಆಹಾರ ಕೊಡಲು ಬೇಕಾದ ಹಣದ ಹತ್ತು ಪಟ್ಟು! ಈ ದೇಶದ ಎಲ್ಲಾ ದಲಿತ ವಿದ್ಯಾರ್ಥಿಗಳಿಗೆ ಅಂಕದ ಗೊಡವೆ ಇಲ್ಲದೆ ಉನ್ನತ ಶಿಕ್ಷಣದವರೆಗೆ ಶಿಕ್ಷಣ ಪಡೆಯಲು ಬೇಕಿರುವ ಹಣದ ಐದು ಪಟ್ಟು. ಮತ್ತು ಈ ದೇಶದ ಬಡ ರೈತರು ಬಡ್ಡಿ ವ್ಯಾಪಾರಿಗಳಿಂದ ಪಡೆದುಕೊಂಡಿರುವ ಸಾಲವನ್ನೆಲ್ಲಾ ತೀರಿಸಿ ಆತ್ಮಹತ್ಯೆಯ ಉರುಳಿಂದ ಪಾರಾಗಲು ಬೇಕಿರುವ ಹಣದ ಎರಡು ಪಟ್ಟು! ಮತ್ತು ಅರವತ್ತು ವರ್ಷಗಳಲ್ಲಿ ಒಂದು ಸಾರಿ ಸರ್ಕಾರ ಮೊನ್ನೆ ಬಜೆಟ್ಟಿನಲ್ಲಿ ಘೋಷಿಸಿದ ರೈತರ ಸಾಲಮನ್ನಾ ಹಣಕ್ಕಿಂತ ಈ ಎಸ್‌ಇಜೆಡ್‌ಗಳು ಪ್ರತಿವರ್ಷ ಪಡೆದುಕೊಳ್ಳುತ್ತಿರುವ ರಿಯಾಯತಿಯೇ ಜಾಸ್ತಿ!.

ಹೀಗಾಗಿ ಎಸ್‌ಇಜೆಡ್ ಸಮಸ್ಯೆ ಕೇವಲ ಜಮೀನು ಕಳೆದುಕೊಳ್ಳುತ್ತಿರುವ ರೈತನದ್ದು ಮಾತ್ರವಲ್ಲ. ಈ ದೇಶದ ಎಲ್ಲಾ ಜನರದ್ದು!

■ ಶಿವಸುಂದರ್

ಅಂದ, ಚೆಂದ, ಅರ್ಥಪೂರ್ಣವಾದ ವಿಶೇಷಾಂಕ



ಈ ಸಲದ 'ಲಂಕೇಶ್' ವಿಶೇಷಾಂಕ ಸರಳ ಮತ್ತು ಸುಂದರವಾಗಿದೆ. ನನ್ನನ್ನು ತುಂಬ ಆಪ್ತವಾಗಿ ಮುಟ್ಟಿದ ಬರಹ ಚಂದ್ರೇಗೌಡನ 'ಚಿಗವ್ವ'. ಒಂದು ಶ್ರೇಷ್ಠಕತೆಯನ್ನು ಓದಿದಂತಾಯಿತು. ಗಟ್ಟಿಗಿತ್ತಿಗರತಿ ಹುಚ್ಚಮ್ಮ ಮತ್ತು ಗೌಸಣ್ಣರ ನಡುವಿನ 'ಬಾವುಣಿಕೆ' ಈಗಿನ ದಿನಮಾನದಲ್ಲಿ ಅತ್ಯಪೂರ್ಣವಾದದ್ದು.

ಚಂದ್ರೇಗೌಡನ ನೆಲಗಂಧಿ ಗದ್ಯ ಲಲಿತಪ್ರಬಂಧದ ಜತೆಗೇ ಅಷ್ಟಕತೆಗಳ ಹೂರಣವನ್ನು ಒಳಗೊಳ್ಳುತ್ತ 'ಪ್ರಬಂಧ ಕಥನ'ವೆಂಬ ಒಂದು ಹೊಸ ಪ್ರಕಾರವಾಗಿ ಕನ್ನಡಕ್ಕೆ ದಕ್ಕುತ್ತಿದೆ. ಚಂದ್ರೇಗೌಡರಂಥವರು ನಮ್ಮ ಗ್ರಾಮೀಣಾ ಭಾರತದ ಒಂದು ಗಟ್ಟಿ ದನಿ-ಬನಿ ಎಂದರೆ ಉತ್ಪ್ರೇಕ್ಷೆಯಲ್ಲ!

-ಬಿ. ರಾಜಣ್ಣ, ಕೆ.ಆರ್. ನಗರ


'ಲಂಕೇಶ್' ವಿಶೇಷ ಸಂಚಿಕೆ ಅದ್ಭುತವಾಗಿತ್ತು. ಇಷ್ಟು ಚೆಂದದ ವಿಶೇಷಾಂಕವನ್ನು ಕೇವಲ ಹನ್ನೆರಡು ರೂಪಾಯಿಗೆ ಓದುಗರಿಗೆ ಒದಗಿಸಿದ ಗೌರಿ ಲಂಕೇಶ್‌ಗೆ ಮತ್ತು 'ಲಂಕೇಶ್' ಬಳಗಕ್ಕೆ ಧನ್ಯವಾದಗಳು.

-ರಮಜಾನ ಕೆ. ಕೊರ್ತಿ, ಬಾದಾಮಿ

ಈ ಬಾರಿಯ ವಿಶೇಷ ಸಂಚಿಕೆ ನಿಜಕ್ಕೂ ತುಂಬಾ ಕಾಳಜಿಯನ್ನು ಹೊತ್ತು ಬಂದಿದೆ ಎನಿಸಿತು. ಸಂಚಿಕೆಯ ಪ್ರತಿ ಬರಹಗಳು ವೈಚಾರಿಕತೆ ಮತ್ತು ಪ್ರಜ್ಞೆಯನ್ನು ಸಾಮಾನ್ಯನಲ್ಲಿ ಬಿತ್ತಲು ಸಫಲವಾಗಿವೆ ಎನ್ನಬಹುದು. ನಿಮ್ಮ ಸಾಮಾಜಿಕ ಕಾಳಜಿ, ಸಾಮಾನ್ಯ ನಡೆಗಿನ ತುಡಿತದ ಕಾರಣವೇ ಪತ್ರಿಕೆಯ ಯಶಸ್ಸಿನ ಸೂತ್ರ ಎನ್ನಬಹುದಾಗಿದೆ. ಕೋಮುವಾದ ಮತ್ತು ಬಂಡವಾಳಶಾಹಿ ವ್ಯವಸ್ಥೆಗಳು ದೇಶದ ಐಕ್ಯತೆ ಮತ್ತು ಸಾಮರಸ್ಯವಾಗಿರುವ ಸಾಂಸ್ಕೃತಿಕ ಬೇರುಗಳನ್ನು ಯಾವ ರೀತಿ 'ಮಾಯಾ' ನಡೆಗಳಿಂದ ಕತ್ತರಿಸುತ್ತಿವೆ. ನಿಜವಾದ ಭಾರತೀಯ ಹೇಗೆ ನಡೆಯಬೇಕೆನ್ನುವ ಆಶಯ ನಿಮ್ಮ ಪ್ರತಿ ಸಂಚಿಕೆಯ ಆಶಯ ಕೂಡ. ಅದು ಓದುಗರದೂ ಸಹ. ನಿಮ್ಮ ನಿರ್ಭಿಡತೆ ಮತ್ತು ಜಾತ್ಯತೀತ ನಿಲುವು ಇನ್ನಷ್ಟು ಗಟ್ಟಿಯಾಗಿ ಪ್ರಗತಿಪರ ನಿಲುವುಗಳೊಡನೆ ಜನಸಾಮಾನ್ಯರನ್ನು ತಲುಪಲಿ ಎಂಬ ಅನಿಸಿಕೆಯೊಡನೆ.

"ಹೊಸ ಬೆಳೆ ಬೆಳೆಯುವಾಗ ಕಳೆ
ಬರುವುದು ಸಹಜ;
ನಾವು ಕಳೆಯನ್ನೆಲ್ಲಾ ತೆಗೆದು ಬೆಳೆ
ಮಾತ್ರ ಬೆಳೆಯುವುದು ನಿಜ."

-ಅಂಬಾಡಿಹಳ್ಳಿ, ಚನ್ನಪಟ್ಟಣ



ಅನಂತ ವಂದನೆಗಳು. ಮಾರ್ಚ್ 19 ರ ಪತ್ರಿಕೆಯ ವಿಶೇಷಾಂಕ ತುಂಬಾ ಅರ್ಥಪೂರ್ಣವಾಗಿ ಬಂದಿವೆ. ತಮ್ಮ ಸಂಪಾದಕೀಯದ 'ಸಾಮಾಜಿಕ ಜವಾಬ್ದಾರಿ'ಯ ಆಶಯ ಅಭಿನಂದನೀಯ.

ನನ್ನ 'ಇಂಗ್ಲಿಷ್ ಭಯ' ಕುರಿತ ಲೇಖನ ಪ್ರಕಟಿಸಿದ್ದಕ್ಕೆ ಕೃತಜ್ಞತೆಗಳು. ಪತ್ರಿಕೆಯ ಹೋದ ವರ್ಷದ ವಿಶೇಷಾಂಕದಲ್ಲಿಯು ನನ್ನ ಲೇಖನ ಪ್ರಕಟವಾಗಿತ್ತು. ಮತ್ತೆ ಈ ಸಲ ಬಂದಿದೆ. ವರ್ಷಕ್ಕೊಮ್ಮೆ ಪತ್ರಿಕೆಯಲ್ಲಿ ಕಾಣಿಸಿಕೊಂಡು 'ರಿನೀವಲ್' ಆಗ್ತಾ ಇದೀನಿ ಅನಿಸುತ್ತೆ. ವಿಶೇಷಾಂಕದ ಕಥೆ, ಲೇಖನಗಳು, ವಿಡಂಬನೆ ಎಲ್ಲ ಚೆನ್ನಾಗಿವೆ.


-ಸಿದ್ಧರಾಮ ಹೊನ್ಕಲ್
ಶಹಪೂರ

ಸೀತಾ V/s ಸೇತು:

'ಮಂಥನ'ವನ್ನು ಮುಗಿಸಿತೆ 'ಮುಕ್ತ'?

ಮಾಜಿ ಇನ್‌ಕಂಟ್ಯಾಕ್ಸ್ ಅಧಿಕಾರಿ ಹಾಗೂ ಹಾಲಿ ಕಿರುತೆರೆ ನಿರ್ದೇಶಕ ಸೇತುರಾಮ್ ನಿರ್ದೇಶನದ 'ಮಂಥನ' ಧಾರಾವಾಹಿಯು ಇದ್ದಕ್ಕಿದ್ದಂತೆ ಮುಗಿಯುತ್ತಿದೆ. ಆ ಧಾರಾವಾಹಿ ಈಗಾಗಲೇ 265 ಕಂತುಗಳನ್ನು ಮುಗಿಸಿದ್ದರೂ ಅದಿನ್ನೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿದೆಯಲ್ಲದೆ ಅದನ್ನು ಇನ್ನಷ್ಟು ದಿನ ಮುಂದುವರೆಸುವ ಸಾಕಷ್ಟು ಸರಕೂ ಇದೆ. ಹಾಗಿದ್ದರೂ ಅದನ್ನು ಹೀಗೆ 'ಅಕಾಲಿಕ'ವಾಗಿ ಅಂತ್ಯಗೊಳಿಸಲಾಗುತ್ತಿದೆ.

ಅಸಲಿಗೆ 'ಮಂಥನ'ವನ್ನು 'ಮುಕ್ತಾ'ಯ ಮಾಡುತ್ತಿರುವುದರ ಹಿಂದೆ ಟಿ.ಎನ್. ಸೀತಾರಾಮ್‌ರವರ ಕೈವಾಡವಿರಬಹುದೇ ಎಂಬ ಪ್ರಶ್ನೆ ಈಗ ಕಿರುತೆರೆ ಲೋಕದಲ್ಲಿ ವಿಹರಿಸುತ್ತಿರುವ ಗಾಳಿಸುದ್ದಿ.



ವಾಸ್ತವವಾಗಿ ಸೇತುರಾಮ್ ಪಳಗಿದ್ದೇ ಸೀತಾರಾಮ್‌ರವರ ಗರಡಿಯಲ್ಲಿ. ಅವರ ಬಹಳಷ್ಟು ಸೀರಿಯಲ್‌ಗಳಲ್ಲಿ ಸೇತುರಾಮ್‌ರವರಿಗೆ ಪ್ರಮುಖ ಪಾತ್ರಗಳು ಇದ್ದೇ ಇರುತ್ತಿದ್ದವು. ಆದರೆ ಕಳೆದ ವರ್ಷ ಸೀತಾರಾಮ್ ಮತ್ತೊಮ್ಮೆ ಸಿನಿಮಾ ಲೋಕದಲ್ಲಿ ತಮ್ಮ ಲಕ್ ಅನ್ನು ಪರೀಕ್ಷಿಸಲು ಹೋಗಿ 'ಮೀರಾ ಮಾಧವ ರಾಘವ' ಎಂಬ ಫ್ಲಾಪ್ ಚಿತ್ರವನ್ನು ನಿರ್ದೇಶಿಸಿದ್ದರು. ಆಗ ಸೇತುರಾಮ್ ಸ್ವತಂತ್ರವಾಗಿ 'ಮಂಥನ' ಧಾರಾವಾಹಿಯನ್ನು ನಿರ್ದೇಶಿಸುವ ಸಾಹಸಕ್ಕೆ ಕೈಹಾಕಿದರು. ಅದರಲ್ಲಿ ಯಶಸ್ವಿಯೂ ಆದರು. ತನ್ನ ವಿಭಿನ್ನ ಶೈಲಿಯ ಡೈಲಾಗ್‌ಗಳಿಂದಾಗಿ 'ಮಂಥನ' ಜನಪ್ರಿಯಗೊಂಡಿತು.

ಈಗ ಬಂದಿರುವ ಸುದ್ದಿ ಏನೆಂದರೆ, ಸಿನಿಮಾ ಮಾಡುವ ಸಾಹಸಕ್ಕೆ ಬೈ ಹೇಳಿರುವ ಸೀತಾರಾಮ್ ತಮ್ಮ ಯಶಸ್ವಿ ಧಾರಾವಾಹಿಯಾಗಿದ್ದ 'ಮುಕ್ತ'ದ ಎರಡನೆ ಕಂತನ್ನು ಪ್ರಾರಂಭಿಸಿದ್ದಾರೆ. ಅಷ್ಟೇ ಅಲ್ಲ, ಇದೇ ಉಗಾದಿಯ ದಿನದಂದೇ ಅದರ ಪ್ರಸಾರ ಪ್ರಾರಂಭವಾಗಲಿದೆಯಂತೆ. 'ಮಂಥನ' ಮುಂದುವರೆದರೆ ಅದು 'ಮುಕ್ತಾ-2'ಕ್ಕೆ ಹೊಡೆತ ಕೊಡುತ್ತದೆ, ಅದಕ್ಕೇ 'ಮಂಥನ'ವನ್ನು ಇದ್ದಕ್ಕಿದ್ದಂತೆ ನಿಲ್ಲಿಸಲಾಗುತ್ತಿದೆ ಎಂಬುದು ಹಲವರ ಆರೋಪ.

ಇದರ ಬಗ್ಗೆ ಸೇತುರಾಮ್‌ರವರನ್ನು ಕೇಳಿದರೆ ಅವರು ಹೇಳಿದ್ದು ಇಷ್ಟು: "ಈ ಟಿವಿ ಚಾನಲ್‌ನವರು 300 ಎಪಿಸೋಡುಗಳಿಗೆ ನಮ್ಮೊಂದಿಗೆ ಅಗ್ರಿಮೆಂಟ್ ಮಾಡಿಕೊಂಡಿದ್ದರು. ನಮಗೂ ಇದನ್ನು ಸುಮ್ಮನೆ ಎಳೆಯಬಾರದು ಅನ್ನಿಸಿದ್ದರಿಂದ ನಿಲ್ಲಿಸುತ್ತಿದ್ದೇವೆ." ಆದರೆ ಸೇತುರಾಮ್ ಹೇಳದೇ ಇರುವ ಅಂಶ ಯಾವುದೆಂದರೆ ಈ ಹಿಂದೆ ಹಲವಾರು ಧಾರಾವಾಹಿಗಳು ಬೋರ್ ಹೊಡೆಸುವ ತನಕ ಮುಂದುವರೆದಿವೆಯಲ್ಲದೆ, 'ಮಂಥನ' ತಂಡಕ್ಕೆ "ಇನ್ನು ಮೂರು ದಿನಗಳಲ್ಲಿ ಮುಗಿಸಿಬಿಡಿ" ಎಂದು ಆದೇಶಿಸಿರುವುದು.

ಇನ್ನೂ ಕುತೂಹಲಕಾರಿ ಅಂಶ ಯಾವುದೆಂದರೆ, ಕಳೆದ ಎರಡು ವಾರಗಳಿಂದ ಅದೇ ಚಾನೆಲ್‌ನಲ್ಲಿ ಪ್ರಸಾರವಾಗುವ ಧಾರಾವಾಹಿಗಳ ಬಗ್ಗೆ ಜನಾಭಿಪ್ರಾಯ ಪಡೆಯುವ 'ನಮ್ಮ ನಿಮ್ಮಲ್ಲಿ' ಎಂಬ ಕಾರ್ಯಕ್ರಮ ಪ್ರಾರಂಭವಾಗಿದೆ. ಆ ಕಾರ್ಯಕ್ರಮದ ಮೊದಲನೇ ಕಂತಿನಲ್ಲಿ 'ಮಂಥನ' ಧಾರಾವಾಹಿಯ ಬಗ್ಗೆ ಜನರ ಅಭಿಪ್ರಾಯಗಳನ್ನು ಪ್ರಸಾರ ಮಾಡುವುದೆಂದು ನಿರ್ಧರಿಸಲಾಗಿತ್ತು, ಆದರೆ ಅದ್ಯಾಕೋ ಕೊನೆ ಗಳಿಗೆಯಲ್ಲಿ 'ಮಂಥನ'ವನ್ನು ಕೈಬಿಟ್ಟ ಚಾನೆಲ್‌ನವರು ಟಿ.ಎನ್.ಸೀತಾರಾಮ್‌ರವರ ಆಪ್ತ ಮಿತ್ರನಾದ ರವಿ ಬೆಳಗೆರೆಯ ಭಾವನಾ ಕ್ರಿಯೇಷನ್ಸ್‌ನ 'ರಾಧಾ' ಎಂಬ ಕೋಪ್ಪು ಧಾರಾ ವಾಹಿಯ ಬಗ್ಗೆ ಜನಾಭಿಪ್ರಾಯವನ್ನು 'ಸೃಷ್ಟಿಸಿ' ಪ್ರಸಾರ ಮಾಡಿದರು! ■



ಅಂಬಾರಿ ಏರಿದ ಲೂಸ್ ಮಾದ

'ನಂದ ಲವ್ಸ್ ನಂದಿತಾ' ಸಿನಿಮಾದ ಲೂಸ್ ಮಾದ ಯಾನೆ ಯೋಗೇಶ್ ನಾಯಕನಾಗಿ ನಟಿಸುತ್ತಿರುವ 'ಅಂಬಾರಿ' ಚಿತ್ರ ಮೊನ್ನೆ ಸೆಟ್ಟೇರಿದೆ. ಇದು ಕೂಡಾ ಒಂದು ರೀತಿಯಲ್ಲಿ 'ನಂ ಲ ನಂ' ರೀತಿಯಲ್ಲೇ ಇರುತ್ತದೆ ಎಂದು ಅದನ್ನು ನಿರ್ಮಿಸುತ್ತಿರುವ ಯೋಗೇಶನ ತಂದೆ ಸಿದ್ದರಾಜು ಹೇಳಿದರು. ಈ ಚಿತ್ರ ಮುಗಿಯುವಷ್ಟರಲ್ಲಿ ಯೋಗೇಶ್ ನಟನೆಯ ಮತ್ತೊಂದು ಚಿತ್ರ ಸೆಟ್ಟೇರಲಿದ್ದು ಅದನ್ನು ನಾಗತಿಹಳ್ಳಿಯವರ ಒಂದು ಕಾಲದ ಪಟ್ಟದ ಶಿಷ್ಯ ಗೋಪಿ ಪೀಣ್ಯ ನಿರ್ದೇಶಿಸಲಿದ್ದಾರೆ.

ಆದರೆ ಪೋರ್ಕಿ ಹುಡುಗನ ಚೆಲ್ಲಾಟ, ಚಪ್ಪೋರಿ ಹುಡುಗನ ಅರಚಾಟ, ಅಬ್ಬೇಪಾರಿಯ ಅಲೆದಾಟವನ್ನು ಅದೆಷ್ಟು ದಿನ ಪ್ರೇಕ್ಷಕರು ಸಹಿಸುತ್ತಾರೆ? ಎಂಬ ಪ್ರಶ್ನೆ ಯಾರನ್ನೂ ಕಾಡದೇ ಇರುವುದು ವಿಚಿತ್ರವಾಗಿದೆ.

ಮೊಗ್ಗಿನ ಮನಸ್ಸಿನ ವಿವಾದದ ಸುತ್ತ



ಏಕೋ ಏನೋ 'ಮೊಗ್ಗಿನ ಮನಸ್ಸು'ಗಳ ನಸೀಬೇ ಚೆನ್ನಾಗಿದ್ದಂತಿಲ್ಲ. ಅರಳುವ ಮುನ್ನ ಒಂದಲ್ಲಾ ಒಂದು ತಾಪತ್ರಯಗಳು ಬಂದೊದಗುತ್ತಿವೆ. 'ಮನಸ್ಸು' ಆರಂಭವಾಗುತ್ತಿದ್ದಂತೇ ಎಸ್.ವಿ. ರಾಜೇಂದ್ರ ಸಿಂಗ್ ಬಾಬುರಂಥ ಹಿರಿ ತಲೆ 'ಈ ಚಿತ್ರದ ಕಥೆ ನನ್ನದು. ಶಶಾಂಕ್ ಈ ಕಥೆಯನ್ನು ಕದ್ದು ಸಿನಿಮಾ ಮಾಡುತ್ತಿದ್ದಾರೆ' ಎಂದು ಖ್ಯಾತೆ ತೆಗೆದಿದ್ದರು. ಈಗ ನೋಡಿದರೆ ಬಿಡುಗಡೆಯ ದಿನವೇ ಚಿತ್ರ ರದ್ದಾಗಿ ಚಿತ್ರತಂಡದವರ ನಿದ್ದೆ ಕೆಡಿಸಿದೆ.

ಈ ಸಂದರ್ಭದಲ್ಲಿ 'ಮೊಗ್ಗಿನ ಮನಸ್ಸಿ'ನ ನಿರ್ದೇಶಕ ಶಶಾಂಕ್‌ರನ್ನು 'ಲಂಕೇಶ್' ಮಾತನಾಡಿಸಿತು.

■ *ನಿಮ್ಮ 'ಮೊಗ್ಗು' ಅರಳುವ ಮುನ್ನವೇ ಯಾಕೆ ಹೀಗೆ ಬಾಡುತ್ತಿದೆ?*

ಮನೆಮಂದಿಯೆಲ್ಲಾ ಬಂದು ನೋಡುವಂತಹ ಸಿನಿಮಾವನ್ನು ಮಾಡಿದ್ದೇನೆ. ಆದರೂ ಯಾವುದೇ ಅಶ್ಲೀಲತೆಯಿಲ್ಲದ ಸಿನಿಮಾಗೆ ಸೆನ್ಸಾರ್‌ನವರು 'ಎ' ಸರ್ಟಿಫಿಕೇಟ್ ನೀಡಿದ್ದಾರೆ. ಅದರ ವಿರುದ್ಧ ನಾವು ಪ್ರತಿಭಟಿಸಿದ್ದೇವೆ.

■ *ಸರ್ಟಿಫಿಕೇಟ್ ಯಾವುದಾದರೇನು ಸಿನಿಮಾಗೆ, ಚಿತ್ರ ಚೆನ್ನಾಗಿದ್ದರೆ ನಿಲ್ಲುತ್ತಲ್ಲಾ?*

ನನ್ನ ಪ್ರಕಾರ ಸಿನಿಮಾದ ಯಶಸ್ಸಿಗೆ ಸರ್ಟಿಫಿಕೇಟ್ ಬಹಳ ಮುಖ್ಯ. ನಮ್ಮ ಚಿತ್ರಕ್ಕೆ 'ಎ' ಸರ್ಟಿಫಿಕೇಟ್ ನೀಡಲಾಗಿದೆ ಎಂದುಕೊಂಡು ಇದನ್ನು ನೋಡಲು ಬರುವ ಪಡ್ಡೆ ಹುಡುಗರಿಗೆ ಯಾವ ಕಾರಣಕ್ಕೂ ಈ ಚಿತ್ರ ಇಷ್ಟವಾಗುವುದಿಲ್ಲ. ಹಾಗೆಯೇ ಇದರಲ್ಲಿ ಯಾವ ಅಶ್ಲೀಲತೆ ಇಲ್ಲದಿದ್ದರೂ, ಲಾಂಗು, ಮಚ್ಚುಗಳು, ಹೊಡೆದಾಟಗಳು ಇಲ್ಲದಿದ್ದರೂ ಇದಕ್ಕೆ 'ಎ' ಸರ್ಟಿಫಿಕೇಟ್ ಇರೋದ್ರಿಂದ ಸಭ್ಯರು ಥಿಯೇಟರ್‌ಗೆ ಬರುವುದಿಲ್ಲ.



■ *ಹಾಗಾದರೆ ನಿಮ್ಮ ಚಿತ್ರದಲ್ಲಿರೋದೇನು?*

ಶಾಲೆಯನ್ನು ಮುಗಿಸಿ ಆಗತಾನೆ ಕಾಲೇಜಿಗೆ ಸೇರುವ 16ರ ಹದಿಹರೆಯದ ಹುಡುಗಿಯರು ಯಾವ ರೀತಿ ಪ್ರೀತಿ ಪ್ರೇಮಗಳ ಪಾಶಕ್ಕೆ ಸಿಲುಕುತ್ತಾರೆ, ಹೀಗೆ ಲವ್‌ಗೆ ಬಿದ್ದ ಹುಡುಗಿಯರು ತಮ್ಮ ಬಾಳನ್ನು ಹಾಳುಮಾಡಿಕೊಳ್ಳುತ್ತಾರೆ, ಇದರಿಂದ ಅವರ ಮನೆಯವರಿಗೆ ಆಗುವ ಆತಂಕ, ದುಗುಡ, ಪರಿಹಾರಗಳನ್ನು ಇಟ್ಟುಕೊಂಡು ಈ ಚಿತ್ರವನ್ನು ನಿರೂಪಿಸಿದ್ದೇನೆ. ಈ ಕಾರಣಕ್ಕಾಗೇ ನಾನು ಈ ಸಿನಿಮಾದ ಟೈಟಲ್‌ನೊಂದಿಗೆ 'ಎ ಸ್ಪೆಷಲ್ ಫಿಲ್ಮ್ ಫಾರ್ ಗರ್ಲ್ಸ್' ಎಂದು ಬರೆಸಿದ್ದೇನೆ. ಇಂಥದರಲ್ಲಿ 'ಎ' ಸರ್ಟಿಫಿಕೇಟ್ ಇದೆ ಅಂದರೆ ಯಾವ ಹುಡುಗಿಯರು ಸಿನಿಮಾಗೆ ಬರುತ್ತಾರೆ? ಇನ್ನು ಮನೆಮಂದಿಯೆಲ್ಲಾ ಬರುವ ಮಾತೇ ಇಲ್ಲ. ಒಟ್ಟಾರೆ ಈ ಸರ್ಟಿಫಿಕೇಟ್ ಪ್ರೇಕ್ಷಕರಿಗೆ ರಾಂಗ್ ಇನ್ಫರ್ಮೇಶನ್ ನೀಡುವುದರಿಂದ ಸಹಜವಾಗೇ ಚಿತ್ರಕ್ಕೆ ಪೆಟ್ಟು ಬೀಳುತ್ತದೆ.


ಇನ್ನು ಪಿವಿಆರ್‌ಗಳಲ್ಲಂತೂ ಹದಿನೆಂಟು ವಯಸ್ಸಿಗಿಂತ ಕೆಳಗಿನವರಿಗೆ ಸಿನಿಮಾ ಮಂದಿರದ ಒಳಗೆ ಪ್ರವೇಶವೇ ನೀಡುವುದಿಲ್ಲ. ನನ್ನ ಮೆಸೇಜ್ ಆ ವಯಸ್ಸಿನ ಹೆಣ್ಣುಮಕ್ಕಳಿಗೆ ತಲುಪುವುದಾದರೂ ಹೇಗೆ? ನಾನು ಯಾರಿಗಾಗಿ ಸಿನಿಮಾ ಮಾಡಿದ್ದೇನೆ ಅವರೇ ಸಿನಿಮಾ ನೋಡಲು ಆಗುವುದಿಲ್ಲವೆಂದ ಮೇಲೆ ನಾನು ಸಿನಿಮಾ ಮಾಡಿ ಸಾಧಿಸಿದ್ದಾದರೂ ಏನನ್ನ? ಎಂಬ ಕೊರಗು ನನ್ನದು.

■ *ಹಾಗಾದರೆ ಬೇರೆಯವರಿಗೆ ತೊಂದರೆ ಕೊಡದ ಸೆನ್ಸಾರ್‌ನವರು ನಿಮಗೇ ಯಾಕೆ ತೊಂದರೆ ಕೊಡುತ್ತಿದ್ದಾರೆ ಅನ್ನಿಸುತ್ತೆ?*

ನೋಡಿ, ನನ್ನ ಸಿನಿಮಾದಲ್ಲಿ ಸೆಕ್ಸ್ ಬಗೆಗಿನ ಒಂದೇ ಒಂದು ಎಕ್ಸ್‌ಪ್ರೆಶನ್ ಕೂಡಾ ಇಲ್ಲ. ಸಿನಿಮಾದ ನಾಲ್ಕು ಮಂದಿ ನಾಯಕಿಯರು ಎಲ್ಲೂ ತುಂಡುಡುಗೆಯನ್ನು ತೊಟ್ಟಿಲ್ಲ. 'ಮುಂಗಾರು ಮಳೆ'ಯಲ್ಲಿ ಪೂಜಾ ಗಾಂಧಿ ತೊಟ್ಟಿರುವುದಕ್ಕಿಂತಲೂ ಹೆಚ್ಚಾಗೇ ಬಟ್ಟೆ ತೊಟ್ಟಿದ್ದಾರೆ. 'ಚೆಲುವಿನ ಚಿತ್ತಾರ'ದಲ್ಲಿ ಹೈಸ್ಕೂಲಿನಲ್ಲಿ ಓದುತ್ತಿರುವ ಅಪ್ರಾಪ್ತ ಬಾಲಕಿಯನ್ನು ಬಳಸಿಕೊಂಡಿದ್ದಕ್ಕೆ ಪ್ರಮೀಳಾ ನೇಸರ್ಗಿ ಗಲಾಟೆ ಮಾಡಿದ್ರಲ್ಲ, ಆಗ ಸೆನ್ಸಾರ್‌ನವರು ತಮ್ಮ ರೂಲ್ಸ್‌ಅನ್ನು ಛೇಂಜ್ ಮಾಡಿಕೊಂಡಿದ್ದಾರಂತೆ. ಅದಕ್ಕೆ ಈಗ ನಮ್ಮ ಚಿತ್ರಕ್ಕೆ 'ಎ' ಸರ್ಟಿಫಿಕೇಟ್ ನೀಡಿದ್ದಾರಂತೆ.

■ *ಈ ವಿವಾದದ ಬಗ್ಗೆ ನಿಮ್ಮ ಪ್ರೊಡ್ಯೂಸರ್ ಕೃಷ್ಣಪ್ಪನವರ ನಿಲುವೇನು? ಅವರು ಸೆನ್ಸಾರ್ ಆಫೀಸರ್ ಚಂದ್ರಶೇಖರ್‌ರವರನ್ನೇ ಗದರಿಸಿದರಂತಲ್ಲಾ?*

ಸಿನಿಮಾ ಆರಂಭವಾಗುವ ಮುನ್ನವೇ ನಮ್ಮ ಪ್ರೊಡ್ಯೂಸರ್ ಕೃಷ್ಣಪ್ಪನವರು ಹಲವಾರು ನಿಬಂಧನೆಗಳನ್ನು ಹಾಕಿದ್ದರು. ಮೊದಲನೆಯದಾಗಿ ಇಲ್ಲಿನ ಪ್ರತಿಭೆಗಳನ್ನು ನಾವು ಪ್ರೋತ್ಸಾಹಿಸಬೇಕಿರುವುದರಿಂದ ಚಿತ್ರದ ಎಲ್ಲ ನಾಯಕಿಯರೂ ಕನ್ನಡದವರೇ ಆಗಿರಬೇಕು. ಎರಡನೆಯದಾಗಿ, ಚಿತ್ರದಲ್ಲಿ ನಾಯಕಿಯರು ಎಲ್ಲೂ ತುಂಡುಡುಗೆ ತೊಡಬಾರದು. ಮೂರನೆಯದಾಗಿ, ಸಿನಿಮಾವನ್ನು ಮನೆಮಂದಿಯೆಲ್ಲಾ ಯಾವ ಮುಜುಗರವೂ ಇಲ್ಲದೆ ನೋಡುವಂತಿರಬೇಕು. ಇದೆಷ್ಟು ಕೃಷ್ಣಪ್ಪನವರ ಆಜ್ಞೆಯಾಗಿದ್ದರಿಂದ ನಾವೇ ಮೊದಲೇ ಸೆಲ್ಫ್ ಸೆನ್ಸಾರ್ ಮಾಡಿಕೊಂಡಿದ್ದೆವು. ಕೃಷ್ಣಪ್ಪನವರ ಆಸೆಯಂತೆ ನಾನು ಎಲ್ಲೂ ಅವರಿಗೆ ಕೊಟ್ಟಿದ್ದ ಮಾತಿನಿಂದ ತಪ್ಪಿಸಿಕೊಂಡಿಲ್ಲ. ಎಲ್ಲೂ ಅಶ್ಲೀಲತೆಯ ಸೋಂಕನ್ನು ತಾಗಿಸಿಲ್ಲ. ಹಾಗಿದ್ದರೂ ಸೆನ್ಸಾರ್‌ನವರು 'ಎ' ಸರ್ಟಿಫಿಕೇಟ್ ನೀಡಿರುವುದು ಕೃಷ್ಣಪ್ಪನವರಿಗೆ ಮತ್ತು ಕಾರ್ಯಕಾರಿ ನಿರ್ಮಾಪಕ ಗಂಗಾಧರ್‌ರವರಿಗೆ ಬಹಳ ಬೇಜಾರಾಗಿದೆ. ಈ ಕಾರಣದಿಂದಲೇ ಕೃಷ್ಣಪ್ಪನವರು ಚಂದ್ರಶೇಖರ್ ಬಳಿ ಸ್ವಲ್ಪ ಖಾರವಾಗಿ ಮಾತನಾಡಿದ್ದಾರೆ. ಈ ಕಾರಣಕ್ಕಾಗಿ ಚಂದ್ರಶೇಖರ್ ವಾಣಿಜ್ಯ ಮಂಡಳಿಗೆ ದೂರನ್ನು ನೀಡಿದ್ದಾರೆ.



■ *ಈ ಸರ್ಟಿಫಿಕೇಟ್ ಸಮರಕ್ಕೆ ಕೊನೆ ಎಂದು?*

ಸದ್ಯಕ್ಕೆ ಚಂದ್ರಶೇಖರ್ ದೆಹಲಿಯಲ್ಲಿದ್ದಾರಂತೆ. ಅವರು ಬಂದ ನಂತರವಷ್ಟೇ ಅಂತಿಮ ತೀರ್ಮಾನ ಹೊರಬೀಳಲಿದೆ. ಒಂದು ವೇಳೆ ಇಲ್ಲೇ ಸಮಸ್ಯೆ ಬಗೆಹರೆಯದಿದ್ದರೆ, ಟ್ರಿಬ್ಯೂನಲ್‌ಗೆ ಹೋಗಿಯಾದರೂ ಚಂದ್ರಶೇಖರ್ ಅವರ ವಿತಂಡವಾದದ ವಿರುದ್ಧ ನ್ಯಾಯ ದೊರಕಿಸಿಕೊಳ್ಳುವ ಆಶಯ ನಮ್ಮದು.

■ *ಈ ವಿವಾದ ಚಿತ್ರ ತಂಡದ ಮೇಲೆ ಬೀರುವ ಪರಿಣಾಮ ಎಂತಹದ್ದು?*

ಕೃಷ್ಣಪ್ಪನವರು ನನ್ನನ್ನು ನಂಬಿ ಈ ಸಿನಿಮಾಗೆ ಮೂರು ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದಾರೆ. ಅವರಿಗೆ ಅದೇನು ದೊಡ್ಡ ವಿಷಯವಲ್ಲ. ಹೋದ್ರೆ ಹೋಯ್ತು ಅಂತ ಸುಮ್ಮನಾಗುತ್ತಾರೆ. ಆದರೆ ನಮ್ಮಂತಹವರ ಬದುಕು ಏನಾಗುತ್ತೆ ಹೇಳಿ? ಸದಭಿರುಚಿಯ ಸಿನಿಮಾಗಳನ್ನು ಮಾಡಲು ಹೋಗಿ ಇಂತಹ ತೊಂದರೆಗಳಲ್ಲಿ ಸಿಲುಕಿಕೊಳ್ಳುವುದು ಬೇಡ, ಬದಲಾಗಿ ನಾವು ಕೂಡ ಲಾಂಗು ಮಚ್ಚುಗಳನ್ನು ವೈಭವೀಕರಿಸುವ, ಐಟಂ ಸಾಂಗುಗಳನ್ನು ತೋರಿಸುವ ಮಸಾಲೆ ಸಿನಿಮಾಗಳನ್ನು ಮಾಡಿದ್ದರೆ ಸರಿಯೇನೋ ಅನ್ನಿಸುವುದಿಲ್ಲವೆ? ಆದರೆ ಅಂಥದ್ದಕ್ಕೆಲ್ಲ ನಮ್ಮ ಮನಸ್ಸು ಒಪ್ಪಬೇಕಲ್ಲಾ?

ಸಂದರ್ಶನ : ಅರುಣ್.ಬಿ

R B P LANKESH, Kannada Weekly Price Rs. 12/- 2-4-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B lore-4.



ಕಂಡಕ್ಟರ್ 'ಕುಚೇಲ'ನೊಂದಿಗೆ ಡ್ರೈವರ್ ರಾಜ

ರಜನಿಕಾಂತ್ ನಟಿಸಿರುವ, ಶಂಕರ್ ನಿರ್ದೇಶಿಸಿರುವ ಅದ್ದೂರಿಯ ಮತ್ತು ಮಹತ್ವಾಕಾಂಕ್ಷೆಯ 'ರೋಬೋಟ್' ಚಿತ್ರ ಬಿಡುಗಡೆಗೊಳ್ಳುವ ಮುನ್ನವೇ ರಜನಿಯ ಮತ್ತೊಂದು ಚಿತ್ರ ಸೆಟ್ಟೇರಿರುವುದು ಅವರ ಅಭಿಮಾನಿಗಳಲ್ಲಿ ರೋಮಾಂಚನ ಉಂಟುಮಾಡಿದೆ. ಇದಕ್ಕಿಂತ ಪುಳಕ ನೀಡುವ ವಿಷಯವೆಂದರೆ ಆ ಚಿತ್ರದಲ್ಲಿ ರಜನಿಕಾಂತ್ ಕಂಡಕ್ಟರ್ ಪಾತ್ರದಲ್ಲಿ ನಟಿಸಲಿದ್ದಾರೆ. ಇನ್ನೂ ಒಂದು ವಿಶೇಷವೆಂದರೆ ಸಿನಿಮಾಕ್ಕೆ ಬರುವ ಮುನ್ನ ಬೆಂಗಳೂರಿನ ಶಿವಾಜಿನಗರದಿಂದ ಮೆಜೆಸ್ಟಿಕ್‌ಗೆ ಹೋಗುವ ಯಾವ ಬಸ್ಸಿನಲ್ಲಿ ರಜನಿ ಕಂಡಕ್ಟರ್ ಆಗಿದ್ದರೋ ಅದೇ ಬಸ್ಸಿನ ಡ್ರೈವರ್ ಆಗಿದ್ದ ವ್ಯಕ್ತಿಯೇ ಈ ಚಿತ್ರದಲ್ಲೂ ಡ್ರೈವರ್ ಪಾತ್ರವನ್ನು ನಿರ್ವಹಿಸಲಿದ್ದಾರೆ. ಆತ ರಜನಿಕಾಂತರ ಜೀವದ ಗೆಳೆಯ ರಾಜ್‌ಬಹದ್ದೂರ್. ಅಂದರೆ ರಿಯಲ್ ಲೈಫಲ್ಲಿ ಕಂಡಕ್ಟರ್ ಮತ್ತು ಡ್ರೈವರ್ ಆಗಿ ಸ್ನೇಹಿತರಾಗಿದ್ದ ರಜನಿ ಮತ್ತು ರಾಜ್ ಈಗ ರಿಯಲ್ ಲೈಫಲ್ಲೂ ಅದೇ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಈ ಚಿತ್ರವನ್ನು ತಮಿಳಿನ ಖ್ಯಾತ ನಿರ್ದೇಶಕ ಪಿ. ವಾಸು ನಿರ್ದೇಶಿಸುತ್ತಿದ್ದಾರೆ. ಚಿತ್ರದ ಹೆಸರು ಕುಚೇಲನ್.

ಸೈಟು ಕೊಡ್ತಾರಾ ಕೊಬ್ರಿ?



'... ಮಲ್ಲಿಗೆ'ಯನ್ನು ಮಾತನಾಡಿಸುವಲ್ಲಿ ಸೋತ ನಿರ್ಮಾಪಕ ಕೊಬ್ರಿ ಮಂಜು ಈಗ 'ಅರಮನೆ'ಯಲ್ಲಿ ಕೂತು ತಾವೂ ಕನಸು ಕಾಣುತ್ತಾ, ಇತರರಿಗೂ ಕನಸುಗಳನ್ನು ಹಂಚುತ್ತಾ ಕೂತಿದ್ದಾರೆ. ಈಗ ಬಿಡುಗಡೆಗೆ ರೆಡಿಯಾಗಿರುವ ಅವರ ನಿರ್ಮಾಣದ 'ಅರಮನೆ' ಗೆದ್ದರೆ ಅವರು ಎರಡು ಎಕರೆ ಜಮೀನನ್ನು ಖರೀದಿಸಿ ಅದರ ಒಂದು ಎಕರೆ ಜಾಗದಲ್ಲಿ ಸ್ಟುಡಿಯೋ ನಿರ್ಮಿಸುತ್ತಾರಂತೆ. ಇದು ಮಂಜು ಕಾಣುತ್ತಿರುವ ಕನಸು. ಹಾಗೆಯೇ ಇನ್ನೊಂದು ಎಕರೆ ಜಾಗದಲ್ಲಿ ಪತ್ರಕರ್ತರಿಗೆ ಸೈಟುಗಳನ್ನು ಹಂಚುತ್ತಾರಂತೆ. ಇದು ಅವರು ಪತ್ರಕರ್ತರಿಗೆ ಹಂಚುತ್ತಿರುವ ಕನಸು.

"ಅಲ್ಲ, ಒಂದೆಕರೆಯಲ್ಲಿ ಅದೆಷ್ಟು ಸೈಟುಗಳನ್ನು ನಿರ್ಮಿಸುತ್ತೀರಿ? ಎಷ್ಟು ಜನಕ್ಕೆ ಹಂಚುತ್ತೀರಿ?" ಅಂತ ಕೇಳಿದರೆ ಮಂಜು ಕೊಡುವ ಉತ್ತರ "ಲಕ್ಕಿ ಡಿಪ್ ಮಾಡ್ತೀನಿ. ಅದರಲ್ಲಿ ಲಕ್ ಇದ್ದವರಿಗೆ ಸೈಟ್ ಸಿಗುತ್ತೆ."

ಹೇಳಿ ಕೇಳಿ ಕೊಬ್ರಿ ಮಂಜು ಮಹಾನ್ ಬಂಡಲ್ ಗಿರಾಕಿ. ಅದು ಪತ್ರಕರ್ತರಿಗೆ ಗೊತ್ತಿದ್ದರೂ "ಹಲವು ಮುಗ್ಧರು ಈಗ ಮಂಜು ಕೊಡಲಿರುವ ಸೈಟಿನಲ್ಲಿ ತಮ್ಮ 'ಅರಮನೆ'ಯನ್ನು ಕಟ್ಟಿಸುವ ಕನಸು ಕಾಣುತ್ತಿರುವುದು ಸುಳ್ಳಲ್ಲ.

ರಣಬೀರ್‌ನ ಪ್ರೇಮ ಅಪ್ಪುಗೆಯಲ್ಲಿ ದೀಪಿಕಾ



ಕನ್ನಡದ ಕುವರಿ ದೀಪಿಕಾ ಪಡುಕೋಣೆ ಬಾಲಿವುಡ್‌ನಲ್ಲಿ ಈಗ ಎಷ್ಟು ಚಾಲ್ತಿಯಲ್ಲಿದ್ದಾಳೆಂದರೆ ಕೆಲ ದಿನಗಳ ಹಿಂದೆ ಅವಳ ಹೆಸರು ಕ್ರಿಕೆಟ್ಟಿಗ ಮಹೇಂದ್ರಸಿಂಗ್ ದೋನಿಯೊಂದಿಗೆ ಬೆಸೆದುಕೊಂಡಿತ್ತು. ಆದರೆ ದೋನಿ ಒಂದು 20-20 ಮ್ಯಾಚ್ ಮುಗಿಸಿ ಪೆವಿಲಿಯನ್‌ಗೆ ಹಿಂದಿರುಗುವ ಮುನ್ನವೇ ದೀಪಿಕಾ ಮತ್ತೊರ್ವ ಕ್ರಿಕೆಟ್ಟಿಗ ಯುವರಾಜ್‌ನೊಂದಿಗೆ ಸರಸಕ್ಕೆ ಇಳಿದಿದ್ದಳು.

ಆತನ ಹುಟ್ಟುಹಬ್ಬವನ್ನು ಆಸ್ಟ್ರೇಲಿಯಾದಲ್ಲಿ ಅವನೊಂದಿಗೆ ಆಚರಿಸಿದ ದೀಪಿಕಾ ಮುಂಬೈಗೆ ಹಿಂದಿರುಗುತ್ತಿದ್ದಂತೆ ಯುವರಾಜ್ ತಾಯಿಯೊಂದಿಗೆ ಒಂದು ಬಾಡಿಗೆ ಮನೆಗಾಗಿ ಹುಡುಕಲಾರಂಭಿಸಿದ್ದಳು. ಅದನ್ನು ಕಂಡು ಎಲ್ಲರೂ ಸದ್ಯದಲ್ಲೇ ಯುವರಾಜ್‌ನನ್ನು ದೀಪಿಕಾ ಮದುವೆಯಾಗಲಿದ್ದಾಳೆ ಎಂದೇ ಭಾವಿಸಿದ್ದರು.

ಬಾಡಿಗೆ ಮನೆ ಸಿಕ್ಕಿತ್ತೋ, ಇಲ್ಲವೋ ಗೊತ್ತಿಲ್ಲ, ಆದರೆ ದೀಪಿಕಾ ಯುವರಾಜ್‌ನಿಗೂ ಕೈಕೊಟ್ಟು ಈಗ ರಣಬೀರ್ ಕಪೂರ್ ಎಂಬಾತನೊಂದಿಗೆ ಪ್ರೀತಿ, ಪ್ರೇಮದ ಆಟದಲ್ಲಿ ತೊಡಗಿದ್ದಾಳೆ. ಈ ರಣಬೀರ್ ಕಪೂರ್ ಬೇರಾರೂ ಅಲ್ಲ, ಇತ್ತೀಚೆಗೆ ಬಿಡುಗಡೆಗೊಂಡಿದ್ದ 'ಸಾವರಿಯಾ' ಚಿತ್ರದ ಹೀರೋ ಮತ್ತು ಹಿಂದಿ ಚಿತ್ರೋದ್ಯಮದ 'ಪ್ರಥಮ' ವಂಶ ಎಂದೇ ಪರಿಗಣಿಸಲ್ಪಡುವ 'ಕಪೂರ್' ಖಾನ್‌ದಾನದ ಕುಡಿ. ದೀಪಿಕಾ ಪಡುಕೋಣೆ ಮತ್ತು ಐಶ್ವರ್ಯ ರೈ ನಡುವೆ ಹಲವಾರು ಸಾಮ್ಯತೆಗಳಿವೆ. ಇಬ್ಬರೂ ಅಪ್ರತಿಮ ಸುಂದರಿಯರು. ಇಬ್ಬರೂ ಮಾಡಲಿಂಗ್ ಜಗತ್ತಿನಿಂದ ಸಿನಿಮಾ ಲೋಕಕ್ಕೆ ಬಂದವರು. ಇಬ್ಬರೂ ಕೆಲಕಾಲದಲ್ಲೇ ಹಲವಾರು ಪುರುಷರನ್ನು ತಮ್ಮ ಕಿರುಬೆರಳಿನ ಮೇಲೆ ಸುತ್ತಾಡಿಸಿದವರು.

ನೆನಪಿದೆಯೇ, ಹಿಂದೆ ಐಶ್ವರ್ಯ ರೈ ಕೂಡ ಮೊದಲು ಸಲ್ಮಾನ್ ಖಾನ್, ಆಮೇಲೆ ವಿವೇಕ್ ಓಬರಾಯ್ ಎಂದೆಲ್ಲಾ ತಿರುಗಾಡಿ ಕೊನೆಗೆ ಅಭಿಷೇಕ್ ಬಚ್ಚನ್‌ನನ್ನು ಮದುವೆಯಾದಳು. ಈಗ ಪ್ರೇಮ ಸಲ್ಲಾಪದಲ್ಲೂ ದೀಪಿಕಾ ಎಂಬ ರಂಭೆ ಐಶ್ವರ್ಯ ರೈ ಎಂಬ ಮೇನಕೆಯ ಹಾದಿ ಹಿಡಿದಿದ್ದಾಳೆ ಎನ್ನಿಸದೇ ಇರದು.

ಗಣೇಶನ ಹೊಸ ಗೆಟಪ್ಪು!



'ಚೆಲ್ಲಾಟ'ದಿಂದ 'ಗಾಳಿಪಟ' ತನಕ ಬರೀ ಲವರ್ ಬಾಯ್ ಆಗಿ ಕಾಣಿಸಿಕೊಂಡಿರುವ ಕಾಮಿಡಿ ಗಣೇಶನ ಏಕತಾನತೆಯಿಂದ ಜನರಿಗೆ ಬೋರ್ ಹೊಡೆಯ ತೊಡಗಿದೆ. ಅದ್ದರಿಂದ ಈಗ 'ಅರಮನೆ' ಚಿತ್ರದಲ್ಲಿ ಆತ ಹಲವಾರು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾನಂತೆ. ಅವು ಎಂತಹ ಪಾತ್ರಗಳೆಂದರೆ ಜೋಕರ್, ಚಾರ್ಲಿ, ರಾಜ್‌ಕಪೂರ್, ಅಪ್ಪುರಾಜ, ಫೋಟೋಗ್ರಾಫರ್ ತರಹದ ಏಳು ಪಾತ್ರಗಳು. ಆದರೆ ಈ ಎಲ್ಲಾ ಪಾತ್ರಗಳು ಬಂದುಹೋಗುವುದು ಒಂದು ಹಾಡಿನಲ್ಲಿ ಮಾತ್ರ.

ಅಲ್ಲಾ ಗಣೇಶಾ, ನಿನ್ನ ಚಿತ್ರಗಳಲ್ಲಿ ಸ್ವಲ್ಪ ನಟನೆ, ಕೊಂಚ ವೈವಿಧ್ಯತೆ ಇರಲಿ ಅಂತ ಆಶಿಸಿದರೆ, ನೀನು ಜನರನ್ನ ಹೀಗೆ ಮಂಗ್ಯಾ ಮಾಡೋದು ಸರೀನಾ?



ಕಾಸಿಗಾಗಿ ಕುಣಿತ!

ಇದೊಂದು ಗಾಬರಿ ಹುಟ್ಟಿಸುವ ವಿಷಯವೂ ಹೌದು, ರಾಬರಿ ಮಾಡಲೆತ್ನಿಸಿದ ವಿಷಯವೂ ಹೌದು.

ಮೊನ್ನೆ ಉದಯ ಟೀವಿಯವರು ತಮ್ಮ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಸಮಾರಂಭವನ್ನು ಬೆಂಗಳೂರು ಅರಮನೆ ಮೈದಾನದಲ್ಲಿ ನಡೆಸಿದರು. ಆ ಕಾರ್ಯಕ್ರಮದಲ್ಲಿ ಕನ್ನಡತಿ ರಮ್ಯಾ ಮತ್ತು ಮುಂಬೈ ಬೆಡಗಿ ಜನ್ನಿಫರ್ ತಮ್ಮ ಮಾದಕ ನೃತ್ಯಗಳಿಂದ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರು.

ಸಾಧಾರಣವಾಗಿ ಇಂಥ ಕಾರ್ಯಕ್ರಮದ ಆಯೋಜಕರು ಅದರಲ್ಲಿ ಭಾಗವಹಿಸಿದ ನಟನಟಿಯರಿಗೆ ಒಂದಿಷ್ಟು ಸಂಭಾವನೆಯನ್ನು ನೀಡುತ್ತಾರೆ. ಆದರೆ ಈ ಸಮಾರಂಭದಲ್ಲಿ ನೃತ್ಯ ಮಾಡಲು ನಟಿ ಪೂಜಾ ಗಾಂಧಿ ಕೇಳಿದ ಸಂಭಾವನೆ ಎಷ್ಟು ಗೊತ್ತೇ? ಕೇವಲ ಐದ ಲಕ್ಷ ರೂಪಾಯಿಗಳು. ಅಷ್ಟೊಂದು ದುಡ್ಡಾ ಎಂದು ಉದಯ ಚಾನೆಲ್‌ನವರ ಹುಬ್ಬೇರಿಸಿದಾಗ "ನಾನು ಈ ವಿಷಯದಲ್ಲಿ ತುಂಬಾ ಪ್ರೊಫೆಷನಲ್ ಆಗಿರುತ್ತೇನೆ, ಬೇಸರ ಮಾಡಿಕೊಳ್ಳಬೇಡಿ" ಎಂದಳಂತೆ. ಚಾನೆಲ್‌ನವರು ಸಹ "ನಾವು ಕೂಡಾ ತುಂಬಾ ಪ್ರೊಫೆಷನಲ್. ನಮಗೆ ಅಷ್ಟು ಹಣ ಕೊಡಲು ಸಾಧ್ಯವಿಲ್ಲ, ನೀವು ನೃತ್ಯ ಮಾಡದಿದ್ದರೂ ಪರವಾಗಿಲ್ಲ" ಎಂದು ಹೇಳಿ ಬಂದರಂತೆ.

ಇದೇ ಕಾರ್ಯಕ್ರಮದಲ್ಲಿ ನೃತ್ಯ ಮಾಡಲು ಕುಣಿಯುವ ಬೊಂಬೆ ಜನ್ನಿಫರ್ ಕೂಡಾ ಕೇಳಿದ್ದು ಐದು ಲಕ್ಷ ರೂಪಾಯಿ ಸಂಭಾವನೆಯಾದರೂ ಕೊನೆಗೆ ಒಂದು ಲಕ್ಷಕ್ಕೆ ಓಕೆ ಎಂದಳು. ಆಶ್ಚರ್ಯವೆಂದರೆ, ಯಾವಾಗಲೂ ಹಣ ಎಂದರೆ ಬಾಯಿ ಬಿಡುವ ರಮ್ಯಾ ಮಾತ್ರ ಈ ಬಾರಿ ಯಾವುದೇ ಸಂಭಾವನೆಯನ್ನು ಪಡೆಯದೇ ಉಚಿತವಾಗಿ ನರ್ತಿಸಿದಳಂತೆ.

ಕಲಾವಿದರು ಇಂಥ ಸಮಾರಂಭಗಳಿಗೆ ಸಂಭಾವನೆ ಕೇಳುವುದು ಖಂಡಿತವಾಗಿಯೂ ತಪ್ಪಲ್ಲ, ಆದರೆ ಅದಕ್ಕೂ ಒಂದು ಇತಿ ಮಿತಿ ಇರಬೇಕು. ಪೂಜಾ ಗಾಂಧಿ ಇಂದು ಕನ್ನಡ ಚಿತ್ರರಂಗದಲ್ಲಿ ಅತ್ಯಂತ ಬೇಡಿಕೆಯ ನಟಿಯಾಗಿರಬಹುದು. ಆದರೆ ನೃತ್ಯವೊಂದಕ್ಕೆ ಐದು ಲಕ್ಷ ರೂಪಾಯಿ ಪಡೆಯುವಷ್ಟು ಬೇಡಿಕೆಯಂತೂ ಆಕೆಗಿಲ್ಲ, ಅಷ್ಟೇ ಅಲ್ಲ, ಐದಡಿ ಎತ್ತರವೂ ಇಲ್ಲದ ಈ ದುಂಡಮ್ಮಳ ನೃತ್ಯ ಶೈಲಿ ಅಷ್ಟು ಆಕರ್ಷಕವಾಗಿಯೂ ಇಲ್ಲ!

ನಾಗಲೋಕದಲ್ಲಿ ಸಿಂಹ



ಈಗ ತಾನೆ 'ಅರಮನೆ'ಯನ್ನು ಕಟ್ಟಿ ಮುಗಿಸಿರುವ ನಿರ್ದೇಶಕ ನಾಗಶೇಖರ್ ಮತ್ತೊಂದು ಕಥೆಯನ್ನು ಹೆಣೆದಿಟ್ಟಿದ್ದಾರಂತೆ. ಅದೂ ಅಲ್ಲದೆ ಈ ಕಥೆಯನ್ನು ವಿಷ್ಣುವರ್ಧನ್ ಮತ್ತು ಗಣೇಶ್ ಇಬ್ಬರನ್ನೂ ಮನಸ್ಸಿನಲ್ಲಿಟ್ಟುಕೊಂಡು ಮಾಡಿದ್ದಾರಂತೆ. ಈ ಕಥೆಯನ್ನು ಸ್ವತಃ ವಿಷ್ಣು ಕೂಡಾ ಕೇಳಿ ಒಪ್ಪಿರುವುದರಿಂದ ಸದ್ಯದಲ್ಲೇ ಈ ಸಿನಿಮಾ ಸೆಟ್ಟೇರಲಿದೆಯಂತೆ.

ಈಗಲಾದರೂ ತನ್ನ ಹೀರೋಯಿಸಂ ಅನ್ನು ಬದಿಗೊತ್ತಿ ಗಣೇಶ್‌ನಂತ ಯುವ ನಟರೊಂದಿಗೆ ನಟಿಸಲು ಒಪ್ಪಿರುವ ಓಲ್ಡೇಜ್ ಸಿಂಹಕ್ಕೆ ಹ್ಯಾಟ್ಸ್‌ಆಫ್ ಹೇಳೋಣ. ಇದೇ ರೀತಿ ರವಿಚಂದ್ರನ್, ಉಪೇಂದ್ರ... ಎಲ್ಲರೂ ಬದಲಾದರೆ ಎಷ್ಟು ಚೆನ್ನ ಅಲ್ವಾ?

ಸರದೇಶಪಾಂಡೆಯ ಸೈಲೆಂಟ್ ಸಿನಿಮಾ

'ಆಲ್ ದಿ ಬೆಸ್ಟ್' ಮತ್ತು 'ರಾಶಿಚಕ್ರ' ಎಂಬ ಎರಡು ಹಾಸ್ಯನಾಟಕಗಳಿಂದ ಕರ್ನಾಟಕದ ಜನರನ್ನು ನಕ್ಕು ನಲಿಸಿದ ರಂಗಕಲಾವಿದ ಸರದೇಶಪಾಂಡೆ ಈಗ ನಾಟಕರಂಗದಿಂದ ಚಿತ್ರರಂಗಕ್ಕೆ ಕಾಲಿರಿಸಿದ್ದಾರೆ. ಅವರು ಯಾವಾಗ ಚಿತ್ರ ನಿರ್ದೇಶನವನ್ನು ಪ್ರಾರಂಭಿಸಿದರು, ಯಾವಾಗ ಅದನ್ನು ಮುಗಿಸಿದರು ಎಂಬಿತ್ಯಾದಿ ವಿಷಯಗಳ ಬಗ್ಗೆ ಯಾರಿಗೂ ಗೊತ್ತಿಲ್ಲವಾದರೂ ಸದ್ಯದಲ್ಲೇ ಆ ಚಿತ್ರ ಬಿಡುಗಡೆಯಾಗಲಿದೆಯಂತೆ.

'ರಾಮ ಶಾಮ ಭಾಮ' ಚಿತ್ರದಲ್ಲಿ ಸರ್ದೇಶಪಾಂಡೆ ಒಂದು ಪುಟ್ಟ ಪಾತ್ರದಲ್ಲಿ ನಟಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದ್ದರು ಮಾತ್ರವಲ್ಲ, ನಾಯಕ ನಟ ಕಮಲಹಾಸನ್‌ಗೆ 'ಗಂಡುಮೆಟ್ಟಿದ ನಾಡು ಹುಬ್ಬಳ್ಳಿ ನೆಲದ ಭಾಷೆಯನ್ನೂ ಕಲಿಸಿಕೊಟ್ಟಿದ್ದರು. ಆನಂತರ ಅಲ್ಲೊಂದು ಇಲ್ಲೊಂದು ಚಿಕ್ಕಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡರಾದರೂ ಅವ್ಯಾವೂ ಜನರ ಗಮನಕ್ಕೂ ಬಾರಲೇ ಇಲ್ಲ, ಹೀಗಾಗಿ ಈಗ ಸ್ವತಃ ಅವರೇ ಅಖಾಡಕ್ಕಿಳಿದಿದ್ದಾರೆ.

ನಾಟಕದಂತೆ ಚಿತ್ರದಲ್ಲೂ ಅವರೇ ನಾಯಕರೋ, ಅವರ ಪತ್ನಿಯೇ ನಾಯಕಿಯೋ ಗೊತ್ತಿಲ್ಲ, ಏನೇ ಇರಲಿ ಈ ಪ್ರತಿಭಾವಂತ ದಂಪತಿಗಳ ಹೊಸ ಸಾಹಸ ಗೆಲ್ಲುವಂತಾಗಲಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44